ಸಂಪುಟ: 14 Volume | ಸಂಚಿಕೆ: 28 Issue | ಪುಟಗಳು 08 Pages | ಶನಿವಾರ 02 ಮೇ 2026 | ₹4 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in
mallammanudi@gmail.com | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

**ಬೆಳಗು**

ಅನ್ಯರನ್ನು ಆಳು ಮಾಡದೆ, ತನ್ನ ತಾನಾಳಿದರೆ ಅದೇ ಬಿಡುಗಡೆ.

–ದ.ರಾ.ಬೇಂದ್ರೆ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ | ಪ್ರಧಾನ ಸಂಪಾದಕರು: ಮಾಣಿಕರೆಡ್ಡಿ, ಕೌಡಾಳೆ

# ಹಳದಿ ಆರೆಂಜ್ ಅಲರ್ಟ್

## ರಾಜ್ಯದ ಹಲವು ಜಿಲ್ಲೆಗಳಲ್ಲಿ ಭರ್ಜರಿ ವರುಣಾರ್ಭಟ | ಹವಾಮಾನ ಇಲಾಖೆ ಸೂಚನೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಬಿರು ಬೇಸಿಗೆಯ ನಡುವೆ ಮಳೆಯ ಅಬ್ಬರ ಜೋರಾಗಿದೆ. ಒಂದು ವಾರ ಕರ್ನಾಟಕ ರಾಜ್ಯದ ಹಲವು ಜಿಲ್ಲೆಗಳಿಗೆ ಹವಾಮಾನ ಇಲಾಖೆ ಮಳೆಯ ಮುನ್ಸೂಚನೆ ನೀಡಿದೆ. ಮೇ 1 ರಂದು ರಾಜ್ಯದ 5 ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಿಸಿದೆ.

**ಬಿರುಗಾಳಿ ಸಹಿತ ಮಳೆ:** 15 ಜಿಲ್ಲೆಗಳಿಗೆ ಯೆಲ್ಲೊಅಲರ್ಟ್ ನೀಡಲಾಗಿದೆ. ಚಿಕ್ಕಮಗಳೂರು, ಹಾಸನ, ಕೊಡಗು, ಮೈಸೂರು, ಚಾಮರಾಜನಗರ ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ನೀಡಲಾಗಿದೆ. ಈ ಜಿಲ್ಲೆಗಳಲ್ಲಿ ಕೆಲವೆಡೆ ಗುಡುಗು, ಬಿರುಗಾಳಿ ಸಹಿತ ಮಳೆಯಾಗುವ ಮುನ್ಸೂಚನೆಯಿದೆ.

**ಎಲ್ಲೆಡೆಯೂ ದಟ್ಟಣೆ:** ರಾಜ್ಯ ಹಲವು ಜಿಲ್ಲೆಯ ಅನೇಕ ಕಡೆ ಸಾಧಾರಣದಿಂದ, ಹಗುರ ಮಳೆಯಾಗುವ ಮುನ್ಸೂಚನೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಬೆಂಗಳೂರಿನಲ್ಲಿ ಸುರಿದ ಘೋರ ಮಳೆಗೆ ವಾಹನಗಳು ಅಂಡರ್‌ಪಾಸ್‌ಗಳ ಬದಲು ರಸ್ತೆಗಳಲ್ಲಿ ಸಂಚರಿಸುತ್ತಿದ್ದು, ಎಲ್ಲೆಡೆ ದಟ್ಟಣೆ ಹೆಚ್ಚಿದೆ.



### ಯಾವ ಜಿಲ್ಲೆಗೆ ಯೆಲ್ಲೊ?

ಕಲಬುರಗಿ, ಯಾದಗಿರಿ, ರಾಯಚೂರು, ಬಳ್ಳಾರಿ, ವಿಜಯನಗರ, ದಾವಣಗೆರೆ, ದಕ್ಷಿಣ ಕನ್ನಡ, ತುಮಕೂರು, ಮಂಡ್ಯ, ಬೆಂಗಳೂರು ದಕ್ಷಿಣ, ಬೆಂಗಳೂರು ನಗರ ಹಾಗೂ ಕೋಲಾರ ಜಿಲ್ಲೆಗಳಿಗೆ ಯೆಲ್ಲೊಅಲರ್ಟ್ ಘೋಷಿಸಲಾಗಿದೆ. ಉತ್ತರ ಒಳನಾಡಿನ ಕೆಲ ಜಿಲ್ಲೆಗಳು ಹಾಗೂ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಶುಷ್ಕ ವಾತಾವರಣ ಮುಂದುವರಿಯಲಿದೆ.

### ಆಲಿಕಲ್ಲು ಮಳೆ ಸಾಧ್ಯತೆ

ಅಲರ್ಟ್ ಘೋಷಿಸಿರುವ ಜಿಲ್ಲೆಗಳ ಕೆಲವೆಡೆ ಆಲಿಕಲ್ಲು ಮಳೆಯಾಗುವ ಸಾಧ್ಯತೆಯಿದ್ದು, ಮೇ 7ರವರೆಗೆ ಮಳೆಯಾಗುವ ಮುನ್ಸೂಚನೆ ನೀಡಲಾಗಿದೆ. ಮೇ 1 ರಿಂದ ಒಂದು ವಾರ ಕಾಲ ರಾಜ್ಯದ ಕೆಲವೆಡೆ ಗುಡುಗು ಸಹಿತ ಮಳೆಯಾಗುವ ಜತೆಗೆ, ಒಣಹವೆ ಮುಂದುವರಿಯಲಿದೆ. ಆದರೆ ತಗ್ಗು ಪ್ರದೇಶದ ಜನ ಎಚ್ಚರ ಎಂದು ಹವಾಮಾನ ಇಲಾಖೆ ತಿಳಿಸಿದೆ.

### ಕೇರಳದವರ ದುರಂತ

ಕೇರಳದ ಕುಡಂಬಶ್ರೀ ಸ್ವಸಹಾಯ ಸಂಘದ ಸದಸ್ಯೆಯರಾದ ಲತಾ (57) ಮತ್ತು ಸ್ಮಿತಾ (47) ಅವರು ತಮ್ಮ ಬಹುಕಾಲದ ಕನಸನ್ನು ನೆರವೇರಿಸಿಕೊಳ್ಳಲು ವಿಮಾನದಲ್ಲಿ ಪ್ರಯಾಣ ಮಾಡಿದ್ದರು. ಹೊಸ ಅನುಭವ, ಪ್ರವಾಸದ ಮೇಲಿದ್ದ ಆಸಕ್ತಿ ಅವರು ಬೆಂಗಳೂರಿಗೆ ಭೇಟಿ ನೀಡುವಂತೆ ಮಾಡಿತ್ತು. ಆದರೆ, ಆ ಸಂತೋಷ ಇದೀಗ ಬೆಂಗಳೂರ ಮಳೆಯಲ್ಲಿ ದುರಂತ ಅಂತ್ಯ ಕಂಡಿದೆ.

### ದೂರುಗಳ ಮಹಾಪೂರ

ಮಳೆ ಅನಾಹುತಗಳ ಸಂಬಂಧ ದೂರುಗಳ ಮಹಾಪೂರವೇ ಹರಿದು ಬಂದಿದ್ದು, ಜಿಬಿಎ, ಬೆಸ್ಕಾಂ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಸಿಬ್ಬಂದಿಯು ಮಳೆ ಬಾಧಿತ ಪ್ರದೇಶಗಳಲ್ಲಿ ಸಮರೋಪಾದಿಯಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಸಾಕಷ್ಟು ಅಂಡರ್‌ಪಾಸ್‌ಗಳಲ್ಲಿ ಮಳೆ ನೀರು ಕೆರೆಯಂತೆ ನಿಂತಿದ್ದು, ವಾಹನ ಸಂಚಾರಕ್ಕೆ ತೀವ್ರ ಸಮಸ್ಯೆಯಾಗಿದೆ.

### ಮಳೆಗೆ ರಾಜಧಾನಿ ತತ್ತರ

ಪೂರ್ವ ಮುಂಗಾರು ಮಳೆಗೆ ಅಸ್ತವ್ಯಸ್ತವಾಗಿರುವ ಬೆಂಗಳೂರು ಜನಜೀವನ ಇನ್ನೂ ಸಹಜ ಸ್ಥಿತಿಗೆ ಮರಳಿಲ್ಲ. ಅಂಡರ್‌ಪಾಸ್ ಹಾಗೂ ಕಟ್ಟಡಗಳು ಜಲಾವೃತವಾಗಿವೆ. ಮಳೆ ನೀರಿನ ತೆರವು ಕಾರ್ಯಾಚರಣೆ ಭರದಿಂದ ಸಾಗಿದೆ. ಪ್ರಮುಖ ರಸ್ತೆಗಳೂ ಸೇರಿದಂತೆ ಬಡಾವಣೆಗಳಲ್ಲಿ ಮರಗಳು ಹಾಗೂ ರೆಂಬೆ ಕೊಂಬೆಗಳು ರಸ್ತೆಗೆ ಉರುಳಿ ಬಿದ್ದಿದ್ದು, ವಾಹನ ಸಂಚಾರಕ್ಕೆ ತೊಡಕಾಗಿದೆ.



ಕೆಪಿಸಿಸಿ ಕಚೇರಿ ಭಾರತ್ ಜೋಡೋ ಭವನದಲ್ಲಿ ಶುಕ್ರವಾರ ನಡೆದ ಕಾರ್ಮಿಕರ ದಿನಾಚರಣೆ ಕಾರ್ಯಕ್ರಮದಲ್ಲಿ ಡಿಸಿಎಂ ಡಿ ಕೆ ಶಿವಕುಮಾರ್ ಅವರು ಮಾತನಾಡಿದರು. ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ ಕೆ ಶಿವಕುಮಾರ್, ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ ಸಿ ಚಂದ್ರಶೇಖರ್, ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಮ್ ಅಹ್ಮದ್, ರಾಜ್ಯ ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ಹೆಚ್.ಎಂ ರೇವಣ್ಣ, ಕೆಪಿಸಿಸಿ ಕಾರ್ಮಿಕ ಘಟಕದ ಅಧ್ಯಕ್ಷ ಪುಟ್ಟಸ್ವಾಮಿಗೌಡ, ಯುವ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್ ಗೌಡ ಮತ್ತಿತರರು ಉಪಸ್ಥಿತರಿದ್ದರು.

### ಎಲ್‌ಪಿಜಿ ಸಿಲಿಂಡರ್ ದರ ಹೆಚ್ಚಳ

**ನವದೆಹಲಿ:** ಇರಾನ್–ಇಸ್ರೇಲ್ ಬಿಕ್ಕಟ್ಟಿನ ಬಳಿಕ ಭಾರತದಲ್ಲಿ ಎಲ್ಪಿಜಿ ಸಿಲಿಂಡರ್ ಸಿಗೋದೇ ಕಷ್ಟ ಕಷ್ಟವಾಗುತ್ತಿದೆ. ಇದರ ನಡುವೆಯೇ ಜನಸಾಮಾನ್ಯರಿಗೆ ಮತ್ತೊಂದು ಹೊರೆ ಎನ್ನುವಂತೆ ಮೇ 1ರಿಂದ ವಾಣಿಜ್ಯ ಅನಿಲ ಸಿಲಿಂಡರ್ ಬೆಲೆ ಏರಿಕೆಯಾಗಿದೆ. ಮೇ 1 ರಿಂದ ಜಾರಿಗೆ ಬರುವಂತೆ ವಾಣಿಜ್ಯ ಸಿಲಿಂಡರ್ ಬೆಲೆಯನ್ನು 993 ರಷ್ಟು ಹೆಚ್ಚಿಸಲಾಗಿದೆ. ಬೆಂಗಳೂರು, ದೆಹಲಿಯಲ್ಲಿ 19 ಕೆಜಿ ವಾಣಿಜ್ಯ ಸಿಲಿಂಡರ್ ಬೆಲೆ ರೂ.3,071.50 ತಲುಪಿದೆ.



ಬೆಂಗಳೂರಿನಲ್ಲಿರುವ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠಕ್ಕೆ ಭೇಟಿ ನೀಡಿದ ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಅವರು, ಪರಮಪೂಜ್ಯ ಜಗದ್ಗುರು ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಗಳ ಆಶೀರ್ವಾದ ಪಡೆದರು. ಇದೇ ಮೇ 9 ರಂದು ಚಿತ್ರದುರ್ಗದಲ್ಲಿ ನಡೆಯಲಿರುವ, ಮಾಜಿ ಮುಖ್ಯಮಂತ್ರಿ "ಬಿ.ಎಸ್. ಯಡಿಯೂರಪ್ಪ ಅಭಿಮಾನೋತ್ಸವ" ಕಾರ್ಯಕ್ರಮಕ್ಕೆ ಪೂಜ್ಯ ಶ್ರೀಗಳನ್ನು ಭಕ್ತಿಪೂರ್ವಕವಾಗಿ ಆಮಂತ್ರಿಸಿದರು.

### ಆಟೊ ಚಾಲಕರಿಗೆ ಶಾಕ್

**ಬೆಂಗಳೂರು:** ದಿನನಿತ್ಯ ಜೀವನ ಸಾಗಿಸುವ ಆಟೊ ಚಾಲಕರಿಗೆ ಮತ್ತೊಂದು ಶಾಕ್ ಎದುರಾಗಿದೆ. ಇಂದಿನಿಂದ ಆಟೋ ಎಲ್ಪಿಜಿ ದರದಲ್ಲಿ 5 ರೂ. 73 ಪೈಸೆ ಏರಿಕೆ ಆಗಿದ್ದು, ಚಾಲಕರ ಖರ್ಚು ಮತ್ತಷ್ಟು ಹೆಚ್ಚಾಗಿದೆ. ನಿನ್ನೆವರೆಗೆ ಲೀಟರ್‌ಗೆ 89.35 ರೂಪಾಯಿ ಇದ್ದ ಆಟೋ ಎಲ್ಪಿಜಿ ದರ, ಇಂದಿನಿಂದ 95.08 ರೂಪಾಯಿಗೆ ಏರಿಕೆಯಾಗಿದೆ. ಈ ದರ ಏರಿಕೆ ಸರ್ಕಾರದ ನಿಯಂತ್ರಣದಲ್ಲಿರುವ ಆಟೋ ಎಲ್ಪಿಜಿ ಬಂಕ್‌ಗಳಲ್ಲಿ ಅನ್ವಯವಾಗಿದ್ದು, ಚಾಲಕರು ಹೆಚ್ಚಿನ ವೆಚ್ಚವನ್ನು ಭರಿಸಬೇಕಾದ ಪರಿಸ್ಥಿತಿ ಎದುರಾಗಿದೆ.

## ಡೆಡ್‌ಲೈನ್ ಕೊಟ್ಟವರು ಯಾರು..?

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ




ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಬಗ್ಗೆ ನಾಯಕರು ತಮ್ಮ ಅಭಿಪ್ರಾಯಗಳನ್ನು ಹೇಳುತ್ತಾರೆ, ಆದರೆ ಏನೇ ತೀರ್ಮಾನವಾಗುವುದಿದ್ದರೂ ಹೈಕಮಾಂಡ್‌ಗೆ ಬಿಟ್ಟಿದ್ದು, ಅವರ ತೀರ್ಮಾನವೇ ಅಂತಿಮ ಎಂದು ಸಚಿವ ಎನ್‌ಎಸ್ ಬೋಸರಾಜು ತಿಳಿಸಿದ್ದಾರೆ.

ವರದಿಗಾರರ ಜೊತೆ ಮಾತನಾಡಿ, ನಾಯಕರು ಏನೇ ಅಭಿಪ್ರಾಯಗಳನ್ನು ಹೇಳಿದರೂ ತೀರ್ಮಾನವಾಗುವುದು ದೆಹಲಿಯಲ್ಲಿ, ಹೈಕಮಾಂಡ್ ತೀರ್ಮಾನಕ್ಕೆ ಬದ್ಧರಾಗಿರಬೇಕು ಎಂದು ತಾಕೀತು ಮಾಡಿದ್ದಾರೆ. ಮೇ 10ಕ್ಕೆ ನಾಯಕತ್ವ ಬದಲಾವಣೆಗೆ ಡೆಡ್‌ಲೈನ್ ನೀಡಲಾಗಿದೆ ಎಂಬ ವದಂತಿ ಬಗ್ಗೆ ಕೇಳಿದಾಗ, ಯಾರು ಹೇಳಿದರು ನಿಮಗೆ ಎಂದು ಕೇಳಿದ್ದಾರೆ. ಮೇ 15ಕ್ಕೆ ಡಿಕೆಶಿವಕುಮಾರ್ ಬರ್ತ್‌ಡೇ ಮುನ್ನ ತೀರ್ಮಾನವಾಗಬೇಕೆಂದಾಗಿದೆಯಂತಲ್ಲವೇ ಎಂದು ಕೇಳಿದಾಗ, ಬರ್ತ್‌ಡೇಗಳು ಬರುತ್ತವೆ, ಹೋಗುತ್ತವೆ. ಅವರ ಬರ್ತ್‌ಡೇಗೂ ನಾಯಕತ್ವ ಬದಲಾವಣೆಗೆ ಸಂಬಂಧವಿಲ್ಲ ಎಂದಿದ್ದಾರೆ.












## ಬಂದಾನವಾಜ್ ಉರುಸ್: ವಿಶೇಷ ರೈಲು

• ಮಲ್ಲಮ್ಮ ನುಡಿ ವಾರ್ತೆ ಕಲ್ಬುರ್ಗಿ

ಮೇ 2,3,4 ರಂದು ನಗರದ ಐತಿಹಾಸಿಕ ಹಜರತ್ ಖ್ವಾಜಾ ಬಂದಾ ನವಾಜ್ (ರಹ್) ಅವರ 622ನೇ ಉರುಸ್ ಅಂಗವಾಗಿ ವಿಶೇಷ ರೈಲುಗಳ ವ್ಯವಸ್ಥೆಯನ್ನು ಮಾಡಲಾಗಿದೆ. ಜಗತ್ತಿನ ವಿವಿಧ ಭಾಗಗಳಿಂದ ಭಕ್ತರ ಆಗಮನದ ಹಿನ್ನೆಲೆಯಲ್ಲಿ ಅವರ ಅನುಕೂಲಕ್ಕಾಗಿ ಹೆಚ್ಚುವರಿ ರೈಲುಗಳ ವ್ಯವಸ್ಥೆ ಮಾಡಲಾಗಿದೆ ಎಂದು ದಕ್ಷಿಣ ಕೇಂದ್ರೀಯ ರೈಲ್ವೆ ತಿಳಿಸಿದೆ. ಟ್ರೈನ್ ನಂಬರ್ 07177 ಮೇ 2 ಮತ್ತು 5 ರಂದು ಹೈದರಾಬಾದ್ ನಿಂದ 11.55 ಕ್ಕೆ ಹೊರಟು ಬೇಗಂ ಪೆತ್, ಸನತ್ ನಗರ, ಹಾಫಿಝುಪೇಟ, ಲಿಂಗಪಲ್ಲಿ, ಶಂಕರ್‌ಪಲ್ಲಿ, ವಿಕಾರಾಬಾದ್, ತಾಂಡೂರ್, ಸೇಡಂ, ಮಲಖೈಡ್, ಚಿತ್ತಾಪುರ, ವಾಡಿ ಮಾರ್ಗವಾಗಿ ಕಲಬುರ್ಗಿ ತಲುಪಲಿದೆ. ಟ್ರೈನ್ ನಂಬರ್ 07178 ಮೇ 3 ಮತ್ತು 6 ರಂದು ಕಲಬುರ್ಗಿ ಯಿಂದ ಅದೇ ಮಾರ್ಗವಾಗಿ ಹೈದರಾಬಾದ್ ಚಲಿಸುವುದು



**ಕಾರ್ಮಿಕರು ದೇಶದ ಆರ್ಥಿಕ ಸಾಮಾಜಿಕ, ಅಭಿವೃದ್ಧಿಯ ಶಿಲ್ಪಿಗಳು: ಸಿದ್ದರಾಮಯ್ಯ, ಮುಖ್ಯಮಂತ್ರಿ**

# ತೋಟಗಾರಿಕೆ ಮಹಾವಿದ್ಯಾಲಯದಲ್ಲಿ ಅಂತಾರಾಷ್ಟ್ರೀಯ ಕಾರ್ಮಿಕರ ದಿನಾಚರಣೆ



• ಮಲ್ಲಮ್ಮ ನುಡಿ ವಾರ್ತೆ
ಬೀದರ

ಮೇ.01:–ಬೀದರ ತೋಟಗಾರಿಕೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕದಿಂದ ಶುಕ್ರವಾರ ಅಂತರಾಷ್ಟ್ರೀಯ ಕಾರ್ಮಿಕರ ದಿನಾಚರಣೆಯನ್ನು ಕಾಲೇಜಿನಲ್ಲಿ ಆಚರಿಸಲಾಯಿತು.

ಕಾಲೇಜಿನಡೀನ್‌ಡಾ.ಎಸ್.ವಿ.ಪಾಟೀಲ್ ಅಧ್ಯಕ್ಷತೆವಹಿಸಿ ಮಾತನಾಡಿ,ಸಮಾಜದ ಅಭಿವೃದ್ಧಿಗೆಕಾರ್ಮಿಕರಕೊಡುಗೆಅತೀ ಮಹತ್ತರ. ಪ್ರತಿಯೊಬ್ಬ ಕಾರ್ಮಿಕರ ಶ್ರಮದ ಮೌಲ್ಯವನ್ನು ಅರಿತು ಗೌರವಿಸಬೇಕು. ಕಾರ್ಮಿಕರ ಶ್ರಮ ಗೌರವಿಸುವ ಹಾಗೂ ವಿದ್ಯಾರ್ಥಿಗಳಲ್ಲಿ ಶ್ರಮದ ಮಹತ್ವದ ಬಗ್ಗೆ ಜಾಗೃತಿ, ಸಾಮಾಜಿಕ ಜವಾಬ್ದಾರಿಯ ಅರಿವು ಮೂಡಿಸುವ ಉದ್ದೇಶದಿಂದ ಇಂತಹ ಕಾರ್ಯಕ್ರಮವನ್ನು ಆಚರಿಸಲಾಗುತ್ತಿದೆ ಎಂದು ಹೇಳಿದರು.


ಅವರು ಕಾರ್ಮಿಕರ ಹಕ್ಕು ಮತ್ತು ಕರ್ತವ್ಯಗಳು ಹಾಗೂ ಅವರ ಕಲ್ಯಾಣಕ್ಕಾಗಿ ಸರ್ಕಾರ ಕೈಗೊಂಡಿರುವ ವಿವಿಧ ಯೋಜನೆಗಳ ಬಗ್ಗೆ ಮಾಹಿತಿಯನ್ನು ನೀಡಿದರು. ಎಲ್ಲ ಕಾರ್ಮಿಕರು ತಮ್ಮ ತಮ್ಮ ಕ್ಷೇತ್ರದಲ್ಲಿ ಅಚ್ಚುಕಟ್ಟಾಗಿ ಕಾರ್ಯನಿರ್ವಹಿಸುವ ಮೂಲಕ "ಶ್ರಮವೇ ದೇವರು" ಎಂಬ ಸಂದೇಶವನ್ನು ಸಾರುತ್ತಿದ್ದಾರೆಂದು ಅಭಿಪ್ರಾಯಪಟ್ಟರು.

ವಿದ್ಯಾರ್ಥಿನಿಯಾದ ಕು.ಮಧುಮತಿ ಮಾತನಾಡಿ,ಯಾವುದೇ ಕೆಲಸ ಮೇಲು, ಕೀಳಲ್ಲ. ಎಲ್ಲಾ ಕೆಲಸಗಳು ಸಮಾನವಾಗಿವೆ. ಪ್ರತಿಯೊಂದು ಕೆಲಸಕ್ಕೆ ತನ್ನದೇಯಾದ ಘನತೆ ಮತ್ತು ಮಹತ್ವವಿರುವ ಪ್ರಯುಕ್ತ ಪ್ರತಿ ಕೆಲಸವನ್ನು ಗೌರವಿಸಬೇಕೆಂದರು.

ಕಾಲೇಜಿನಡೀನ್‌ಡಾ.ಎಸ್.ವಿ.ಪಾಟೀಲ್, ಸಿಬ್ಬಂದಿಗಳಾದಡಾ.ವಿಜಯಮಹಾಂತೇಶ, ಡಾ.ಎಸ್. ಎಮ್.ಪ್ರಸನ್ನ ಮತ್ತು ಶ್ರೀ. ಆಂಜನೇಯ ಎನ್. ಮತ್ತಿತರರು ಶ್ರಮಜೀವಿಕಾರ್ಮಿಕರನ್ನು ಸನ್ಮಾನಿಸಿದರು. ಡಾ.ಶ್ರೀನಿವಾಸ ಎನ್. ಡಾ.ಅರವಿಂದ ರಾಠೋಡ, ಮತ್ತಿತರರು ಹಾಜರಿದ್ದರು. ಎನ್.ಎಸ್.ಎಸ್.ಅಧಿಕಾರಿ ಡಾ. ವಿಜಯಮಹಾಂತೇಶ,ಕಾರ್ಯಕ್ರಮದ ನೇತೃತ್ವ ವಹಿಸಿದರು.ವಿದ್ಯಾರ್ಥಿನಿ ಕು. ಸಾನಿಯಾ ಸ್ವಾಗತಿಸಿದರು.

# ಬ್ಯಾನರ್ ಗಲಾಟೆ ಆರೋಪಿಗಳ ವಿಚಾರಣೆ ನೋಟೀಸ್ ಜಾರಿ ಮಾಡಿದ ಸಿಐಡಿ

• ಮಲ್ಲಮ್ಮ ನುಡಿ ವಾರ್ತೆ
ಬಳ್ಳಾರಿ



ಮೇ.1: ಕಳೆದ ಜನವರಿ 1 ರಂದು ನಗರದಲ್ಲಿ ಮಹರ್ಷಿ ವಾಲ್ಮೀಕಿ ಪುತ್ಥಳಿ ಅನಾವಣಕ್ಕೆ ಬ್ಯಾನರ್ ಅಳವಡಿಕೆ ಸಂಬಂಧ ಜರುಗಿದ ಗಲಾಟೆ, ಫೈ–ರಿಂಗ್ ಪ್ರಕರಣದ ತನಿಖೆಯನ್ನು ಸಂಬಂಧಿಸಿ ಮೂರು ತಿಂಗಳ ಬಳಿಕ ಸಿಐಡಿ ಚುರುಕುಗೊಳಿಸಿದೆ.

ಕಳೆದ ನಾಲ್ಕು ದಿನಗಳಿಂದ ನಗರದಲ್ಲಿ ಬೀಡು ಬಿಟ್ಟಿರುವ ತಂಡ ಡಿವೈಎಸ್ಪಿ ಅಂಜನ್ ಕುಮಾರ್ ನೇತೃತ್ವದ ಸಿಐಡಿ ಅಧಿಕಾರಿಗಳ ತಂಡ. ಪ್ರಕರಣದ ಆರೋಪಿಗಳನ್ನು ನಗರದ ಗೆಸ್ಟ್ ಹೌಸ್ ನಲ್ಲಿ ವಿಚಾರಣೆ ನಡೆಸಿದೆ.ಬಲ್ಲ ಮೂಲಗಳ ಪ್ರಕಾರ ಈ ಮೊದಲು ಬೆಂಗಳೂರಿಗೆ ಬರುವಂತೆ ಮಾಜಿ ಸಚಿವ ಗಂಗಾವತಿ ಶಾಸಕ ಜನಾರ್ಧನರೆಡ್ಡಿ ಕಡೆಯ ಬಿಜೆಪಿ ಬೆಂಬಲಿತ ಆರೋಪಿಗಳಿಗೆ ನೋಟೀಸ್ ನೀಡಿತ್ತು. ಆಗ ಕೆಲವರು ಹೋಗಿ ತಮ್ಮ ಹೇಳಿಕೆ ದಾಖಲಿಸಿದ್ದರು.ಆಗ ಹೋಗದವರನ್ನು ತಂಡ ಈಗ ಇಲ್ಲಿ ವಿಚಾರಣೆ ನಡೆಸಿ ಹೇಳಿಕೆ ದಾಖಲಿಸಿಕೊಂಡಿದೆಯಂತೆ. ನಂತರ ನ್ಯಾಯಾಲಯಕ್ಕೆ ವಿಚಾರಣೆಗೆ ಬರಬೇಕಾಗುತ್ತದೆಂದು ಹೇಳಿ ಕಳುಹಿಸಿದೆಯಂತೆ.

ಇನ್ನು ಮತ್ತೊಂದು ಕಡೆ ನಗರದ ಶಾಸಕ ಭರತ್ ರೆಡ್ಡಿ ಕಡೆಯ ಕಾಂಗ್ರೆಸ್ ಬೆಂಬಲಿತ 20 ಕ್ಕೂ ಹೆಚ್ಚು ಜನರಿಗೆ ನಗರದ ಎಂ.ಆರ್.ವಿ.ಲೇಔಟ್ ನಲ್ಲಿರುವ ಆರೋಪಿಯ ಮನೆಗೆ ಕರೆದು ನೋಟೀಸ್ ನೀಡಿ. ಮೇ.11 ರಂದು ಬೆಂಗಳೂರಿಗೆ ಬಂದು ಹೇಳಿಕೆ ನೀಡುವಂತೆ ಹೇಳಿದೆಯಂತೆ.

ಒಟ್ಟಾರೆ ಬ್ಯಾನರ್ ಗಲಾಟೆ ಫೈರಿಂಗ್ ಪ್ರಕರಣಕ್ಕೆ ಸಂಬಂಧಿಸಿ ಸದ್ಯದಲ್ಲೇ ಚಾರ್ಜ್ ಶೀಟ್ ಸಲ್ಲಿಸಲು ಸಿಐಡಿ ರೆಡಿಯಾಗುತ್ತಿದೆಯಂತೆ

# ಕಳಕಿ ಹೊತ್ತೊಯ್ಯುತ್ತಿದ್ದ ಲಾರಿಗೆ ಬೆಂಕಿ; ತಪ್ಪಿದ ಅನಾಹುತ



• ಮಲ್ಲಮ್ಮ ನುಡಿ ವಾರ್ತೆ
ಭಾಲ್ಕಿ

ಮೇ.1:ತಾಲ್ಲೂಕಿನ ಹಾಲಹಳ್ಳಿ(ಕೆ) ಸಮೀಪ ಗುರುವಾರ ತೆಲಂಗಾಣಕ್ಕೆ ಕಳಕಿ ಹೊತ್ತೊಯ್ಯುತ್ತಿದ್ದ ಲಾರಿಗೆ ವಿದ್ಯುತ್ ಕಂಬಗಳ ತಂತಿ ತಗಲಿದ ಪರಿಣಾಮ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ನಿಂದ ಬೆಂಕಿ ತಗುಲಿದೆ.

ಕಳಕಿಗೆ ಬೆಂಕಿ ಹೊತ್ತಿಕೊಂಡ ವಿಷಯವನ್ನು ಲಾರಿ ಚಾಲಕನಿಗೆ ಪ್ರತ್ಯಕ್ಷದರ್ಶಿಗಳು ಮತ್ತು ಲಾರಿಯ ಹಿಂದುಗಡೆ ಬರುತ್ತಿದ್ದ ವಾಹನ ಚಾಲಕರು, ಬೈಕ್ ಸವಾರರು ಮಾಹಿತಿ ನೀಡಿದ್ದಾರೆ. ತಕ್ಷಣವೇ ಎಚ್ಚೆತ್ತುಕೊಂಡ ಚಾಲಕ ಲಾರಿಯನ್ನು ರಸ್ತೆ ಪಕ್ಕಕ್ಕೆ ನಿಲ್ಲಿಸಿದ್ದಾನೆ. ನಂತರ ಜೆಸಿಬಿ ಸಹಾಯದಿಂದ ಲಾರಿಯಲ್ಲಿದ್ದ ಜೋಳದ ಕಳಕಿಯನ್ನು ಲಾರಿಯಿಂದ ಹೊರ ತೆಗೆಯಲಾಯಿತು. ಈ ದುರ್ಘಟನೆಯಲ್ಲಿ ಯಾವುದೇ ಜೀವ ಹಾನಿ ಸಂಭವಿಸಿಲ್ಲ. ಲಾರಿಯ ಕೆಲ ಭಾಗ ಸುಟ್ಟಿವೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಈ ಮಾಹಿತಿಯನ್ನು ಅರಿತು ಕೂಡಲೇ ಸ್ಥಳಕ್ಕೆ ಆಗಮಿಸಿದ ಬೀದರ್ ಅಗ್ನಿಶಾಮಕ ಠಾಣಾಧಿಕಾರಿ ನವೀನ ಮತ್ತು ಸಿಬ್ಬಂದಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ.



ಬೀದರ:ಜಿಲ್ಲಾಧಿಕಾರಿಗಳ ಕಛೇರಿಯಲ್ಲಿಂದು ಭಗವಾನ್ ಬುದ್ಧರ 2570 ನೇ ಜಯಂತ್ಯೋತ್ಸವ ಅಂಗವಾಗಿ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಭಗವಾನ್ ಬುದ್ಧರ ಭಾವಚಿತ್ರಕ್ಕೆ ಮಾಲಾರ್ಪಣೆ ಮತ್ತು ಪುಷ್ಪಾರ್ಪಣೆ ಮಾಡಿದರು.ಈ ಸಂದರ್ಭದಲ್ಲಿ ಪೂಜ್ಯ ಭಂತೆ ಜ್ಞಾನ ಸಾಗರ ರವರು ತ್ರಿಶರಣ ಪಂಚಶೀಲ ನಡೆಸಿಕೊಟ್ಟರು, ರಾಜಪ್ಪಾ ಗೂನ್ನಳ್ಳಿಕರ್, ಮಹೇಶ ಗೋರನಾಳಕರ್, ಶಿವಕುಮಾರ ನಿಲಿಕಟ್ಟಿ, ವಿನಯಕುಮಾರ ಮಾಳಗೆ, ವಿಜಯಕುಮಾರ ಸೋನಾರೆ, ಬಾಬು ಆಣದೂರೆ, ರಾಜಕುಮಾರ ಗಾದಗಿ, ಪ್ರಸನ್ನ ಡಾಂಗೆ, ಜಗದೀಶ್ವರ ಬಿರಾದರ, ಸಂದೀಪ್ ಕಾಂಟೆ, ಶರಣು ಫುಲೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಿದ್ರಾಮ ಶಿಂದೆ, ಚುನಾವಣೆ ತಹಶಿಲ್ದಾರ ಮಲಶೇಟ್ಟಿ ಚಿದ್ರಿ, ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿ ಸುಭಾಷ ರತ್ನಾಕರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ತಾಲೂಕು ವಕೀಲರ ಸಂಘದ ಚುನಾವಣೆ - ವಾಗೇಶ್ ಪಾಟೀಲ್ ಕಾರ್ಯದರ್ಶಿ, ನೀಲಕಂಠ ಬಿರಾದಾರ ಜಂಟಿ ಕಾರ್ಯದರ್ಶಿಯಾಗಿ ಅವಿರೋಧ ಆಯ್ಕೆ

# ಮಹೇಶ್ ರಾಚೋಟೆ ಅಧ್ಯಕ್ಷ, ಮಕ್ರಂದ ಮಾನಕಾರಿ ಉಪಾಧ್ಯಕ್ಷ

ಮಲ್ಲಮ್ಮ ನುಡಿವಾರ್ತೆಭಾಲ್ಕಿಮೇ.1: ತಾಲೂಕು ವಕೀಲರ ಸಂಘದ ನೂತನ ಅಧ್ಯಕ್ಷರಾಗಿ ಮಹೇಶ ರಾಚೋಟೆ ಆಯ್ಕೆಯಾಗಿದ್ದಾ–ರೆ. ಉಪಾಧ್ಯಕ್ಷರಾಗಿ ಮಕ್ರಂದ ಮಾನಕಾರಿ,ಕಾರ್ಯದರ್ಶಿಯಾಗಿ ವಾಗೇಶ ಪಾಟೀಲ್ ಮತ್ತು ಜಂಟಿ ಕಾರ್ಯದರ್ಶಿಯಾಗಿ ನೀಲಕಂಠ ಬಿರಾದಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿಗಳಾದ ನಾಗನ್ನಾಥ ಸ್ವಾಮಿ, ದೇವೀಂದ್ರ ಶಿಂಧೆ ತಿಳಿಸಿದ್ದಾರೆ.



> ❝ ಮುಂದಿನ ಒಂದು ವರ್ಷದ ಅವಧಿಯಲ್ಲಿ ಎಲ್ಲ ಪದಾಧಿಕಾರಿಗಳು, ನ್ಯಾಯವಾದಿಗಳನ್ನು ವಿಶ್ವಾಸಕ್ಕೆ ಪಡೆದು ಮಾದರಿ ಕೆಲಸ ಮಾಡುವ ಪ್ರಯತ್ನ ಮಾಡುತ್ತೇನೆ.ನನ್ನನ್ನು ವಿಶ್ವಾಸವಿಟ್ಟು ಗೆಲ್ಲಿಸಿದ ಹಿರಿಯ, ಯುವ ನ್ಯಾಯವಾದಿಗಳಿಗೆ ಕೃತಜ್ಞತೆ ಸಲ್ಲಿಸುತ್ತೇನೆ.
>
> – ಮಹೇಶ್ ರಾಚೋಟೆ
> ನೂತನ ಅಧ್ಯಕ್ಷರು
> ವಕೀಲರ ಸಂಘ ಭಾಲ್ಕಿ

ಪಟ್ಟಣದ ಜೆಎಂಎಫ್‌ಸಿ ನ್ಯಾಯಾಲಯದ ಆವರಣದ ತಾಲೂಕು ವಕೀಲರ ಸಂಘದ ಕಚೇರಿಯಲ್ಲಿ ಗುರುವಾರ ಚುನಾವಣೆ ನಡೆಯಿತು.

ಅಧ್ಯಕ್ಷ ಸ್ಥಾನಕ್ಕೆ ಮಾತ್ರ ಚುನಾವಣೆ ನಡೆಯಿತು. ಉಳಿದ ಸ್ಥಾನಗಳು ಅವಿರೋಧವಾಗಿ ಆಯ್ಕೆಯಾದವು.

ಅಧ್ಯಕ್ಷ ಸ್ಥಾನಕ್ಕೆ ನ್ಯಾಯವಾದಿ ಮಹೇಶ ರಾಚೋಟೆ, ಸಂಗಶೆಟ್ಟಿ ಪಾಟೀಲ್, ರವೀಂದ್ರ ಮೇತ್ರೆ ನಾಮಪತ್ರ ಸಲ್ಲಿಸಿದರು. ಒಟ್ಟು 167 ಮತಗಳ ಪೈಕಿ 163 ಮತಗಳು ಚಲಾವಣೆಗೊಂಡವು. ಮಹೇಶ್ ರಾಚೋಟೆ ಅವರು 79 ಮತಗಳು ಪಡೆದು ಸಂಗಶೆಟ್ಟಿ ಪಾಟೀಲ್ ವಿರುದ್ಧ 6 ಮತಗಳ ಅಂತರದಿಂದ ಭರ್ಜರಿ ಗೆಲುವು ಸಾಧಿಸಿದರು.

ಈ ಸಂದರ್ಭದಲ್ಲಿ ಹಿರಿಯ ನ್ಯಾಯವಾದಿಗಳಾದ ಎನ್.ಬಿ.ಪಾಟೀಲ್, ವೆಂಕಟರಾವ ಭೋರಾಳೆ, ಸಂಜಯ ನಾಯಕ, ಪ್ರಭಾಕರ ಹಾಳೆ, ಮಹೇಶ ಪರಸಣ್ಣೆ, ಮಹೇಶ ಹೊಸಾಳೆ, ಶಿವಕುಮಾರ ಮಾನಕಾರಿ, ಶಿವಕುಮಾರ ಚಳಕಾಪುರೆ, ದಯಾನಂದ ಪವಾರ್, ಶ್ರೀನಿವಾಸ ಮುದಾಳೆ, ನವಾಜ್, ಸಾರಂಗ, ಹಡಪದ, ಪಾಂಡುರಂಗ, ತುಕಾರಾಮ, ಶಿವಕುಮಾರ ಸಂಗೋಳಗೆ, ಪದ್ಮಾಕರ ಮಲ್ಲೇಶಿ, ತಾನಾಜೀ ಸೇರಿದಂತೆ ಹಲವರು ಇದ್ದರು.

# ಎಐಯುಟಿಯುಸಿಯಿಂದ ನಗರದಲ್ಲಿ 140ನೇ ಅಂತಾರಾಷ್ಟ್ರೀಯ ಕಾರ್ಮಿಕರ ದಿನಾಚರಣೆ




ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಮೇ.1:ಕಾರ್ಮಿಕ ದಿನಾಚರಣೆ ಅಂಗವಾಗಿ ಇಂದು ಎಐಯುಟಿ–ಯುಸಿ ಸಂಘಟನೆಯಿಂದ ಮೆರವಣಿಗೆ ಹಾಗೂ ಗಾಂಧಿ ಭವನದಲ್ಲಿ ಸಭೆ ಹಮ್ಮಿಕೊಳ್ಳಲಾಗಿತ್ತು.

ನೂರಾರು ಕಾರ್ಮಿಕರು ಮೆರವಣಿಯುದ್ಧಕ್ಕೂ ಕಾರ್ಮಿಕ ಪರ ಘೋಷಣೆಗಳನ್ನು ಕೂಗಿದರು. ಪ್ರಾರಂಭದಲ್ಲಿ ಕಾರ್ಮಿಕ ವರ್ಗದ ಮಹಾನ್ ನಾಯಕರು, ಮೇ ದಿನ ಹೋರಾಟದ ಸ್ಫೂರ್ತಿಯಾದ ಕಾರ್ಲ್ ಮಾರ್ಕ್ಸ್ ಹಾಗೂ ಫೆಡ್ರಿಕ್ ಎಂಗೆಲ್ಸ್ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಎಐಯುಟಿಯುಸಿ ಜಿಲ್ಲಾ ಅಧ್ಯಕ್ಷ. ಎ. ದೇವದಾಸ್, ಇಂದು ಅತ್ಯಂತ ಸಂಕಷ್ಟದ ಪರಿಸ್ಥಿತಿಯಲ್ಲಿ, ಈ ಅಂತರಾಷ್ಟ್ರೀಯ ಕಾರ್ಮಿಕ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಬಂಡವಾಳಶಾಹಿ ವ್ಯವಸ್ಥೆಯ ಬಿಕ್ಕಟ್ಟಿನಿಂದ ನಿರುದ್ಯೋಗ ಭೀಕರವಾಗಿದೆ. ಲಕ್ಷಾಂತರ ಕಾರ್ಮಿಕರನ್ನು ಕೆಲಸದಿಂದ ಹೊರ ಹಾಕಲಾಗುತ್ತಿದೆ. ಇರುವ ಕಾರ್ಮಿಕರನ್ನು ಗುಲಾಮರಂತೆ ಕಾಣಲಾಗುತ್ತಿದ್ದು, ಅತ್ಯಂತ ಜುಜುಬಿ ವೇತನಕ್ಕೆ, 12–14 ಗಂಟೆಗಳು ದುಡಿಸಿಕೊಳ್ಳುವುದು ಸಾಮಾನ್ಯವಾಗಿದೆ. ಬೆಲೆ ಏರಿಕೆಯಿಂದ ದುಡಿಯುವ ಜನರ ಜೀವನ ಶೋಚನೀಯವಾಗಿದೆ ಎಂದರು.

ಜಿಲ್ಲಾ ಉಪಾಧ್ಯಕ್ಷೆ ಎ. ಶಾಂತಾ ಮಾತನಾಡಿ, "ಎಷ್ಟೇ ಚುನಾವಣೆಗಳು ನಡೆದರೂ, ಎಷ್ಟೇ ಸರ್ಕಾರಗಳು ಬದಲಾದರೂ, ಕಾರ್ಮಿಕ ವಿರೋಧಿ ನೀತಿಗಳು ಮಾತ್ರ ಬದಲಾಗುತ್ತಿಲ್ಲ. ಏಕೆಂದರೆ ಇಡೀ ವ್ಯವಸ್ಥೆ ಇರುವುದೇ ಉಳ್ಳವರ ಸೇವೆಗಾಗಿ. ಹಾಗಾಗಿ ಕಾರ್ಮಿಕರು ಯಾವುದೇ ಸರ್ಕಾರಗಳ ಮೇಲೆ ಭ್ರಮೆ ಇಟ್ಟುಕೊಳ್ಳದೆ, ತಮ್ಮ ಸಂಘಟಿತ ಹೋರಾಟದ ಮೇಲೆ ವಿಶ್ವಾಸ ಇಡಬೇಕೆಂದರು. ಜಂಟಿ ಕಾರ್ಯದರ್ಶಿ ಜಿ. ಸುರೇಶ್ ಅಧ್ಯಕ್ಷತೆ ವಸಿದ್ದರು,

ಮುಖಂಡರಾದ ಶರ್ಮಾಸ್, ಕಿರಣ್ ಕುಮಾರ್, ಚೇತನ್ಯ ಪ್ರಭು, ಪರ್ವಾತಮ್ಮ, ರೀನಾ, ಹೇಮಣ್ಣ, ಹನುಮ ನಾಯಕ್, ನಿಂಗಪ್ಪ, ವೀರಭದ್ರಯ್ಯ ಸ್ವಾಮಿ, ಮಹೇಶ್, ಸೋಮಶೇಖರ್ ಇದ್ದರು.

# ಕಮಲನಗರ: ಲುಂಬಿನಿ ಬುದ್ಧ ವಿಹಾರದಲ್ಲಿ ಸಂಭ್ರಮದ ಬುದ್ಧ ಪೂರ್ಣಿಮಾ ಆಚರಣೆ

ಮಲ್ಲಮ್ಮ ನುಡಿ ವಾರ್ತೆ
ಕಮಲನಗರ:



ಕಮಲನಗರ:ಮೇ.1:ಪಟ್ಟಣದ ಇಂದಿರಾ ನಗರದ ಪ್ರಸಿದ್ಧ ಲುಂಬಿನಿ ಬುದ್ಧ ವಿಹಾರದಲ್ಲಿ ಬುದ್ಧ ಪೂರ್ಣಿಮಾ ಹಬ್ಬವನ್ನು ಅತ್ಯಂತ ಶ್ರದ್ಧಾ ಭಕ್ತಿ ಹಾಗೂ ಸಂಭ್ರಮದಿಂದ ಆಚರಿಸಲಾಯಿತು.ಭಗವಾನ್‌ಗೌತಮ ಬುದ್ಧರ ಜನ್ಮ, ಜ್ಞಾನೋದಯ ಹಾಗೂ ಮಹಾಪರಿನಿಬ್ಬಾಣದ ನೆನಪಿಗಾಗಿ ಆಯೋಜಿಸಲಾಗಿದ್ದ ಈ ಕಾರ್ಯಕ್ರಮದಲ್ಲಿ ನೂರಾರು ಭಕ್ತರು ಪಾಲ್ಗೊಂಡಿದ್ದರು.

ಬುದ್ಧ ಮೂರ್ತಿಗೆ ವಿಶೇಷ ಪೂಜೆ


ಕಾರ್ಯಕ್ರಮದ ಆರಂಭದಲ್ಲಿ ಗಣ್ಯರಾದ ಎಸ್. ಎನ್. ಭಾಸ್ಕರ ಅವರು ಬುದ್ಧನ ಭವ್ಯ ಮೂರ್ತಿಗೆ ಪುಷ್ಪಾರ್ಚನೆ ಮಾಡಿ, ದೀಪ ಬೆಳಗಿಸುವ ಮೂಲಕ ಪೂಜೆ ಸಲ್ಲಿಸಿದರು. ಮಂದಿರದ ಆವರಣದಲ್ಲಿ ನೆರೆದಿದ್ದ ಉಪಾಸಕರು ಹಾಗೂ ಸಾರ್ವಜನಿಕರು ಬುದ್ಧ ವಂದನೆ ಮತ್ತು ಪಂಚಶೀಲಗಳನ್ನು ಪಠಿಸಿ ಶಾಂತಿ ಮಂತ್ರಗಳನ್ನು ಮೊಳಗಿಸಿದರು.ಪೂಜಾ ಕಾರ್ಯಕ್ರಮದ ನಂತರ ಮಾತನಾಡಿದ ಎಸ್. ಎನ್. ಭಾಸ್ಕರ ಅವರು, ಬುದ್ಧನ ತತ್ವಗಳು ಇಂದಿನ ಸಂಘರ್ಷಮಯ ಜಗತ್ತಿಗೆ ಅತಿ ಅವಶ್ಯಕವಾಗಿವೆ ಎಂದು ಅಭಿಪ್ರಾಯಪಟ್ಟರು.

"ಜಗತ್ತಿಗೆ ಯುದ್ಧ ಬೇಡ, ಬುದ್ಧ ಬೇಕು. ಅಹಿಂಸೆ, ಕರುಣೆ ಮತ್ತು ಪ್ರೀತಿಯ ಮೂಲಕ ಮಾತ್ರ ನಾವು ಸಮಾಜದಲ್ಲಿ ಶಾಂತಿ ನೆಲೆಸುವಂತೆ ಮಾಡಲು ಸಾಧ್ಯ. ಪ್ರತಿಯೊಬ್ಬರೂ ಬುದ್ಧನ ಅಷ್ಟಾಂಗ ಮಾರ್ಗಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ನೆಮ್ಮದಿಯ ಬದುಕು ಸಾಗಿಸಲು ಸಾಧ್ಯವಾಗುತ್ತದೆ," ಎಂದು ಅವರು ಮಾರ್ಮಿಕವಾಗಿ ನುಡಿದರು.

ಬುದ್ಧನು ಕೇವಲ ಒಂದು ಧರ್ಮಕ್ಕೆ ಸೀಮಿತವಾದವರಲ್ಲ, ಅವರು ಇಡೀ ಮಾನವಕುಲದ ಆಸ್ತಿ. ಅವರ ಶಾಂತಿ ಮಾರ್ಗವು ಸಾರ್ವಕಾಲಿಕವಾಗಿದ್ದು, ಯುವ ಪೀಳಿಗೆಯು ಬುದ್ಧ ತತ್ವಗಳನ್ನು ಓದಿ ಅರ್ಥೈಸಿಕೊಂಡು ಸನ್ಮಾರ್ಗದಲ್ಲಿ ನಡೆಯಬೇಕು ಎಂದು ಈ ಸಂದರ್ಭದಲ್ಲಿ ತಿಳಿಸಲಾಯಿತು.

ಕಾರ್ಯಕ್ರಮದಲ್ಲಿ ಬುದ್ಧ ವಿಹಾರ ಮಂದಿರ ಅಧ್ಯಕ್ಷರಾದ ಬಾಲಾಜಿ ಕಾಲೇಕರ,ಕಾರ್ಯದರ್ಶಿ ದಿಲಿಪ ಸೋಮವಂಷಿ, ಹಾಗೂ ಪದಾಧಿಕಾರಿಗಳು, ಪಟ್ಟಣದ ಪ್ರಮುಖರು ಹಾಗೂ ಬೌದ್ಧ ಉಪಾಸಕರು ಉಪಸ್ಥಿತರಿದ್ದು, ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ರೈತನ ಮಗ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಸಾಧನೆ



• ಮಲ್ಲಮ್ಮ ನುಡಿ ವಾರ್ತೆ
ಹುಮನಾಬಾದ

ಎಸ್.ಎಸ್.ಎಲ್.ಸಿ ಫಲಿತಾಂಶದಲ್ಲಿ ಹುಮನಾಬಾದ ಪಟ್ಟಣದ ಸ್ಮಾರ್ಟ್‌ಕಿಡ್ಸ್ ಇಂಗ್ಲೀಷ್ ಮಾಧ್ಯಮ ಶಾಲೆಯ ವಿದ್ಯಾರ್ಥಿ ದೀಪಕರೆಡ್ಡಿ 625ಕ್ಕೆ 610, 97.6% ಅಂಕಗಳನ್ನು ಪಡೆಯುವ ಮೂಲಕ ಶಾಲೆಗೆ ಕೀರ್ತಿ ತಂದಿದ್ದಾನೆundefined. ದೀಪಕರೆಡ್ಡಿ ಅವರ ಸಾಧನೆಯ ಹಿಂದೆ ತಂದೆಯ ಕಠಿಣ ಶ್ರಮ ಮತ್ತು ತಾಯಿಯ ನಿರಂತರ ಪ್ರಾರ್ಥನೆಯ ಬೆಂಬಲವಿದೆ.ಹೆತ್ತವರ ಕನಸು ನನಸು: ಹೊಲದಲ್ಲಿ ವೃತ್ತಿ ಮಾಡುತ್ತಿರುವ ದೀಪಕರೆಡ್ಡಿ ಅವರ ತಂದೆ ರಮೇಶ ಪುಟ್ಟಾರವರು ಮಗನ ಶಿಕ್ಷಣಕ್ಕಾಗಿ ಹಗಲಿರುಳು ಶ್ರಮಿಸಿದ್ದು, ಇಂದು ಮಗನ ಸಾಧನೆಯಿಂದ ಅವರ ಪರಿಶ್ರಮಕ್ಕೆ ಸಾರ್ಥಕತೆ ಸಿಕ್ಕಂತಾಗಿದೆ. ಸುಮಾ ರಮೇಶರೆಡ್ಡಿ ಇವರಿಗೆ ಇಬ್ಬರು ಮಕ್ಕಳಿದ್ದು, ಒಬ್ಬ ಮಗ ಕಷ್ಟಪಟ್ಟು ಓದಿ ಸೈನ್ಸ್ ಮಾಡುತ್ತಿದ್ದು, ಇನ್ನೊಬ್ಬ ಮಗ ಖಾಸಗಿ ಶಾಲೆಯಾದ ಸ್ಮಾರ್ಟ್‌ಕಿಡ್ಸ್ ಇಂಗ್ಲೀಷ್ ಮೇಡಿಯಮ್ ಶಾಲೆಯಲ್ಲಿ ಓದಿ ಅತಿ ಹೆಚ್ಚು ಅಂಕ ಪಡೆದು ತಾಲ್ಲೂಕಿಗೆ ಹಾಗು ಶಾಲೆಗೆ ಕೀರ್ತಿ ತಂದಿದ್ದಕ್ಕೆ ಶಾಲೆಯ ಮುಖ್ಯಗುರುಗಳು ಶಿಕ್ಷಕರು ಸಿಬ್ಬಂದಿವರ್ಗದವರು ಹರ್ಷವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

ದೀಪಕರೆಡ್ಡಿ ಅವರು ತಮ್ಮ ಯಶಸ್ಸಿನ ಬಗ್ಗೆ ಮಾತನಾಡುತ್ತಾ, ಪೋಷಕರು, ಶಿಕ್ಷಕರು ಮತ್ತು ಶಾಲಾ ಮ್ಯಾನೇಜ್ಮೆಂಟ್ ನೀಡಿದ ಪ್ರೋತ್ಸಾಹವೇ ಈ ಸಾಧನೆಗೆ ಕಾರಣ ಎಂದು ಸಂತಸ ಹಂಚಿಕೊಂಡಿದ್ದಾರೆ. ಶಾಲೆಯಲ್ಲಿ ನೀಡುತ್ತಿದ್ದ ವಿಶೇಷ ತರಬೇತಿ ಹಾಗೂ ಎಕ್ಸ್ಟ್ರಾ ಮೆಟೀರಿಯಲ್ಸ್‌ಗಳು ಕಲಿಕೆಗೆ ಸಹಕಾರಿಯಾಗಿದ್ದವು ಎಂದು ತಿಳಿಸಿದರು. ಅಲ್ಲದೇ ಮುಂದೆ ಇಂಜಿನಿಯರ್ ಆಗುವ ಗುರಿ ಹೊಂದಿರುವುದಾಗಿ ತಿಳಿಸಿದ್ದಾರೆ.

# ಕುಡಿಯುವ ನೀರು ಪೂರೈಕೆಯಲ್ಲಿ ನಿರ್ಲಕ್ಷ್ಯವಾದರೆ ಕ್ರಮ: ಶಾಸಕ ಪ್ರಭು ಚವ್ಹಾಣ

• ಮಲ್ಲಮ್ಮ ನುಡಿ ವಾರ್ತೆ
ಔರಾದ

ಮೇ.1: ಬೇಸಿಗೆಯ ರಣಬಿಸಿಲು ತೀವ್ರವಾಗಿ ಹೆಚ್ಚುತ್ತಿರುವ ಹಿನ್ನೆಲೆ ಕ್ಷೇತ್ರದ ಅನೇಕ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಗಂಭೀರ ರೂಪ ಪಡೆಯುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ನಿರ್ಲಕ್ಷ ವಹಿಸುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದೆಂದು ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಎಚ್ಚರಿಸಿದರು.

ಔರಾದ(ಬಿ) ತಾಲ್ಲೂಕು ಪಂಚಾಯತ ಕಛೇರಿ ಸಭಾಂಗಣದಲ್ಲಿ ಏ.30 ರಂದು ನಡೆದ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ತಹಸೀಲ್ದಾರರು, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿಗಳು ಸಮನ್ವಯತೆಯಿಂದ ಕೆಲಸ ಮಾಡಿ ಕ್ಷೇತ್ರದ ಯಾವೊಂದು ಗ್ರಾಮದಲ್ಲಿಯೂ ನೀರಿನ ಕೊರತೆ–ಯಾಗದಂತೆ ನೋಡಿಕೊಳ್ಳಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.



ನೀರಿನ ಸಮಸ್ಯೆ ಕಂಡುಬಂದ ಕೂಡಲೇ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಬೇಕು. ಕೆಟ್ಟಿರುವ ಬೋರ್‌ವೆಲ್‌ಗಳನ್ನು ತಕ್ಷಣ ದುರಸ್ತಿ ಮಾಡಬೇಕು, ಅಗತ್ಯವಿದ್ದಲ್ಲಿ ಹೊಸ ಬೋರ್‌ವೆಲ್‌ಗಳನ್ನು ಕೊರೆಸಬೇಕು. ಪೈಪ್‌ಲೈನ್ ದುರಸ್ತಿ ಸೇರಿದಂತೆ ಎಲ್ಲಾ ಕಾಮಗಾರಿಗಳನ್ನು ಗಡುವಿನೊಳಗೆ ಪೂರ್ಣಗೊಳಿಸಬೇಕು. ವಿಳಂಬ ಅಥವಾ ನಿರ್ಲಕ್ಷ್ಯ ಕಂಡುಬಂದರೆ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಸಾಕಷ್ಟು ಬಿಸಲಿನ ಕಾರಣ ಪಶು ಪಕ್ಷಿಗಳಿಗೆ ನೀರಿನ ತೆ–ೂಂದರೆಯಾಗುತ್ತಿದೆ. ಹಾಗಾಗಿ ಸಣ್ಣ ನೀರಾವರಿ ಇಲಾಖೆಯ ಕೆರೆಗಳಿಂದ ನಾಲಾಗಳಿಗೆ ನೀರು ಹರಿಸಿ ಅನುಕೂಲ ಮಾಡಿಕೊಡಬೇಕು. ಇನ್ನೊಂದು ತಿಂಗಳು ನೀರಿನ ಸಮಸ್ಯೆ ಹೆಚ್ಚಾಗಿ ಕಾಣಿಸುವುದರಿಂದ ಎಲ್ಲ ಅಧಿಕಾರಿಗಳು ಚುರುಕಿನಿಂದ ಕೆಲಸ ಮಾಡಬೇಕು. ಜನ, ಜಾನುವಾರುಗಳಿಗೆ ನೀರಿನ ಕೊರತೆಯಾಗದಂತೆ ಎಚ್ಚರ ವಹಿಸಬೇಕು ಎಂದರು.

ಈ ವರ್ಷ ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ಸುಧಾರಣೆ ಕಾಣಿಸಿರುವುದಕ್ಕೆ ಸಂತೋಷವಾಗಿದೆ. ಆದರೆ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಕೊರತೆಯಿರುವುದನ್ನು ಕಂಡು ಬೇಸರವಾಗುತ್ತಿದೆ. ಎಲ್ಲ ಮುಖ್ಯಗುರುಗಳು ಮತ್ತು ಶಿಕ್ಷಕರು ಮನೆ–ಮನೆಗೆ ಭೇಟಿ ನೀಡಿ ಪೋಷಕರ ಮನವೊಲಿಸಬೇಕು. ಸರಿಯಾಗಿ ಪಾಠ ಮಾಡುತ್ತೇವೆಂದು ಭರವಸೆ ನೀಡಿ ದಾಖಲಾತಿ ಪ್ರಮಾಣವನ್ನು ಹೆಚ್ಚಿಸಬೇಕು. ಮುಂದಿನ ಪರೀಕ್ಷೆ ವೇಳೆಗೆ ಕನಿಷ್ಟ 5 ಸಾವಿರ ಮಕ್ಕಳು ಪರೀಕ್ಷೆ ಬರೆಯುವಂತಾಗಬೇಕು. ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಬೇಕಾದಷ್ಟು ಅನುದಾನ ನೀಡುತ್ತಿದ್ದೇನೆ. ಇನ್ನೂ ಅವಶ್ಯಕತೆಯಿದ್ದಲ್ಲಿ ಕೇಳಿ ಕೊಡುತ್ತೇನೆ. ಆದರೆ ಶಿಕ್ಷಣದ ವಿಷಯದಲ್ಲಿ ಕೊರತೆಯಾದರೆ ಸುಮ್ಮನೆ ಬಿಡುವುದಿಲ್ಲ ಎಂದು ಎಚ್ಚರಿಸಿದರು.

ಸರ್ಕಾರಿ ಶಾಲೆಗಳಿಗೆ ಕಳಪೆ ಆಹಾರ ಪೂರೈಕೆಯಾಗಿರುವುದು ಗ್ರಾಮ ಸಂಚಾರದ ಸಂದರ್ಭದಲ್ಲಿ ಪತ್ತೆಯಾಗಿದೆ. ಜಮಾಲಪೂರನಲ್ಲಿ ಕಳಪೆ ಮಟ್ಟದ ಆಹಾರ ಪದಾರ್ಥಗಳಿಂದ ಸಿದ್ದಪಡಿಸಿದ ಆಹಾರ ಸೇವಿಸಿ ಅನೇಕ ಮಕ್ಕಳು ಅನಾರೋಗ್ಯಕ್ಕೆ ಒಳಗಾಗಿದ್ದರು. ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರಿಕೆ ವಹಿಸಬೇಕು ಎಂದು ತಿಳಿಸಿದರು.

ಸರ್ಕಾರಿ ಆಸ್ಪತ್ರೆಗಳಿಗೆ ಬೇಕಾದ ಎಲ್ಲ ಸೌಕರ್ಯಗಳನ್ನು ಒದಗಿಸುತ್ತಿದ್ದೇನೆ. ಎಕ್ಸರೇ, ಡಯಾಲಿಸಿಸ್ ಸೇರಿದಂತೆ ಎಲ್ಲ ಯಂತ್ರಗಳು ಸರಿಯಾಗಿ ಕೆಲಸ ಮಾಡುವಂತಾಗಬೇಕು. ಸಣ್ಣ–ಸಣ್ಣ ವಿಷಯಗಳಿಗೆ ಜಿಲ್ಲಾಸ್ಪತ್ರೆಗೆ ಶಿಫಾರಸ್ಸು ಮಾಡುವುದು ನಿಲ್ಲಬೇಕು. ಆಸ್ಪತ್ರೆಗೆ ಬರುವ ಎಲ್ಲ ರೋಗಿಗಳಿಗೆ ಸರಿಯಾಗಿ ಚಿಕಿತ್ಸೆ ಕಲ್ಪಿಸಬೇಕೆಂದು ತಾಲ್ಲೂಕು ಆರೋಗ್ಯಾಧಿಕಾರಿಗೆ ಸೂಚಿಸಿದರು.

ಅಧಿಕಾರಿಗಳು ಮತ್ತು ಗುತ್ತಿಗೆದಾರರಿಂದ ಲೂಟಿ: ಔರಾದ(ಬಿ) ವಿಧಾನಸಭಾ ಕ್ಷೇತ್ರದಲ್ಲಿ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಲು 250 ಕೋಟಿಗಿಂತ ಹೆಚ್ಚು ಅನುದಾನ ತಂದಿದ್ದೇನೆ. 276 ಕಾಮಗಾರಿಗಳ ಪೈಕಿ ಸುಮಾರು 50 ಕೆಲಸಗಳು ಸರಿಯಾಗಿ ಆಗಿವೆ. ಉಳಿದಂತೆ ಎಲ್ಲವೂ ಕಳಪೆಯಾಗಿವೆ. ಅಧಿಕಾರಿಗಳು ಮತ್ತು ಗುತ್ತಿಗೆದಾರರು ಸೇರಿಕೊಂಡು ಲೂಟಿ ಮಾಡಿದ್ದಾರೆ. ಹಣದ ಆಮೀಷವೊಡ್ಡಿ ಕಾಮಗಾರಿ ಕಳಪೆಯಾದರೂ ಹ್ಯಾಂಡೋವರ್ ಮಾಡಲಾಗಿದೆ. ಇದರ ಪರಿಣಾಮ ಜನತೆ ಸಮಸ್ಯೆ ಎದುರಿಸುತ್ತಿದ್ದಾರೆ. ಈ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರು, ಗ್ರಾಮೀಣಾಭಿವೃದ್ಧಿ ಸಚಿವರು, ಜಿಲ್ಲಾಧಿಕಾರಿಗಳು ಒಳಗೊಂಡು ಸಂಬಂಧಪಟ್ಟ ಎಲ್ಲರಿಗೂ ದೂರು ಸಲ್ಲಿಸಲಾಗಿದೆ. ಆದರೆ ಇಲ್ಲಿವರೆಗೆ ಯಾವ ಕ್ರಮವೂ ಆಗಿಲ್ಲವೆಂದು ಬೇಸರ ವ್ಯಕ್ತಪಡಿಸಿದರು.

ಸಭೆಯಲ್ಲಿ ಕೃಷಿ, ತೋಟಗಾರಿಕೆ, ಲೋಕೋಪಯೋಗಿ, ಪಂಚಾಯತ್ ರಾಜ್, ಪಶು ಸಂಗೋಪನೆ, ಕಂದಾಯ, ಅರಣ್ಯ, ಸಮಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ, ಅಲ್ಪಸಂಖ್ಯಾತರ ಕಲ್ಯಾಣ, ಜೆಸ್ಕಾಂ ಸೇರಿದಂತೆ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಸಲಾಯಿತು.

ತಾಲ್ಲೂಕು ಪಂಚಾಯತ ಆಡಳಿತಾಧಿಕಾರಿಯಾದ ಜಿಲ್ಲಾ ಪಂಚಾಯತ ಯೋಜನಾ ನಿರ್ದೇಶಕರಾದ ಸೂರ್ಯಕಾಂತ ಬಿರಾದಾರ, ಔರಾದ(ಬಿ) ತಹಸೀಲ್ದಾರ ಮಹೇಶ ಪಾಟೀಲ, ಕಮಲನಗರ ತಹಸೀಲ್ದಾರ ಅಮಿತ ಕುಲಕರ್ಣಿ, ತಾಲ್ಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳಾದ ಕಿರಣ ಪಾಟೀಲ, ಹಣಮಂತರಾವ ಕೌಟಗೆ ಸೇರಿದಂತೆ ವಿವಿಧ ಇಲಾಖೆಗಳ ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಬುದ್ಧ ಪೂರ್ಣಿಮೆ ಆಚರಣೆ



• ಮಲ್ಲಮ್ಮ ನುಡಿ ವಾರ್ತೆ, ಹುಮನಾಬಾದ

ನಗರದ ಮಾಜಿ ಸಚಿವರ ಗೃಹ ಕಛೇರಿಯಲ್ಲಿ ಶುಕ್ರವಾರ ಬುದ್ಧ ಪೂರ್ಣಿಮೆ ಕಾರ್ಯಕ್ರಮ ಅದ್ದೂರಿಯಾಗಿ ಜರುಗಿತು.

ಈ ಸಂದರ್ಭದಲ್ಲಿ ಮಾಜಿ ಸಚಿವರಾದ ರಾಜಶೇಖರ ಪಾಟೀಲ್, ವಿಧಾನ ಪರಿಷತ್ ಸದಸ್ಯರಾದ ಡಾ. ಚಂದ್ರಶೇಖರ ಪಾಟೀಲ್, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷರಾದ ಅಭಿಷೇಕ ಪಾಟೀಲ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಅಫ್ಸರಮಿಯ, ಗ್ರಾಮೀಣ ಕಾಂಗ್ರೆಸ್ ಅಧ್ಯಕ್ಷರಾದ ಓಂಕಾರ ತುಂಬಾ, ಯುವ ಕಾಂಗ್ರೆಸ್ ಅಧ್ಯಕ್ಷರಾದ ಉಮೇಶ ಜಮಗಿ, ಜಿಪಂ. ಮಾಜಿ ಉಪಾಧ್ಯಕ್ಷರಾದ ಲಕ್ಷ್ಮಣರಾವ ಬುಳ್ಳಾ, ದತ್ತಕುಮಾರ ಚಿದ್ರಿ, ಮಲ್ಲಿಕಾರ್ಜುನ ಮಹೇಂದ್ರಕರ್, ರಾಜದೀಪ ಜಾಬಾ, ದತ್ತು ಲದ್ದಿ, ಶಿವಾನಂದ ಕಟ್ಟಿಮನಿ, ಧರ್ಮರೆಡ್ಡಿ ಸೇರಿದಂತೆ ಅನೇಕರಿದ್ದರು.

## ಡಿಪ್ಲೋಮಾ : ಕೋರ್ಸಿನ ಪ್ರವೇಶಾತಿ ಆರಂಭ

• ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ

ಕಲಬುರಗಿಯ ಕರ್ನಾಟಕ ಜರ್ಮನ್ ತಾಂತ್ರಿಕ ಸಂಸ್ಥೆ (ಕೆ.ಜಿ.ಟಿ.ಟಿ.ಐ.) ಯಲ್ಲಿ 2026–27ನೇ ಸಾಲಿನ ಡಿಪ್ಲೋಮಾ ಇನ್ ಟೂಲ್ ಆಂಡ್ ಡೈಮೇಕಿಂಗ್ (ಡಿ.ಟಿ.ಡಿ.ಎಮ್.)ಕೋರ್ಸಿಗೆಪ್ರವೇಶಾತಿಪ್ರಾರಂಭವಾಗಿದ್ದು, ಇದಕ್ಕಾಗಿ ಆಸಕ್ತಿಯುಳ್ಳ ಎಸ್.ಎಸ್.ಎಲ್.ಸಿ. ಪಾಸಾದ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಕಲಬುರಗಿ ಕರ್ನಾಟಕ ಜರ್ಮನ್ ತಾಂತ್ರಿಕ ಸಂಸ್ಥೆಯ ನಿರ್ದೇಶಕರು ತಿಳಿಸಿದ್ದಾರೆ.

ಈ ಕೋರ್ಸ್‌ನ ಅವಧಿ 4 ವರ್ಷ ಇದ್ದು, 3 ವರ್ಷ ಸಾಂಸ್ಥಿಕ ತರಬೇತಿ ಇರುತ್ತದೆ. ಅಂತಿಮ ವರ್ಷದಲ್ಲಿ ಕಡ್ಡಾಯವಾಗಿ ಸ್ಟೈಫಂಡ್ (Stipend) ಸಹಿತ ಕೈಗಾರಿಕಾ ತರಬೇತಿ ಒಳಗೊಂಡಿರುತ್ತದೆ. ಈ ಕೋರ್ಸ್ ಎಐಸಿಟಿಇ ಯಿಂದ ಅನುಮೋದನೆ ದೊರೆತಿದ್ದು, ತಾಂತ್ರಿಕ ಶಿಕ್ಷಣ ಇಲಾಖೆ ನೀಡುವ ಡಿಪ್ಲೋಮಾ ಇನ್ ಮೆಕ್ಯಾನಿಕಲ್ ಇಂಜಿನಿಯರಿಂಗ್ ಕೋರ್ಸ್‌ಗೆ ತತ್ಸಮಾನವಾಗಿದೆ.

ಈ ಸಂಸ್ಥೆಯಲ್ಲಿ ಸುಸಜ್ಜಿತ ಯಂತ್ರೋಪಕರಣಗಳು, ಅನುಭವಿ ಸಿಬ್ಬಂದಿ, ಮಹಿಳಾ ಮತ್ತು ಪುರುಷರಿಗಾಗಿ ಪ್ರತ್ಯೇಕ ಹಾಸ್ಟೆಲ್ ಸೌಲಭ್ಯವಿದ್ದು, ಕೋರ್ಸ್ ಮುಗಿದ ನಂತರ ಆಟೋಮೊಬೈಲ್, ಏರೋಸ್ಪೇಸ್, ಪ್ರೆಸ್‌ಟೂಲ್ ಕ್ಷೇತ್ರಗಳ ಕಂಪನಿಗಳಲ್ಲಿ ಉದ್ಯೋಗಾವಕಾಶ ದೊರೆಯಲಿದೆ. ಕೆ.ಜಿ.ಟಿ.ಟಿ.ಐ. ಯಿಂದ ಕ್ಯಾಂಪಸ್ ಪ್ಲೇಸ್ಮೆಂಟ್ ನೆರವು ನೀಡಲಾಗುತ್ತದೆ.

ಆಸಕ್ತಿಯುಳ್ಳ ಅಭ್ಯರ್ಥಿಗಳು www.kgtti.com ವೆಬ್‌ಸೈಟ್‌ನಲ್ಲಿ ಆನಲೈನ್ ಮೂಲಕ ಅರ್ಜಿ ಸಲ್ಲಿಸಬಹುದು ಅಥವಾ ಸಂಸ್ಥೆಯ ಕಚೇರಿಯಲ್ಲಿ ಖುದ್ದಾಗಿ ಅರ್ಜಿ ಪಡೆಯಬಹುದಾಗಿದೆ. ಭರ್ತಿ ಮಾಡಿದ ಅರ್ಜಿ ಸಲ್ಲಿಸಲು 2026ರ ಮೇ 25 ರಂದು ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 8884886172/9902345676/8660171836 ಗಳಿಗೆ ಸಂಪರ್ಕಿಸಲು ಕೋರಲಾಗಿದೆ.

# ಕೃಷ್ಣಾ ನದಿ ನೀರು ಚಿಕ್ಕಬಳ್ಳಾಪುರ ಕ್ಕೆ ಹರಿಸಲು ಒತ್ತಾಯಿಸಿ ಲಕ್ಷ ಸಹಿ ಸಂಗ್ರಹ ಅಭಿಯಾನ

• ಮಲ್ಲಮ್ಮ ನುಡಿ ವಾರ್ತೆ, ಚಿಕ್ಕಬಳ್ಳಾಪುರ

ಚಿಕ್ಕಬಳ್ಳಾಪುರದ ನೀರಿನ ಸಮಸ್ಯೆ ಇಂದು ನೆನ್ನೆಯದಲ್ಲ. ನೀರಿನ ಕೊರತೆಗೆ ಬರೆ ಎಳೆದಂತೆ ಬೆಂಗಳೂರಿನ ಹೆಬ್ಬಾಳ ನಾಗವಾರ್ ಕೆರೆಯ ಕೊಳಚೆ ನೀರು ನಮ್ಮ ನೆಲದ ಅಂತರ್ಜಲವನ್ನೇ ವಿಷಮಯ ಮಾಡುತ್ತಿದೆ. ಈಗಾಗಲೇ ನಮ್ಮ ನೆಲದಲ್ಲಿ ಬೆಳೆಯುತ್ತಿರುವ ತರಕಾರಿ – ಬೆಳೆಗಳಲ್ಲಿ ವಿಷಕಾರಿ ರಾಸಾಯನಿಕಗಳು ಇರುವುದಾಗಿ ವಿಜ್ಞಾನಿಗಳು ದೃಢಪಡಿಸಿದ್ದಾರೆ. ಅಶುದ್ಧ ನೀರಿನ ಪರಿಣಾಮದಿಂದ ನಮ್ಮ ತಾಲೂಕಿನಲ್ಲಿ ಅನಾರೋಗ್ಯದ ಪ್ರಮಾಣ ದಿನೇ ದಿನೇ ಹೆಚ್ಚುತ್ತಿದೆ. ಆದ್ದರಿಂದ ಜೀವಜಲ ಜಾಗೃತಿ ವೇದಿಕೆ ಹಾಗು ಭಗತ್ ಸಿಂಗ್ ಚಾರಿಟಬಲ್ ಟ್ರಸ್ಟ್ ನಿಂದ ಒಂದು ಲಕ್ಷ ಸಹಿ ಸಂಗ್ರಹಿಸಿ ರಾಷ್ಟ್ರಪತಿಗೆ ಸಲ್ಲಿಸಲು ಇಂದು ಚಾಲನೆ ನೀಡಿದರು.

ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ಹರಿಯುತ್ತಿರುವ ಹೆಚ್ ಎನ್ ವ್ಯಾಲಿ ನೀರಿನ ಮೂರನೆ ಹಂತದ ಶುದ್ದೀಕರಣ ಹಾಗು ಕೃಷ್ಣಾ ನದಿ ನೀರು

ಚಿಕ್ಕಬಳ್ಳಾಪುರ ಕ್ಕೆ ಹರಿಸುವಂತೆ ಒತ್ತಾಯಿಸಿ ಚಿಕ್ಕಬಳ್ಳಾಪುರ ಜೀವಜಲ ಜಾಗೃತಿ ವೇದಿಕೆ ಹಾಗು ಭಗತ್ ಸಿಂಗ್ ಚಾರಿಟಬಲ್ ಟ್ರಸ್ಟ್ ನಿಂದ ಒಂದು ಲಕ್ಷ ಸಹಿ ಸಂಗ್ರಹ ಚಳುವಳಿ ಹಮ್ಮಿಕೊಳ್ಳಲಾಗಿದ್ದು ಚಿಕ್ಕಬಳ್ಳಾಪುರ ನಗರದ ಕಂದವಾರ ಕೆರೆ ಕಟ್ಟೆ ಕೆಳಗೆ ಸಹಿ ಸಂಗ್ರಹಕ್ಕೆ ಚಾಲನೆ ನೀಡಲಾಯಿತು.

ಈ ವೇಳೆ ಮಾತನಾಡಿದ ಸಂದೀಪ್ ರೆಡ್ಡಿ ವಿಧಾನಸಭಾ ಕ್ಷೇತ್ರದ ಪ್ರತಿಯೊಂದು ಮನೆಗೂ ತಲುಪಬೇಕು ಅದಕ್ಕಾಗಿ ಮೂನ್ನುರು ಜನರಿಗಾಗುವಷ್ಟು ಒಂದೊಂದು ಪುಸ್ತಕವನ್ನ ಮುದ್ರಣ ಮಾಡಿಸಲಾಗಿದೆ ಸಹಿ ಸಂಗ್ರಹದ ನಂತರ 100–150 ಜನರೊಟ್ಟಿಗೆ ದೆಹಲಿಗೆ ಹೋಗಿ ರಾಷ್ಟ್ರಪತಿಗಳಿಗೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಇದು ನಮ್ಮ ಹಕ್ಕಿನ ಹೋರಾಟ. ನಮ್ಮ ನೆಲ – ಜಲದ ಮೇಲೆ ನಡೆಯುತ್ತಿರುವ ಅನ್ಯಾಯದ ವಿರುದ್ಧದ ಹೋರಾಟ. ಆದರೆ ಸರ್ಕಾರ ನಮ್ಮ ಸಮಸ್ಯೆ ಅರ್ಥವಾಗದಂತೆ ವರ್ತಿಸುತ್ತಿದೆ. ಸರ್ಕಾರಕ್ಕೆ ಅದನ್ನು ಅರ್ಥ ಮಾಡಿಸಬೇಕಾದವರೊ ಜವಾಬ್ದಾರಿಯಿಂದ ನಡೆದುಕೊಳ್ಳುತ್ತಿಲ್ಲ. ಬಜೆಟ್ ಮಂಡನೆಗೆ ಮೊದಲು ಮೂರನೇ ಹಂತದ ಸಂಸ್ಕರಣಕ್ಕೆ ಇಟ್ಟ ಬೇಡಿಕೆಯನ್ನು ಸಂಪೂರ್ಣವಾಗಿ –ಕಡೆಗಣಿಸಲಾಗಿದೆ. ಬಜೆಟ್ ನಂತರದಲ್ಲಿ ನಡೆಸಿದ ಬಂದ್‌ಗೆ ಕೂಡ ಸರ್ಕಾರದಿಂದ ಸ್ಪಂದನೆ ದೊರಕಿಲ್ಲ ಆದ್ದರಿಂದ ಈ ಸಹಿ ಸಂಗ್ರಹ ಹಮ್ಮಿಕೊಳ್ಳಲಾಗಿದೆ ಇದಕ್ಕೂ ಸರ್ಕಾರ ಬಗ್ಗದಿದ್ದರೆ ಮುಂದೆ ರಕ್ತ ಹರಿಸಿ ಸಹಿ ಮಾಡಬೇಕಾಗುತ್ತದೆ ಎಚ್ಚರಿಕೆ ನೀಡಿದರು. ಈ ವೇಳೆ ಅಣಕನೂರು ವೆಂಕಟೇಶಪ್ಪ, ಬಾಲಕೃಷ್ಣ, ಸಂದರ್ಶ್, ಶಶಿ, ಆರ್ ಹೆಚ್ ಎಲ್ ರಾಹುಲ್, ನಂದಿನಿ, ಸುನಿಲ್, ಶ್ರೀಕಾಂತ್ ಮಧು ಇತರರು ಇದ್ದರು.




# ಬುದ್ಧ ಪೂರ್ಣಿಮೆ ಕಾಟಾಚಾರದ ಆಚರಣೆ ಮಾಳಳ್ಳಿಕರ್ ಆಕ್ರೋಶ

• ಮಲ್ಲಮ್ಮ ನುಡಿ ವಾರ್ತೆ, ಕೆಂಭಾವಿ



ಪಟ್ಟಣದ ವಿವಿಧ ಸರ್ಕಾರಿ ಕಚೇರಿಗಳು, ಶಿಕ್ಷಣ ಇಲಾಖೆ ಹಾಗೂ ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಲ್ಲಿ ಆಚರಣೆಯ ನಿಯಮವನ್ನು ಗಾಳಿಗೆ ತೂರಿ ಬುದ್ಧ ಪೂರ್ಣಿಮೆಯನ್ನು ಕಾಟಾಚಾರಕ್ಕೆ ಆಚರಿಸಲಾಗಿದೆ ಎಂದು ದಲಿತ ಮುಖಂಡ ಬಸವಣ್ಣಪ್ಪ ಆರ್. ಮಾಳಳ್ಳಿಕರ್ ಆಕ್ರೋಶವ್ಯಕ್ತಪಡಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಬುದ್ಧ ಪೂರ್ಣಿಮೆಯನ್ನು ಬೌದ್ಧ ಧರ್ಮದ ಸಂಸ್ಕಾರದಂತೆ ಆಚರಿಸಲು ಕೆಲವು ವಿಧಿವಿಧಾನಗಳನ್ನು ನಿಗದಿಪಡಿಸಲಾಗಿತ್ತು. ಯಾವ ನಿಯಮಗಳನ್ನೂ ಪಾಲಿಸದೆ ಕೇವಲ ಕಾಟಾಚಾರಕ್ಕೆ ಜಯಂತಿ ಆಚರಿಸುವ ಮೂಲಕ ಬುದ್ಧರಿಗೆ ಅಪಮಾನ ಮಾಡಿದ್ದಾರೆ ಎಂದು ಅವರು ಆರೋಪಿಸಿದ್ದಾರೆ. ಬಿಳಿ ಬಟ್ಟೆ, ಅಷ್ಟಗಂಧ, ಬಿಳಿ ದಾರದ ಹುಂಡಿ, ಅರಳಿ ಎಲೆಗಳು ಹಾಗೂ ಪಂಚಶೀಲ ಧ್ವಜಗಳನ್ನು ಬಳಸಿ, ತ್ರಿಸರಣ ಪಂಚಶೀಲ ಪಠಣದೊಂದಿಗೆ ಪೂಜೆ ಸಲ್ಲಿಸಲ್ಲಿಸಬೇಕು.

ಈ ಕುರಿತು ಜಿಲ್ಲಾಡಳಿತ ಹೊದ ವರ್ಷವೆ ಆಚರಣೆಯಲ್ಲಿ ನಿಯಮ ಪಾಲನೆ ಸ್ಪಷ್ಟಪಡಿಸಿತ್ತು. ಅಧಿಕಾರಿಗಳು ತಾವು ಆಚರಿಸಿದ ಬುದ್ಧ ಪೂರ್ಣಿಮೆಯ ಜಿಪಿಎಸ್ ಫೋಟೋಗಳನ್ನು ಇಲಾಖೆಯ ಗ್ರೂಪ್‌ಗಳಲ್ಲಿ ಮತ್ತು ಸಾಮಾಜಿಕ ಜಾಲತಾಣಗಳ ಸ್ಟೇಟಸ್‌ಗಳಲ್ಲಿ ಹಾಕಿಕೊಂಡಿದ್ದಾರೆ. ಆ ಫೋಟೋಗಳನ್ನು ಗಮನಿಸಿದರೆ ನಿಯಮ ಪಾಲನೆಯಾಗದಿರುವುದು ಕಂಡುಬರುತ್ತದೆ. ಆದ್ದರಿಂದ ನಿಯಮ ಪಾಲನೆ ಇಲ್ಲದೆ ಕಾಟಾಚಾರದ ಆಚರಣೆ ಮಾಡಿದ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮವಹಿಸುವಂತೆ ಬಸವಣ್ಣಪ್ಪ ಆರ್. ಮಾಳಳ್ಳಿಕರ್ ಒತ್ತಾಯಿಸಿದ್ದಾರೆ.

# ಎಸ್‌ಎಸ್‌ಎಲ್‌ಸಿ ಪಿಯುಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿಧ್ಯಾರ್ಥಿಗಳಿಗೆ ಸನ್ಮಾನ



• ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ

ಹುಲಸೂರು ತಾಲೂಕಿನ ಬೇಲೂರ್ ಗ್ರಾಮದ ಶರಣ ಉರಿಲಿಂಗ ಪೆದ್ದಿ ಮಠ ಆಶ್ರಯದಲ್ಲಿ ಶರಣ ಉರಿಲಿಂಗ ಪೆದ್ದಿ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆಯ ಸಂಯುಕ್ತಾಶ್ರಯದಲ್ಲಿ ಬುದ್ದ ಪೂರ್ಣಿಮೆ ಮತ್ತು ಎಸ್ ಎಸ್ ಎಲ್ ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭ ಜರುಗಿತು. ದಿವ್ಯ ಸಾನಿಧ್ಯವನ್ನು ಬೇಲೂರಿನ ಉರಿಲಿಂಗ ಪೆದ್ದಿ ಮಠದ ಪೂಜ್ಯ ಶ್ರೀ ಪಂಚಾಕ್ಷರಿ ಸ್ವಾಮಿಜಿ ಮಾತನಾಡಿ ತಥಾಗತ ಗೌತಮ್ ಬುದ್ಧ ಜಯಂತಿ ಹಾಗೂ ಪರಿಕ್ಷೆ ಯಲ್ಲಿ ಉತ್ತಿರ್ಣರಾದ ಮಕ್ಕಳಿಗೆ ಶುಭ ಕೋರುತ್ತಾ ಸಾಮಾಜಿಕ ಶಾಂತಿಯ ಶರಣರ ನಾಡಾದ ಬೇಲೂರಿನಲ್ಲಿ ಶೈಕ್ಷಣಿಕ ಕ್ರಾಂತಿ ಆಗುತ್ತಿದ್ದು ಸಂತೋಷದ ವಿಷಯವಾಗಿದೆ.

ನಮ್ಮ ಗ್ರಾಮ ದಲ್ಲಿ ಎಸ್ ಎಸ್ ಎಲ್ ಸಿ ಪರಿಕ್ಷೆ ಯಲ್ಲಿ ಶಾಲೆಯ 100% ಫಲಿತಾಂಶ ಪಡೆದ ಮುಂದಿನ ವಿದ್ಯಾಭ್ಯಾಸ ಉತ್ತಮಗೊಳಿಸಿ ವಿವಿಧ ಹುದ್ದೆಗಳನ್ನು ಪಡೆದು ಸಾಮಾಜಿಕ, ಸಾಂಸ್ಕೃತಿಕ, ಸೇವೆ ಮಾಡಬೇಕೆಂಬ ಕರೆ ನೀಡಿದರು. ಹುಲಸೂರಿನ ತಹಸಿಲ್ದಾರರಾದ ಶಿವಾನಂದ ಮೇತ್ರೆ ಅವರು ಮಾತನಾಡಿ ಬೇಲೂರ ಗ್ರಾಮದ ಈ ಉರಿಲಿಂಗ ಪೆದ್ದಿ ಮಠದ ಆಶ್ರಯದಲ್ಲಿ ಬೇಲೂರ ರಾಜ್ಯದಾದ್ಯಂತ ಹೆಸರುವಾಸಿಯಾಗಿದೆ ವಿದ್ಯಾರ್ಥಿಗಳು ಮತ್ತು ಪೋಷಕರು ಸನ್ಮಾರ್ಗದ ಕಡೆ ನಡೆಯುತ್ತಿದ್ದಾರೆ ಎಂದರು.

ಬೇಲೂರ ಸರ್ಕಾರಿ ಪ್ರೌಢಶಾಲೆಯ ಮುಖ್ಯಗುರುಗಳಾದ ಶರಣ ಬಸಪ್ಪ ಬಿರಾದಾರ ಅವರು 25 ವರ್ಷಗಳ ನಂತರ 100% ಪ್ರತಿಷ್ಠಿತ ಫಲಿತಾಂಶ ಬಂದಿದೆ, ಇದಕ್ಕೆ ವಿದ್ಯಾರ್ಥಿಗಳು ಹಾಗೂ ಪಾಲಕರ ಶ್ರಮ ತುಂಬಾ ಮಹತ್ವದ್ದಾಗಿದೆ ಬೆಳಿಗ್ಗೆಯಿಂದ ಸಾಯಂಕಾಲದ ವರೆಗೆ ಶಾಲೆಯಲ್ಲಿ ಮಕ್ಕಳು ಕುಳಿತುಕೊಂಡು ಹೆಚ್ಚಿನ ವಿದ್ಯಾಭ್ಯಾಸ ಮಾಡಿ ಶಾಲೆಯ ಕೀರ್ತಿ ಹೆಚ್ಚಿಸಿದ್ದಾರೆ ಎಂದರು. ಮುಖ್ಯ ಅತಿಥಿಗಳಾಗಿ ಶಿಕ್ಷಕರಾದ ಸಂಜೀವಕುಮಾರ ನಡುಕರ ಮಾತನಾಡಿ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ ಗೌತಮ ಬುದ್ಧರ ತತ್ವ ಆದರ್ಶಗಳು ಪಾಲನೆ ಮಾಡಿ ಎಂದರು.

ಅಧ್ಯಕ್ಷತೆವಹಿಸಿ ಹುಲಸೂರ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಾದ ಮಹಾದೇವ ಲಕ್ಷ್ಮಣ ಜೆಮ್ಮು ಮಾತನಾಡಿ ಕಲ್ಯಾಣ ಕರ್ನಾಟಕ ಶೈಕ್ಷಣಿಕ, ಆರ್ಥಿಕವಾಗಿ, ಹಿಂದುಳಿದ ಶಿಕ್ಷಣ ಕ್ಷೇತ್ರದಲ್ಲಿ ಮುಂದೆ ಸಾಗುತ್ತಿದೆ ಎಂದರು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಬಸಪ್ಪ ಖಡ್ಡೆ, ಸಂಜೀವಕುಮಾರ ಖೇಲೆ ನ್ಯಾಯವಾದಿಗಳು. ಶರಣಪ್ಪ ಗದಲೇಗಾಂವ, ಗುರುನಾಥ ವಿಠ್ಠಲ ವಾಗ್ಮಾರೆ, ಅಶೋಕ ರಾಜೋಳೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಭಿಮಶ್ಯಾ ವಾಗ್ಮಾರೆ ಸ್ವಾಗತಿಸಿದರು,

# ತಂಗಡಗಿಯವರು ದೇಶದ ಪ್ರಧಾನಿಯ ಬಗ್ಗೆ ಎಚ್ಚರಿಕೆಯಿಂದ ಮಾತನಾಡಲಿ : ನವೀನ್ ಕುಮಾರ್

• ಮಲ್ಲಮ್ಮ ನುಡಿವಾರ್ತೆ, ಕೊಪ್ಪಳ

ಇತ್ತೀಚಿಗೆ ಕೊಪ್ಪಳದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡುತ್ತಾ ಪ್ರಧಾನಿ ಮೋದಿ ಅವರ ಬಗ್ಗೆ ಸಚಿವ ಶಿವರಾಜ ತಂಗಡಗಿ ಆಡಿದ್ದ ಕವನ ಮಾದರಿಯ ಮಾತುಗಳಿಗೆ ಬಿಜೆಪಿ ಜಿಲ್ಲಾಧ್ಯಕ್ಷ ನವೀನ್ ಕುಮಾರ್ ಗುಳಗಣ್ಣವರ ಆಕ್ಷೇಪ ವ್ಯಕ್ತಪಡಿಸಿ ಆ ಹೇಳಿಕೆ ವಾಪಸ್ ಪಡೆಯುವಂತೆ ಆಗ್ರಹಿಸಿದ್ದಾರೆ.



ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಗುಳಗಣ್ಣವರ ದೇಶದ ಪ್ರಧಾನ ಮಂತ್ರಿಗಳ ಬಗ್ಗೆ ಎಚ್ಚರಿಕೆಯಿಂದ ಮಾತನಾಡಿರಿ. ಪ್ರಧಾನಿಯವರ ಕುಟುಂಬದ ವಯಕ್ತಿಕ ವಿಷಯಗಳ ಬಗ್ಗೆ ಕೆಳಮಟ್ಟದ ಮಾತುಗಳು ಹೇಳುವುದು ಭಾರತೀಯ ಸಂಸ್ಕೃತಿಗೆ ವಿರುದ್ಧ. ಇದು 140 ಕೋಟಿ ಭಾರತೀಯರ ಅಪಮಾನ. ಕೂಡಲೇ ದೇಶದ ಜನರ ಮುಂದೆ ಕ್ಷಮೆ ಕೇಳಬೇಕು ಎಂದು ಗುಳಗಣ್ಣವರ ಹೇಳಿದ್ದಾರೆ.

ಶಿವರಾಜ ತಂಗಡಗಿ ಅವರಿಗೆ ಸಚಿವ ಸ್ಥಾನ ತಪ್ಪುವ ಭಯ ಇದೆ. ಅದಕ್ಕೆ ಹೈಕಮಾಂಡ್ ಮನವೊಲಿಸಲು ಮೋದಿಯವರನ್ನು ಬಯ್ಯುತ್ತಿದ್ದಾರೆ.

ಬಿಜೆಪಿ ಸದಾ ಮಹಿಳಾ ಮೀಸಲಾತಿ ಪರವಾಗಿದೆ. ಮಹಿಳಾ ಮೀಸಲಾತಿ ವಿರೋಧಿಸುತ್ತಾ ಬಂದಿದ್ದು ಕಾಂಗ್ರೆಸ್. ತಂಗಡಗಿ ಹೇಳಿಕೆ ಕಾಂಗ್ರೆಸ್‌ನ ಹತಾಶೆ ನಿರಾಶೆ ಮತ್ತು ಅದರ ರಾಜಕಾರಣದ ಪ್ರತಿಬಿಂಬ ಎಂದು ನವೀನಕುಮಾರ್ ಗುಳಗಣ್ಣವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬಸವ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿಯಾಗಿ ಗಾಯಕವಾಡ ನೇಮಕ

ಮಲ್ಲಮ್ಮ ನುಡಿ ವಾರ್ತೆ, ಬಸವಕಲ್ಯಾಣ

ಬಸವಕಲ್ಯಾಣದ ಬಸವ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿಗಳಾಗಿ ಶ್ರೀ ರವೀಂದ್ರ ಬಿ. ಗಾಯಕವಾಡ ಅವರನ್ನು ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಡಾ. ತಾತ್ಯಾರಾವ ಕಾಂಬಳೆ ಅವರು ನೇಮಕಾತಿ ಆದೇಶ ನೀಡಿ ಗೌರವಿಸಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಖಜಾಂಚಿಗಳಾದ ಡಾ. ಪ್ರಜ್ಞಾ ಕಾಂಬಳೆ ಅವರು ಮಾತನಾಡಿ, ನಮ್ಮ ಸಂಸ್ಥೆಯ 50 ವರ್ಷಗಳ ಐತಿಹಾಸಿಕ ದಾಖಲೆವುಳ್ಳದಾಗಿದೆ, ಸಾವಿರಾರು ವಿದ್ಯಾರ್ಥಿಗಳನ್ನು ಉಚಿತ ಶಿಕ್ಷಣ ನೀಡುತ್ತಾ ಬಂದಿದೆ, ನಮ್ಮ ಸಂಸ್ಥೆಯ ಅಭಿವೃದ್ದಿಗೆ ರವೀಂದ್ರ ಗಾಯಕವಾಡ ಅವರ ಸಹಕಾರ ಅಗತ್ಯವಿದ್ದುದ್ದರಿಂದ ಅವರಿಗೆ ಪ್ರಮುಖ ಜವಾಬ್ದಾರಿ



ನೀಡಲಾಗಿದೆ ಎಂದರು.

ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಡಾ. ತಾತ್ಯಾರಾವ ಕಾಂಬಳೆ ಅವರು ಮಾತನಾಡಿ, ಬೀದರ ಜಿಲ್ಲೆಗೆ ಶ್ರೀ ರವೀಂದ್ರ ಗಾಯಕವಾಡ ಅವರ ಕೊಡುಗೆ ಅಪಾರವಿದ್ದು, ಶ್ರೀಯುತರು ನಮ್ಮ ಸಂಸ್ಥೆಗೂ ಅಮೂಲ್ಯ ಕೊಡುಗೆ ನೀಡಲು ಪ್ರಮುಖ ಜವಾಬ್ದಾರಿ ನೀಡಿ ಆದೇಶ ನೀಡಿದ್ದೇವೆ ಎಂದರು.

ಸಂಸ್ಥೆಯ ನೂತನ ಆಡಳಿತಾಧಿಕಾರಿಗಳಾಗಿ ನೇಮಕಗೊಂಡ ಶ್ರೀ ರವೀಂದ್ರ ಗಾಯಕವಾಡ ಅವರು ಮಾತನಾಡಿ, ಸಂಸ್ಥೆಯ ನಿಯಮಾವಳಿ, ಸರ್ಕಾರದ ಅನ್ವಯಿಸುವ ನಿಯಮಗಳು ಹಾಗೂ ಆಡಳಿತ ಮಂಡಳಿಯ ನಿರ್ದೇಶನದಂತೆ ತಮ್ಮ ಕರ್ತವ್ಯಗಳನ್ನು ಜವಾಬ್ದಾರಿಯಿಂದ ನಿರ್ವಹಿಸುತ್ತೇನೆ ಎಂದರು.

ಈ ಸಂದರ್ಭಯದಲ್ಲಿ ಡಾ. ಬಿ.ಆರ್ ಅಂಬೇಡ್ಕರ ಅರ್ಬನ್ ಯುಥ ಕ್ಲಬ್ ಪ್ರಧಾನ ಕಾರ್ಯದರ್ಶಿ ಶ್ರೀ ನಾಗನಾಥ ಗಜರೆ, ಶ್ರೀ ವಿನೋದ ಜಾಧವ, ಕಲಬುರಗಿಯ ಮಹಾನಗರ ಪಾಲಿಕೆಯ ವಲಯ–2 ಆಯುಕ್ತರಾದ ಶ್ರೀ ಪ್ರಬುದ್ಧ ಕಾಂಬಳೆ,

ಎನ್. ವ್ಹಿ. ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ. ದಯಾನಂದ ಶಾಸ್ತ್ರಿ, ಎಇಇ ಶ್ರೀ ದಿಲೀಪಕುಮಾರ ತಳವಾರ, ಶ್ರೀ ಧರ್ಮರಾಜನ ಕಾಂಬಳೆ, ಕಾಲೇಜಿನ ಪ್ರಾಂಶುಪಾಲರಾದ ಡಾ. ಜೈಶೇನಪ್ರಸಾದ, ಶ್ರೀ ಶ್ರೀಧರ ಭಲವಾದಿ, ಶ್ರೀ ಶೇಖ್ ಎಸ್. ಕೆ, ಶ್ರೀ ವಿಜಯಕುಮಾರ ಪಂಡಿತ, ಶ್ರೀ ವಿಲಾಸ ಜಾಧವ, ಶ್ರೀ ಶ್ರೀನಿವಾಸ ಫುಲೆ, ಶ್ರೀ ನಾಗರಾಜ ಶೀಲವಂತ, ಶ್ರೀಮತಿ ಶಿಲ್ಪಾ ಕಾಲೇಬಾಗ್, ಶ್ರೀ ದೀಪಕ ಮೋರೆ ಇತರರು ಉಪಸ್ಥಿತರಿದ್ದರು.

## ಬಾಕಿ ಪ್ರಕರಣಗಳನ್ನು ತ್ವರಿತವಾಗಿ ನಿವಾರಣೆ: ಬನಸೋಡೆ

• ಮಲ್ಲಮ್ಮ ನುಡಿ ವಾರ್ತೆ, ಬೀದರ

ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇರುವ ಪ್ರಕರಣಗಳನ್ನು ತ್ವರಿತವಾಗಿ ನಿವಾರಣೆ ಮಾಡುವ ಉದ್ದೇಶದಿಂದ ರಾಜ್ಯದ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ನ್ಯಾಯಾಲಯಗಳ ನ್ಯಾಯಾಧೀಶರೊಂದಿಗೆ ವಿಡಿಯೋ ಸಂವಾದ ಸಭೆ ನಡೆಸಲಾಯಿತು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಪ್ರಕಾಶ ಅರ್ಜುನ ಬನಸೋಡೆ ತಿಳಿಸಿದ್ದಾರೆ.

ಅವರು ಗುರುವಾರ ಜಿಲ್ಲಾ ನ್ಯಾಯಾಲಯದ ಸಭಾಂಗಣದಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆದ ಈ ಮಹತ್ವದ ಸಭೆಯಲ್ಲಿ ಸುಪ್ರೀಂ ಕೋರ್ಟ್‌ನ ಮಾರ್ಗದರ್ಶನದಂತೆ



ಬಾಕಿ ಇರುವ ಪ್ರಕರಣಗಳ ಶೀಘ್ರ ವಿಲೇವಾರಿ ಕುರಿತು ಚರ್ಚೆ ನಡೆಯಿತು. ಈ ವೇಳೆ ಕರ್ನಾಟಕದ ವಿವಿಧ ಜಿಲ್ಲೆಗಳ ನ್ಯಾಯಾಧೀಶರು ಭಾಗವಹಿಸಿ, ತಮ್ಮ ತಮ್ಮ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಸ್ಥಿತಿಗತಿ ಹಾಗೂ ಪರಿಹಾರ ಕ್ರಮಗಳ ಬಗ್ಗೆ ವಿವರಿಸಿದರು.

ಸಭೆಯಲ್ಲಿ ಮಾತನಾಡಿದ ಅಧಿಕಾರಿಗಳು, ಪ್ರಕರಣಗಳನ್ನು ನ್ಯಾಯಾಲಯದ ಹೊರಗಡೆಯೇ ಪರಸ್ಪರ ಸಮಾಧಾನದಿಂದ (ರಾಜಿ) ಬಗೆಹರಿಸುವ ವ್ಯವಸ್ಥೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ ಎಂದು ತಿಳಿಸಿದರು. ಇದರಿಂದ ನ್ಯಾಯಾಲಯಗಳ ಮೇಲಿನ ಭಾರ ಕಡಿಮೆಯಾಗುವುದಲ್ಲದೆ, ಸಾರ್ವಜನಿಕರಿಗೆ ಕಡಿಮೆ ಅವಧಿಯಲ್ಲಿ ನ್ಯಾಯ ದೊರಕಲು ಸಹಕಾರಿ ಆಗಲಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ, ಆಯಾ ತಾಲ್ಲೂಕು ಮತ್ತು ಜಿಲ್ಲಾ ನ್ಯಾಯಾಲಯಗಳಲ್ಲಿ ರಾಜಿ ಮೂಲಕ ಪ್ರಕರಣಗಳನ್ನು ಬಗೆಹರಿಸಲು ವಿಶೇಷ ಅವಕಾಶಗಳನ್ನು ಕಲ್ಪಿಸಲಾಗಿದೆ. ಇದರ ಪ್ರಯೋಜನವನ್ನು ಸಾರ್ವಜನಿಕರು ಪಡೆದುಕೊಳ್ಳುವಂತೆ ಕರೆ ನೀಡಲಾಗಿದೆ.

ವಿಡಿಯೋ ಸಂವಾದದ ವೇಳೆ ನ್ಯಾಯಾಧೀಶರು ಪ್ರಕರಣಗಳ ಶೀಘ್ರ ವಿಲೇವಾರಿ, ಡಿಜಿಟಲ್ ವಿಧಾನಗಳ ಪರಿಣಾಮಕಾರಿ ಬಳಕೆ ಮತ್ತು ನ್ಯಾಯಾಂಗ ವ್ಯವಸ್ಥೆಯನ್ನು ಇನ್ನಷ್ಟು ಸುಧಾರಿಸುವ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

ಈ ಸಭೆಯು ನ್ಯಾಯಾಂಗ ವ್ಯವಸ್ಥೆಯನ್ನು ಹೆಚ್ಚು ಪರಿಣಾಮಕಾರಿ ಮತ್ತು ಜನಸ್ನೇಹಿಯಾಗಿಸಲು ಒಂದು ಪ್ರಮುಖ ಹೆಜ್ಜೆಯಾಗಿದ್ದು, ಬಾಕಿ ಇರುವ ಪ್ರಕರಣಗಳ ನಿವಾರಣೆಗೆ ಹೊಸ ದಿಕ್ಕು ತೋರಿಸಿದೆ ಎಂದು ತಿಳಿದುಬಂದಿದೆ.

# ಮಹಿಳಾ ಪೊಲೀಸ್ ಠಾಣೆಯಲ್ಲಿ ಮಹಿಳಾ ಸಿಬ್ಬಂದಿಗಳ ನೇಮಕಕ್ಕೆ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಬಳ್ಳಾರಿ ಜಿಲ್ಲಾ ಹೋರಾಟದ ಫಲವಾಗಿ ಮಹಿಳೆಯರ ರಕ್ಷಣೆಗಾಗಿ ಮಹಿಳಾ ಪೊಲೀಸ್ ಸ್ಟೇಷನ್ ಪ್ರಾರಂಭವಾಯಿತು, ಆದರೆ ಇತ್ತೀಚಿನ ದಿನಗಳಲ್ಲಿ ಮಹಿಳಾ ಪೊಲೀಸ್ ಸ್ಟೇಷನ್ ನಲ್ಲಿ ಮಹಿಳಾ ಸಿಬ್ಬಂದಿಗಳ ಸಂಖ್ಯೆ ಕಡಿಮೆಯಾಗಿದ್ದು ಇದರಿಂದ ಮಹಿಳೆಯರ ಮೇಲಿನ ದೌರ್ಜನ್ಯ ಮತ್ತಿತರ ಸಮಸ್ಯೆಗಳ ಬಗ್ಗೆ ಪುರುಷ ಪೊಲೀಸ್ ಅಧಿಕಾರಿಗಳೊಂದಿಗೆ ಹೇಳಿಕೊಳ್ಳಲು ಮಹಿಳೆಯರಿಗೆ ಕಷ್ಟವಾಗಿದೆ.



ಅಲ್ಲದೆ ಮಹಿಳೆಯರ ಸಮಸ್ಯೆಗಳು ಪರಿಹಾರವಾಗಬೇಕಾದರೆ ಹಣಕಾಸಿನ ವ್ಯವಹಾರಗಳು ನಡೆಯುತ್ತಿವೆ. ಮಹಿಳಾ ಸಮಸ್ಯೆಗಳು ಬಗೆಹರಿಸಲು ಮಹಿಳಾ ಪೊಲೀಸ್ ಸ್ಟೇಷನ್ ಹೆಸರಿಗಷ್ಟೇ ಸೀಮಿತವಾಗಿದೆ ಎಂಬ ಪರಿಸ್ಥಿತಿ ನಿರ್ಮಾಣವಾಗಿದ್ದು ಹಣವಿಲ್ಲದೆ ಕೆಲಸಗಳು ನಡೆಯುವುದು ಕಷ್ಟ ಎಂಬಂತಾಗಿದೆ. ಪೊಲೀಸ್ ಸ್ಟೇಷನ್ ಸುತ್ತಮುತ್ತ ಮಹಿಳೆಯರಿಗಿಂತ ಪುರುಷರ ಸಂಖ್ಯೆ ಹೆಚ್ಚಾಗಿರುತ್ತದೆ. ಎಲ್ಲ ಸಮಸ್ಯೆಗಳ ಗಮನಹರಿಸಿ ಬಗೆಹರಿಸಬೇಕೆಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಗಿದೆ.

ಈ ಸಂದರ್ಭಧಲ್ಲಿ ರಾಜ್ಯ ಅಧ್ಯಕ್ಷರು ಜೆ.ಚಂದ್ರ ಕುಮಾರಿ, ಜಿಲ್ಲಾ ಕಾರ್ಯದರ್ಶಿ ಈ.ವರಲಕ್ಷ್ಮೀ, ಜಿಲ್ಲಾ ಖಜಾಂಚಿ ಟಿ .ಈರಮ್ಮ, ಜಿಲ್ಲಾ ಸಮಿತಿ ಸದಸ್ಯರು ಓಂಕಾರಮ್ಮ ತಾಲ್ಲೂಕು ಸಮಿತಿ ಸದಸ್ಯರು ಜಿ.ಹೇಮಾವತಿ ಉಪಸ್ಥಿತರಿದ್ದರು.

# ಪುರಸಭೆ ಕಾರ್ಯಾಲಯದಲ್ಲಿ ಬುದ್ಧ ಪೂರ್ಣಿಮೆ ಆಚರಣೆ



• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್

ಪಟ್ಟಣದ ಪುರಸಭೆ ಕಾರ್ಯಾಲಯದಲ್ಲಿ ಬುದ್ಧ ಪೂರ್ಣಿಮೆ ಅಂಗವಾಗಿ ಗೌತಮ ಬುದ್ಧರ ಜನ್ಮದಿನವನ್ನು ಭಕ್ತಿಪೂರ್ವಕವಾಗಿ ಶುಕ್ರವಾರ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಪುರಸಭೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಬುದ್ಧರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಗೌರವ ನಮನ ಸಲ್ಲಿಸಿದರು. ಶಾಂತಿ, ಸಮಾನತೆ ಮತ್ತು ಸಹಬಾಳ್ವೆಯ ಸಂದೇಶಗಳನ್ನು ವಿಶ್ವಕ್ಕೆ ನೀಡಿದ ಬುದ್ಧರ ತತ್ವಗಳನ್ನು ಸ್ಮರಿಸಲಾಯಿತು.

ಪುರಸಭೆ ಮುಖ್ಯಾಧಿಕಾರಿ ಶರಣಪ್ಪ ಎಮ್ ಮಾತನಾಡಿ, “

ದ್ವೇಷವನ್ನು ಪ್ರೀತಿಯಿಂದ ಗೆಲ್ಲೋಣ, ಅಶಾಂತಿಯನ್ನು ಶಾಂತಿಯಿಂದ ಮಣಿಸೋಣ ಎಂಬ ಬುದ್ಧನ ಸಂದೇಶಗಳು ಸಮಾಜದಲ್ಲಿ ಸದಾ ಪಸರಿಸಬೇಕು. ಇವು ಇಂದಿನ ಕಾಲಘಟ್ಟದಲ್ಲಿ ಅತ್ಯಂತ ಪ್ರಾಸಕ್ತಿಯಾಗಿದೆ” ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪುರಸಭೆಯ ವ್ಯವಸ್ಥಾಪಕ ಮಲ್ಲಿಕಾರ್ಜುನ ಎಸ್ ಸೇರಿದಂತೆ ಸಿಬ್ಬಂದಿ ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಜಿಲ್ಲಾ ಕ.ಸಾ.ಪದಿಂದ ಹೆಬ್ರಿಯವರ ಅಂತರಂಗದಾಲಾಪ ಕೃತಿ ಲೋಕಾರ್ಪಣೆ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಮಂಡ್ಯದ ಹಿರಿಯ ಸಾಹಿತಿಗಳಾದ ಡಾ. ಪ್ರದೀಪ ಕುಮಾರ್ ಹೆಬ್ರಿ ಅವರು ಕಳೆದ ನಲವತ್ತು ವರ್ಷಗಳಿಂದ ನಿರಂತರವಾಗಿ ಸಾಹಿತ್ಯ ಕೈಂಕರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಕಥೆ, ಕಾವ್ಯ, ಕಾದಂಬರಿ, ಚಿಂತನ, ಮಹಾಕಾವ್ಯ, ಜೀವನ ಪರಿಚಯ ಹೀಗೆ ವಿವಿಧ ವಿಷಯಗಳಲ್ಲಿ ಆರುನೂರಕ್ಕೂ ಹೆಚ್ಚು ಕೃತಿಗಳನ್ನು ರಚಿಸಿ ಅಚ್ಚರಿ ಹಾಗೂ ಅನುಭೂತಿಗೆ ಪಾತ್ರರಾದವರು. ಅವರ ಹೊಸ ಕೃತಿ ' ಅಂತರಂಗದಾಲಾಪ ' ನೂರು ಲೇಖನಗಳ ಕೃತಿ. ಒಂದೊಂದು ಲೇಖನವೂ ನಮ್ಮ ಆತ್ಮಜಾಗೃತಿಗೆ ಪ್ರೇರಕಶಕ್ತಿಯಾಗಿ ಕಂಗೊಳಿಸುತ್ತಿದೆ ಎಂದು ಯಾದಗಿರಿ ಜಿಲ್ಲಾ ಕ ಸಾ ಪ ಅಧ್ಯಕ್ಷ ಸಿದ್ದಪ್ಪ ಎಸ್. ಹೊಟ್ಟಿಯವರುಹೇಳಿದರು, ಕೃತಿ ಲೋಕಾರ್ಪಣೆ ಮಾಡಿ ಮಾತನಾಡಿದ ಅವರು ಇಂತಹ ಕೃತಿಯನ್ನು ಓದಿದಂತೆ ನಮ್ಮ ಚಿಂತನಾ ಸಾಮರ್ಥ್ಯ ವಿಕಸಿಸುತ್ತದೆ ಡಾ. ಹೆಬ್ರಿಯವರ 'ಅಂತರಂಗದಾಲಾಪ 'ಬದುಕು ಹೇಗಿರಬೇಕೆಂಬುದನ್ನು ನಾಡಿಗೆ ಅರುಹಲು ಬರೆದಿರುವ ಲೇಖನಗಳ ಸಂಕಲನ ಕೃತಿ. ಈ ಕೃತಿಯ ವಿಷಯ ವೈವಿಧ್ಯತೆ ನಮ್ಮಲ್ಲಿ ಜೀವನಾಸಕ್ತಿಯನ್ನು ನಿತ್ಯ ಪ್ರೇರೇಪಿಸುವಂತಹದ್ದು. ನಮ್ಮ ಬದುಕ ರೀತಿ–ನೀತಿಗಳು ಎಂತಿರಬೇಕೆಂಬುದನ್ನು ನೂರಾರು ವಿದ್ವಾಂಸರು ಅವರವರ ಮನೋಧರ್ಮಕ್ಕೆ ಅನುಸಾರ ಧನಾತ್ಮಕ ನಿಲುವಿನಲ್ಲಿ ಅರುಹಿದ್ದಾರೆ. ಇದಕ್ಕೆ ಪೂರಕವಾಗಿ ಹೆಬ್ರಿಯವರ ಈ ಕೃತಿ ಪ್ರಕಟವಾಗಿದೆ. ಒಂದೊಂದು ಲೇಖನವೂ ಮನಕತ್ತಲೆಯ ಕಳೆಯುವಲ್ಲಿ ಕೆಲಸಮಾಡುವ ನಂದಾದೀಪ. ಇದು ಕೇವಲ ಆಲಾಪವಲ್ಲ, ಅನುಪಮತೆಯ ಜೀವಜಲ. ಮನವಿಟ್ಟು ಓದಿದರೆ ನಮ್ಮ ಬದುಕ ನಿತ್ಯಮಾರ್ಗದರ್ಶಕವಾಗುವ ಲೇಖನಗಳ ಕೃತಿಯಿದು ಎಂದರು. ಇದೆ ಜಿಲ್ಲಾ ಕಸಾಪದಿಂದ ಡಾ. ಹೆಬ್ರಿಯವರನ್ನು ವಿಶೇಷವಾಗಿ ಗೌರವಿಸಲಾಯಿತು. ಪ್ರಮುಖರಾದ ಡಾ. ಸುಭಾಷಚಂದ್ರ ಕೌಲಗಿ, ಪ್ರಕಾಶ ಎಸ್. ಅಂಗಡಿ ಕನ್ನೆಳ್ಳಿ, ಬಸವರಾಜ ಮೋಟ್ನಳ್ಳಿ, ಚನ್ನಪ್ಪ ಠಾಣಗುಂದಿ, ನಾಗೇಂದ್ರ ಜಾಜಿ, ನಾಗಪ್ಪ , ದೇವರಾಜ ವರ್ಕನಳ್ಳಿ ಸೇರಿದಂತೆ ಇತರರಿದ್ದರು.


# ಸಿಡಿಲಿಗೆ 60 ಕ್ಕೂ ಹೆಚ್ಚು ಕುರಿಗಳು ಬಲಿ ಸೂಕ್ತ ಪರಿಹಾರಕ್ಕೆ ಒತ್ತಾಯ

• ಮಲ್ಲಮ್ಮ ನುಡಿ ವಾರ್ತೆ, ಯಾದಗಿರಿ



ಇತ್ತೀಚಿಗೆ ಜಿಲ್ಲೆಯ ಗುರುಮಿಟ್ಕಲ್ ತಾಲೂಕಿನ ಬೂದುರು ಗ್ರಾಮದಲ್ಲಿ 60 ಕ್ಕೂ ಹೆಚ್ಚು ಕುರಿಗಳು ಸಿಡಿಲಿಗೆ ಬಲಿಯಾಗಿದ್ದು ಸೂಕ್ತ ಪರಿಹಾರ ನೀಡುವಂತೆ ಕುರುಬ ಸಂಘದ ಜಿಲ್ಲಾಧ್ಯಕ್ಷ ಮಲ್ಲಣ್ಣ ಐಕೂರ ಒತ್ತಾಯಿಸಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು ಬೂದೂರು ಗ್ರಾಮದ ಮಲ್ಲಪ್ಪ ಕುರಬರು, ಆಶಪ್ಪ, ಲಕ್ಷ್ಮಮಪ್ಪ, ಹಣಮಂತ,ಜಾಲಪ್ಪ ಸೇರಿದಂತೆ ಇನ್ನಿತರ ಕುರಿ ಗಾಯಿಗಳ ಹೊಡೆತನದ 60 ಕ್ಕೂ ಹೆಚ್ಚು ಕುರಿಗಳು ಸಿಡಿಲಿಗೆ ಬಲಿಯಾಗಿದ್ದು ದೊಡ್ಡ ಪ್ರಮಾಣದ ನಷ್ಟವಾಗಿದೆ ಈಗ ಕುರಿ ಕಾಯಿಗಳು ತುಂಬಾ ಸಂಕಷ್ಟದಲ್ಲಿದ್ದಾರೆ.ಕೂಡಲೆ ಸರ್ಕಾರ ಜಿಲ್ಲಾಡಳಿತ, ಪಶು ಸಂಗೋಪನಾ ಇಲಾಖೆ, ಶಾಸಕರು ಹೆಚ್ಚಿನ ಕಾಳಜಿ ವಹಿಸಿ ಕುರಿಗಾಹಿಗಳಿಗೆ ಸೂಕ್ತ ಪರಿಹಾರ ನೀಡಬೇಕು ಕಳೆದ ಕೆಲವು ದಿನಗಳ ಹಿಂದೆ ಕುರಿಗಾಹಿಗಳು ತಮ್ಮ ಕುರಿ ಮತ್ತು ಮೇಕೆಗಳನ್ನು

ಮೇಯಿಸಲು ಅಡವಿಗೆ ತೆರಳಿದ್ದ ಸಮಯದಲ್ಲಿ ಆಗ ಏಕಾಏಕಿ ಬಾರಿ ಗುಡುಗು ಸಿಡಿಲು ಮಳೆಗೆ ಕುರಿಗಳು ಸಾವನ್ನಪ್ಪಿವೆ ಈ ಕುರಿಗಳನ್ನು ನಂಬಿಕೊಂಡು ಜೀವನೋಪಾಯ ನಡೆಸುತ್ತಿದ್ದ ಆ ಕುರಿಗಾಹಿಗಳಿಗೆ ದಿಕ್ಕು ತೋಚದಂತಾಗಿದೆ ಆದ್ದರಿಂದಲೇ ಅಧಿಕಾರಿಗಳು ನಿರ್ಲಕ್ಷ ವಹಿಸದೆ ಬಡ ಕುರಿಗಾಹಿಗಳಿಗೆ ಸರ್ಕಾರ ಹಾಗೂ ಶಾಸಕರ ತಮ್ಮ ನಿದಿಯಲ್ಲಿ ಕುರಿ ಕಾಯಿಗಳಿಗೆ ಹೆಚ್ಚಿನ ಪರಿಹಾರ ಒದಗಿಸಬೇಕು. ಪರಿಹಾರ ನೀಡುವಲ್ಲಿ ಒಂದು ವೇಳೆ ಅಧಿಕಾರಿಗಳು ಜನಪ್ರತಿನಿಧಿಗಳು ನಿರ್ಲಕ್ಷ ವಯಿಸಿದ್ದಲ್ಲಿ ಕುರುಬ ಸಂಘದ ಜಿಲ್ಲಾ ಘಟಕದ ವತಿಯಿಂದ ಉಗ್ರ ಹೋರಾಟ ಮಾಡುವುದಾಗಿ ಕುರುಬ ಸಂಘದ ಜಿಲ್ಲಾಧ್ಯಕ್ಷ ಮಲ್ಲಣ್ಣ ಐಕೂರ ಎಚ್ಚರಿಸಿದ್ದಾರೆ.



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ನಾಗಿರೆಡ್ಡಿ ಮಾಲಿಪಾಟೀಲ ಅವರ ಹುಟ್ಟುಹಬ್ಬವನ್ನು ಸ್ನೇಹಿತರಾದ ವಿಜಯಕುಮಾರ್ ನೀರೆಟಿ ನೇತೃತ್ವದಲ್ಲಿ ಸ್ಥಳೀಯ ಬಾಲ್ಯ ಸ್ನೇಹಿತರು, ಶಾಲಾ ಶಿಕ್ಷಕರು, ವಿವಿಧ ಪಕ್ಷಗಳ ಮುಖಂಡರು ಹಾಗೂ ಅಭಿಮಾನಿಗಳ ಸಮ್ಮುಖದಲ್ಲಿ ಸ್ನೇಹಪೂರ್ಣ ಜನ್ಮದಿನವನ್ನು ಆಚರಿಸಲಾಯಿತು.

# ಸಿದ್ದಾರ್ಥ್ ಕೋಚಿಂಗ್ ಸೇಂಟರ್‌ದಲ್ಲಿ ಬುದ್ದ ಜಯಂತಿ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಯಾದಗಿರಿ ತಾಲೂಕಿನ ಯರಗೋಳದ ಸಿದ್ದಾರ್ಥ್ ಕೋಚಿಂಗ್ ಸೇಂಟರ್ ನಲ್ಲಿ ಬುದ ಜಯಂತಿ ಆಚರಿಸಲಾಯಿತು ಈ ಸಂದರ್ಭದಲ್ಲಿ ಸಿದ್ದಾರ್ಥ್ ಕೋಚಿಂಗ್ ಸೇಂಟರ್ ನ ನಿರ್ದೇಶಕರಾದ ಶ್ರೀ ಭೀಮಾಶಂಕರ ಎಂ ಯರಗೋಳ, ಮುಖ್ಯ ಗುರುಗಳಾದ ಶ್ರೀಮತಿ ಮಾಲಾಶ್ರೀ

ಬಿ ಯರಗೋಳ ಹಾಜಿಸಾಬ ಕುಂಬರಳ್ಳಿ ಸಿದ್ದಾರ್ಥ್ ಕೋಚಿಂಗ್ ಸೇಂಟರ್ ನ ವಿದ್ಯಾರ್ಥಿಗಳು ಬಾಗವಹಿಸಿದ್ದರು.



ವಿಜಯನಗರ :ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಪೊಲೀಸ್ ಇಲಾಖೆ, ಕಾರ್ಮಿಕ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದಲ್ಲಿ ನಗರದ ಟಿ.ಎಂ.ಎ.ಇ.ಎಸ್ ಪಾಲಿಟೆಕ್ನಿಕ್ ಸಂಸ್ಥೆಯಲ್ಲಿ ಶುಕ್ರವಾರ ಕಾರ್ಮಿಕ ದಿನಾಚರಣೆ ಆಚರಿಸಲಾಯಿತು.

ಈ ವೇಳೆ ಸಿಜೆಎಂ ಹಾಗೂ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶ ಸುಬ್ರಮಣ್ಯ. ಎನ್, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿ ಸದಸ್ಯ ಕಾರ್ಯದರ್ಶಿ ಪ್ರಶಾಂತ್ ನಾಗಾಲಾಪುರ್, ವಕೀಲರ ಸಂಘದ ಅಧ್ಯಕ್ಷ ಗುಜ್ಜಲ ನಾಗರಾಜ್, ಕಾರ್ಮಿಕ ನಿರೀಕ್ಷಕರಾದ ಜಿ.ಬಿ.ದೂಪದ್, ಶಿವಶಂಕರ್ ತಳವಾರ್ ಮತ್ತಿತರರು ಇದ್ದರು.

# ಯುದ್ಧದ ಬದಲಿಗೆ ಜಗತ್ತು ಬುದ್ಧನ ಮಾರ್ಗ ಆಯ್ಕೆ ಮಾಡಬೇಕು: ಸಿರವಾಳ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಇಂದಿನ ಆಧುನಿಕ ಜಗತ್ತಿನ ದೇಶಗಳು ಯುದ್ಧದ ಬದಲಿಗೆ ಶಾಂತಿ, ಸಮಾನತೆ ಮತ್ತು ಸಹಬಾಳ್ವೆಯನ್ನು ಸಾರಿದ ಗೌತಮ ಬುದ್ಧ ಅವರ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳಬೇಕು ಎಂದು ಸಂಶೋಧಕ ಹಾಗೂ ಸಹಾಯಕ ಖಜಾನೆ ಅಧಿಕಾರಿ ಡಾ. ಎಂ.ಎಸ್. ಸಿರವಾಳ ಅಭಿಪ್ರಾಯಪಟ್ಟರು. ತಾಲೂಕು ಆಡಳಿತ ಮತ್ತು ನಗರ ಸಭೆ ಶಹಾಪುರ ಇವರ ಸಂಯುಕ್ತ ಆಶ್ರಯದಲ್ಲಿ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಭಗವಾನ್ ಬುದ್ಧ ಜಯಂತ್ಯೋತ್ಸವ2026 ಕಾರ್ಯಕ್ರಮದಲ್ಲಿ ಅವರು ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಗ್ರೇಡ್2 ತಹಸೀಲ್ದಾರರಾದ ಪ್ರಸನ್ನ ಅವರು ಅಧ್ಯಕ್ಷೀಯ ಭಾಷಣ ಮಾಡಿದರು.

ಆರಕ್ಷಕ ನಿರೀಕ್ಷಕರಾದ ಎಸ್.ಎಂ. ಪಾಟೀಲ್ ಅವರು ಬುದ್ಧರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ನಗರ ಸಭೆಯ ಕೊಟ್ರೇಶ್ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಆರೋಗ್ಯ ಇಲಾಖೆಯ ಸಂಗಣ್ಣ ಸಾಲಿ, ಪಶು ಇಲಾಖೆಯ ಡಾ. ಅಣ್ಣಾರಾವ್ ಸೇರಿದಂತೆ ವಿವಿಧ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು, ಸಿಬ್ಬಂದಿ ಮತ್ತು ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಶಿಕ್ಷಕರ ಸಂಘದ ಅಧ್ಯಕ್ಷ ಲಕ್ಷ್ಮಣ ಲಾಳಸೇರಿ ಕಾರ್ಯಕ್ರಮವನ್ನು ನಿರೂಪಿಸಿದರು. ಕಾರ್ಯಕ್ರಮಕ್ಕೂ ಮುನ್ನ ಸಿಬಿ ಕಮಾನನಿಂದ ಬುದ್ಧರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪಟ್ಟಣದ ಮುಖ್ಯ ರಸ್ತೆಯಲ್ಲಿ ಮೆರವಣಿಗೆ ನಡೆಸಿ ಗೌರವ ಸಲ್ಲಿಸಲಾಯಿತು.



ಬಸವಕಲ್ಯಾಣ :– ಸಂಗೀತ ನೃತ್ಯ ಅಕಾಡೆಮಿ ಬೆಂಗಳೂರು ವತಿಯಿಂದ 2025 – 26ನೇ ಸಾಲಿನ "ಕರ್ನಾಟಕ ಕಲಾಶ್ರೀ" ಪ್ರಶಸ್ತಿ ಪಡೆದಿರುವ ವಿಠಲ ಪೂಜಾರಿ ಗದಲೇಗಾಂವ ಬಿ. ಅವರಿಗೆ ಹಾರಕೂಡದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ಶ್ರೀಮಠದಲ್ಲಿ ಸತ್ಕರಿಸಿ ಆಶೀರ್ವದಿಸಿದರು. ಈ ಸಂದರ್ಭದಲ್ಲಿ ಗುರು ದೇಗಾಂವ, ಈರಣ್ಣ ಕುಸಂಗೆ, ಮುದ್ದಾರೆಡ್ಡಿ ಗದಲೇಗಾಂವ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ)

# ಗೌತಮ ಬುದ್ದ ಏಷಿಯಾದ ಬೆಳಕು: ರಾಘವೇಂದ್ರ ಹಿಟ್ನಾಳ



• ಮಲ್ಲಮ್ಮ ನುಡಿವಾರ್ತೆ, ಕೊಪ್ಪಳ

ಭಗವಾನ್ ಗೌತಮ ಬುದ್ದ ಅವರು ಇಡೀ ಏಷಿಯಾದ ಬೆಳಕು ಎಂದು ಶಾಸಕರಾದ ಕೆ ರಾಘವೇಂದ್ರ ಹಿಟ್ನಾಳ ಅವರು ಗೌತಮ ಬುದ್ದ ವ್ಯಕ್ತಿತ್ವವನ್ನು ಬಣ್ಣಿಸಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಸಂಯುಕ್ತಾಶ್ರಯದಲ್ಲಿ ಮೇ 01ರಂದು ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ನಡೆದ ಭಗವಾನ್ ಬುದ್ಧ ಜಯಂತಿಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ತಮ್ಮ ಮನೆಯಲ್ಲಿದ್ದ ಸಿರಿಸಂಪತ್ತನ್ನು ತ್ಯಜಿಸಿ ಸರಳ ಬದುಕಿಗೆ ಬಂದ ಬುದ್ದ ಅವರು ಈ ಜಗತ್ತು ಕಂಡ ಮಹಾಮಹಿಮರಾಗಿದ್ದಾರೆ. ಇಂತಹ ಮಹಾತ್ಮನ ಜಯಂತಿಯು ರಾಜ್ಯ ಸರ್ಕಾರದಿಂದ ನಡೆಯುತ್ತಿರುವುದು ವಿಶೇಷ ಎಂದರು. 75 ವರ್ಷಗಳಾದರು ಸಹ ಸಮಾಜದಲ್ಲಿರುವ ಅಸಮಾನತೆಯನ್ನು ಹೋಗಲಾಡಿಸುವ ಕೆಲಸ ಮಾಡಬೇಕಿದೆ. ಅಂದಾಗ ಸಮಾನತೆ ಕಾಣಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಮಾಜಿ ಸಂಸದರಾದ ಕರಡಿ ಸಂಗಣ್ಣ ಅವರು ಮಾತನಾಡಿ, ಬುದ್ದ ಪೂರ್ಣಿಮೆಯು ಸಂಭ್ರಮದ ದಿನವಾಗಿದೆ. ಬುದ್ದ, ಬಸವ, ಅಂಬೇಡ್ಕರ ಅವರು ಜಗತ್ತಿಗೆ ಬೆಳಕು ನೀಡಿದ ಮಹಾನ್ ನಾಯಕರು.

ಯುದ್ದ ಬೇಡ ಬುದ್ದ ಬೇಕು ಎಂದು ಈಗ ಇಡೀ ಜಗತ್ತೇ ಹೇಳುತ್ತಿದೆ. ಸಾಮರಸ್ಯದ ಬದುಕು ಕಟ್ಟಿಕೊಳ್ಳಲಾಗದಂತಹ ಪರಿಸ್ಥಿತಿ ಇಂದು ಜಗತ್ತಿನಲ್ಲಿ ಮುಂದುವರೆದಿದೆ. ಅಹಿಂಸೆ ಬೇಡ, ನಾವು ಬದುಕಬೇಕು ಮತ್ತು ಇತರರಿಗೂ ಬದುಕಲು ಬಿಡಬೇಕು ಎಂಬ ಮಹತ್ವದ ಸಂದೇಶವನ್ನು ಗೌತಮ ಬುದ್ದ ನೀಡಿದ್ದಾರೆ ಎಂದು ತಿಳಿಸಿದರು.

ನಿವೃತ್ತ ಉಪ ಅಧೀಕ್ಷಕರಾದ ಗಿರೀಶ ಕಾಂಬ್ಳೆ ಅವರು ವಿಶೇಷ ಉಪನ್ಯಾಸ ನೀಡಿ, ಬುದ್ದ ಅವರು ಕೇವಲ ಭಾರತದ ಬೆಳಕಲ್ಲ; ಅವರು ಇಡೀ ಜಗತ್ತಿನ ಬೆಳಕು. ಬುದ್ದ ಅಂದರೆ ಅದು ಮಹಾಸಾಗರ ಇದ್ದಂತೆ. ನಮ್ಮ ಮುಂದಿನ ಏಳ್ಗೀಗೆ, ನಮ್ಮ ಮುಂದಿನ ಬಾಳ್ವೆಗೆ ಬುದ್ದ ಬೇಕು. ಬುದ್ದನನ್ನು ಅರ್ಥ ಮಾಡಿಕೊಂಡವರು ಈ ಜಗತ್ತಿನಲ್ಲಿ ನೆಮ್ಮದಿಯಿಂದ ಬದುಕುತ್ತಾರೆ. ಬುದ್ದ ಒಂದು ಜಾತಿ, ಭಾಷೆ, ಪ್ರದೇಶ, ದೇಶಕ್ಕೆ ಸೀಮೀತರಾಗಿಲ್ಲ. ಅವರ ವಿಚಾರ ವಿಶ್ವವ್ಯಾಪಿ ಎಂದರು.

ಬುದ್ದನ ಆಶಯದಂತೆ ಡಾ.ಅಂಬೇಡ್ಕರ್ ಅವರು ಸಂವಿಧಾನ ಬರೆದರು ಎಂದು ತಿಳಿಸಿದರು. ರೋಗಿಯನ್ನು, ಸತ್ತವನನ್ನು ನೋಡಿದ ಗೌತಮ ಬುದ್ದ ಆಸ್ತಿ ಕೇಳಲಿಲ್ಲ; ಸಂಪತ್ತು ಕೇಳಲಿಲ್ಲ. ಈ ಭೂಮಿಯ ಮೇಲೆ ಜನಿಸಿದ ಪ್ರತಿಯೊಬ್ಬರಿಗೂ ನೆಮ್ಮದಿಯಿಂದ ಬದುಕುವ ಹಕ್ಕಿದೆ ಎಂದು ತಿಳಿಸಿದವರು ಬುದ್ದ. ಬುದ್ದ ಎಂದರೆ ಶಾಂತಿಯ ದ್ಯೋತಕ. ಆದರೆ ಬುದ್ದನ ವಿಚಾರಗಳು ಬೆಳೆಯಲು ಕೆಲವರು ಬಿಡುತ್ತಿಲ್ಲ ಎಂದರು.

ಸಮಾರಂಭದಲ್ಲಿ ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷರಾದ, ಪ್ರಸನ್ನ ವೀರಣ್ಣ ಗಡಾದ್, ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ, ಸಹಾಯಕ ಆಯುಕ್ತರಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ನಗರಸಭೆ ಪೌರಾಯುಕ್ತರಾದ ಮಂಜುನಾಥ ಗುಂಡೂರ, ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ, ಮುಖಂಡರಾದ ಕೃಷ್ಣ ಇಟ್ಟಂಗಿ, ಮುತ್ತುರಾಜ್ ಕುಷ್ಟಗಿ, ಸಿದ್ರಾಮ ಹೊಸಮನಿ, ನಾಗರಾಜ ಬೆಲ್ಲದ, ರಘು ಬೆಲ್ಲದ, ಜಗದೀಶ ಚಲವಾದಿ, ಹನುಮಂತಪ್ಪ ಬಂಗಾಳಿಗಿಡದ, ಮಹಾವೀರ ಅಳ್ಳಳ್ಳಿ, ಗವಿಸಿದ್ದಪ್ಪ ಬೆಲ್ಲದ ಹಾಗೂ ಇತರರು ಉಪಸ್ಥಿತರಿದ್ದರು.

# ಬುದ್ಧ ಬಸವ ಅಂಬೇಡ್ಕರ್ ಜಯಂತಿ ಆಚರಣೆ



• ಮಲ್ಲಮ್ಮ ನುಡಿ ವಾರ್ತೆ , ಗುರುಮಠಕಲ್

ಗೌತಮ ಬುದ್ಧ, ಬಸವಣ್ಣ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರ ಜಯಂತಿಯನ್ನು ಸ್ಥಳೀಯವಾಗಿ ಶಿಕ್ಷಕರಾದ ಸುನಿಲ್ ಶುಕ್ಲಾ ಅವರ ನಿವಾಸದಲ್ಲಿ ಸರಳವಾಗಿ ಹಾಗೂ ಭಕ್ತಿಭಾವದಿಂದ ಶುಕ್ರವಾರ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಮಹಾನೀಯರ ಭಾವಚಿತ್ರಗಳಿಗೆ ಪೂಜೆ ಸಲ್ಲಿಸಿ, ಅವರ ಆದರ್ಶಗಳು ಶಾಂತಿ, ಸಮಾನತೆ ಮತ್ತು ಸಾಮಾಜಿಕ ನ್ಯಾಯ ಬಗ್ಗೆ ಉಪಸ್ಥಿತರಿದ್ದವರು ಚರ್ಚಿಸಿದರು.

ಈ ಸಂದರ್ಭದಲ್ಲಿ ಎಲ್ಲಾ ಸಮಾಜದ ಮುಖಂಡರು ಭಾಗವಹಿಸಿ ಸಮಾಜದಲ್ಲಿ ಸಹಬಾಳ್ವೆ

ಹಾಗೂ ಸಮಾನತೆಯನ್ನು ಬೆಳೆಸುವ ಸಂಕಲ್ಪ ಮಾಡಿದರು.

# ಮಹಿಳಾ ಡಿಗ್ರಿ ಕಾಲೇಜ್ ಪ್ರವೇಶ ಪ್ರಾರಂಭ

• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ

ನಗರದ ರೇಡಿಯೋ ಪಾರ್ಕ್ ಬಳಿ ಇರುವ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ

2026–27 ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಬಿ ಎ, ಬಿ ಕಾಂ ಹಾಗೂ ಬಿ ಎಸ್ಸಿ ಪದವಿ ಪ್ರವೇಶಾತಿ ಪ್ರಾರಂಭವಾಗಿದೆಂದು ಕಾಲೇಜಿನ ಪ್ರಾಂಶುಪಾಲೆ ಪ್ರಜ್ಞಾ ಅವರು ತಿಳಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಅವರು, ಉತ್ತಮ ಗುಣಮಟ್ಟದ ಶಿಕ್ಷಣದ ಜೊತೆಗೆ ನೈತಿಕತೆ, ಮೌಲ್ಯಗಳು, ಸಾಮಾಜಿಕ ಸಂಬಂಧಗಳ ನಿಭಾಯಿಸುವಿಕೆ,

ಒತ್ತಡದಿಂದ ಹೊರಬರಲು ವಿದ್ಯಾರ್ಥಿಗಳಿಗೆ ತರಬೇತಿ ನೀಡುವುದರ ಮೂಲಕ ಪ್ರತಿ ಇಬ್ಬರು ವಿದ್ಯಾರ್ಥಿನಿಯರು ಇನ್ನಿಬ್ಬರು ವಿದ್ಯಾರ್ಥಿನಿಯರಿಗೆ ತರಬೇತಿ ನೀಡುವುದರ ಮೂಲಕ ಒತ್ತಡ ರಹಿತ ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕೆ ಅಣಿಗೊಳಿಸುವ ಸದುದ್ದೇಶವನ್ನು ಹೊಂದಿದೆ ಎಂದಿದ್ದಾರೆ.

# ಹಾರಕೂಡ ಶ್ರೀಗಳ ಪಾದ ಪೂಜೆ



• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ

ನಗರದ ಶಿವಪೂರ ಬಡಾವಣೆಯಲ್ಲಿ ಹಾರಕೂಡ ಸಂಸ್ಥಾನದ ಪೀಠಾಧಿಪತಿ ಡಾ. ಚನ್ನವೀರ ಶಿವಾಚಾರ್ಯರ ಪಾದ ಪೂಜೆ ಕಾರ್ಯಕ್ರಮ ವೈಭವದಿಂದ ಜರುಗಿತು.

ಶಿವಪೂರ ಬಡಾವಣೆಯ ಪವಾಡೆ ನಿವಾಸದಲ್ಲಿ ಡಾ. ಚನ್ನವೀರ ಶಿವಾಚಾರ್ಯರ ಪಾದ ಪೂಜೆಯನ್ನು ಜಗದೇವಿ ಪವಾಡೆ, ಚಂದ್ರಕಾಂತ ಪವಾಡೆ ದಂಪತಿಗಳಿಂದ ನೆರವೇರಿಸಿದರು. ಬಳಿಕ ಧುಮಾಳೆ ನಿವಾಸದಲ್ಲಿ ಸಿದ್ದಮ್ಮಾ ಧುಮಾಳೆ, ಅಂಬುಜಿರಾವ ಧುಮಾಳೆ ದಂಪತಿಗಳಿಂದ ಇತ್ತೀಚೆಗೆ ಶ್ರೀಗಳ ಪಾದ ಪೂಜೆ ಕಾರ್ಯಕ್ರಮ ಜರುಗಿತು.

ಶಿವಪೂರ ಬಡಾವಣೆಯ ದಾರಿಯುದ್ದಕ್ಕೂ ಪಟಾಕಿ ಸಿಡಿಸಿ, ಹೂವಿನ ಹಾಸಿಗೆ ಹಾಸಿ ಶ್ರೀಗಳಿಗೆ ಭವ್ಯವಾಗಿ ಸ್ವಾಗತಿಸಿ, ಭಕ್ತಾಧಿಗಳು ಸರತಿ ಸಾಲಿನಲ್ಲಿ ನಿಂತು ಶ್ರೀಗಳನ್ನು ಭೇಟಿ ಮಾಡಿ ದರ್ಶನ ಪಡೆದು ಕಾಯಿ, ಕರ್ಪೂರ ಅರ್ಪಿಸಿ, ಶ್ರೀಗಳಿಗೆ ಹೂಮಾಲೆ ತೊಡಿಸಿ, ಆಶೀರ್ವಾದ ಪಡೆದುಕೊಂಡರು. ಸರತಿ ಸಾಲಿನಲ್ಲಿ ನಿಂತು ದರ್ಶನ ಪಡೆದ ಭಕ್ತರಿಗೆ ಪ್ರಸಾದ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಅರ್ಚನಾರೆಡ್ಡಿ ಮಂಡಾ, ವಿನಾಯಕರೆಡ್ಡಿ ಮಂಡಾ, ವೆಂಕಟರೆಡ್ಡಿ ಪವಾಡೆ, ಶ್ರೀದೇವಿ ವೀರಾರೆಡ್ಡಿ, ಅಂಬಿಕಾ ಶಿವಕುಮಾರರೆಡ್ಡಿ, ಸುಮನ್ ಮಾಣಿಕರೆಡ್ಡಿ ಕರಣಿ, ದಿವ್ಯಾರೆಡ್ಡಿ, ಅನ್ನಪೂರ್ಣಾರೆಡ್ಡಿ, ಶ್ರವ್ಯಾರೆಡ್ಡಿ, ಸಂಧ್ಯಾರಾಣಿ, ಪೂಜಾ ಅಶೋಕ ಧುಮಾಳೆ, ಗೀತಾ ಅನಿಲ ಧುಮಾಳೆ, ಜಗನ್ನಾಥ ಧುಮಾಳೆ, ರೋಹಿತ್ ಧುಮಾಳೆ,

ನಿಲಾವತಿ ರಮೇಶ ಜಾಧವ, ಮಂದಾಕಿನಿ ಸುಧಾಕರ ಜಾಧವ, ಮಂಗಲಬಾಯಿ ಯುವರಾಜ ಧುಮಾಳೆ, ಶಶಿಕಲಾ ರಮೇಶ ಧುಮಾಳೆ, ಸತೀಷರೆಡ್ಡಿ ಕೇಶುಲ್, ಮಹೇಶರೆಡ್ಡಿ ಕೇಶುಲ್, ನಿತೀನ್ ನಿಂಬಾಳಕರ್, ಇಂದುಬಾಯಿ ಶಿವರಾಮ ಜಾಧವ, ಚಂದ್ರಕಲಾ ತುಳಜಾರಾಮ ಸೇರಿದಂತೆ ಅನೇಕರಿದ್ದರು.

## ಸುಪ್ರೀಂ ಕೋರ್ಟ್‌ನಿಂದ ಸಮಾಧಾನ ಸಮಾರೋಹ್

# ವಿಶೇಷ ಲೋಕ ಅದಾಲತ್ ಆಯೋಜನೆ: ಅನು

• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ

ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳ ತ್ವರಿತ ವಿಲೇವಾರಿಗಾಗಿ, ಬರುವ ಆಗಸ್ಟ್ 21, 22 ಮತ್ತು 23 ರಂದು 'ಸಮಾಧಾನ ಸಮಾರೋಹ್' ಎಂಬ ವಿಶೇಷ ಲೋಕ ಅದಾಲತ್ ಆಯೋಜಿಸಲಾಗಿದೆ ಎಂದು ಕರ್ನಾಟಕ ಹೈಕೋರ್ಟ್‌ನ ನ್ಯಾಯಮೂರ್ತಿ ಹಾಗೂ ಕೆಎಎಲ್ಎ□□□ಕಾರ್ಯನಿರ್ವಾಹಕ ಅಧ್ಯಕ್ಷರಾದ ಅನು ಶಿವರಾಮನ್ ಅವರು ಹೇಳಿದರು.

'ಸಮಾಧಾನ ಸಮಾರೋಹ್' ವಿಶೇಷ ಲೋಕ ಅದಾಲತ್ ಕುರಿತು, ಆನ್ ಲೈನ್ ಮೂಲಕ ಕರ್ನಾಟಕ ಹೈಕೋರ್ಟ್ ನ ಮೊದಲ ಮಹಡಿಯಲ್ಲಿರುವ ಕಾರ್ಯನಿರ್ವಾಹಕ ಅಧ್ಯಕ್ಷರ ಸಭಾಂಗಣದಲ್ಲಿ ಗುರುವಾರ ಏರ್ಪಡಿಸಿದ್ದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು.

ಸುಪ್ರೀಂ ಕೋರ್ಟ್ ಪ್ರಕರಣಗಳ ಇತ್ಯರ್ಥಕ್ಕೆ ಇದು ವಿಶೇಷ ಲೋಕ್ ಅದಾಲತ್ ಆಗಿದೆ. ಸಾರ್ವಜನಿಕರಿಗೆ ಇದು ಸುವರ್ಣಾವಕಾಶವಾಗಿದ್ದು, ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇರುವ ದಾವೆಗಳನ್ನು ಪರಸ್ಪರ ಒಪ್ಪಿಗೆ ಮತ್ತು ಸಂಧಾನದ ಮೂಲಕ ಬಗೆಹರಿಸಿ, ದಾವೆದಾರರಿಗೆ ಶೀಘ್ರ ನ್ಯಾಯ ಒದಗಿಸುವುದು ಇದರ ಮುಖ್ಯ ಉದ್ದೇಶವಾಗಿದೆ ಎಂದು ತಿಳಿಸಿದರು.

ಹೈಕೋರ್ಟ್ ಕಾನೂನು ಸೇವಾ ಸಮಿತಿಯ ಅಧ್ಯಕ್ಷ ನ್ಯಾಯಮೂರ್ತಿ ಆರ್.ದೇವದಾಸ್ ಅವರು ಮಾತನಾಡಿ, ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಉಳಿದಿರುವ ಸಾವಿರಾರು ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ



ಇತ್ಯರ್ಥಪಡಿಸಲು 'ವಿಶೇಷ ಲೋಕ್ ಅದಾಲತ್' ಎಂಬ ವಿನೂತನ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ. ಈ ಹಿಂದೆ ಎಂದೂ ನಡೆಯದ ಈ ವಿಶೇಷ ಕಾರ್ಯಕ್ರಮದ ಮೂಲಕ ಜನಸಾಮಾನ್ಯರಿಗೆ ತಮ್ಮ ಕಾನೂನು ಹೋರಾಟವನ್ನು ಸುಲಭವಾಗಿ ಮುಕ್ತಾಯಗೊಳಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಹೇಳಿದರು.

**ರಾಜ್ಯದ 4,328 ಪ್ರಕರಣಗಳ ಗುರುತಿಸುವಿಕೆ:**

ಕರ್ನಾಟಕ ರಾಜ್ಯದ ವಿವಿಧ ತಾಲೂಕು ಮತ್ತು ಜಿಲ್ಲಾ ಮಟ್ಟಗಳಿಂದ ಸುಪ್ರೀಂ ಕೋರ್ಟ್‌ಗೆ ಹೋದ ಸುಮಾರು 4,328 ಪ್ರಕರಣಗಳನ್ನು ಈಗಾಗಲೇ ಸುಪ್ರೀಂ ಕೋರ್ಟ್ ಗುರುತಿಸಿ, ಪಟ್ಟಿಯನ್ನು ಕಳುಹಿಸಿಕೊಟ್ಟಿದೆ. ರಾಜಿ ಸಂಧಾನದ ಮೂಲಕ ಬಗೆಹರಿಸಬಹುದಾದ ಪ್ರಕರಣಗಳನ್ನು ಗುರುತಿಸಿ, ಅವುಗಳನ್ನು ಶೀಘ್ರವಾಗಿ ವಿಲೇವಾರಿ ಮಾಡುವುದು ಈ ಲೋಕ್ ಅದಾಲತ್‌ನ ಮುಖ್ಯ ಗುರಿಯಾಗಿದೆ ಎಂದು ತಿಳಿಸಿದರು.

ವರ್ಷಾನುಗಟ್ಟಲೆ ಸುಪ್ರೀಂ ಕೋರ್ಟ್‌ನಲ್ಲಿ ನಡೆಯುವ ಕಾನೂನು ಪ್ರಕ್ರಿಯೆಗಳು ಜನರಿಗೆ ಹೊರೆಯಾಗಬಹುದು. ಈ ಲೋಕ್ ಅದಾಲತ್ ಮೂಲಕ ಪರಸ್ಪರ ಒಪ್ಪಿಗೆಯ ಮೇರೆಗೆ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳುವುದರಿಂದ ಸಮಯ ಮತ್ತು ಹಣ ಎರಡೂ ಉಳಿತಾಯವಾಗಲಿದೆ. ತಮ್ಮ ಪ್ರಕರಣಗಳು ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇರುವವರು ಕೂಡಲೇ ಸಂಬಂಧಪಟ್ಟ ತಾಲ್ಲೂಕು ಅಥವಾ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಕಚೇರಿಗೆ ಸಂಪರ್ಕಿಸಿ ಈ ಸುವರ್ಣಾವಕಾಶವನ್ನು ಬಳಸಿಕೊಳ್ಳಬೇಕೆಂದು ವಿನಂತಿಸಿದರು.

ವಿಡಿಯೋ ಸಂವಾದ ಬಳಿಕ ಮಾತನಾಡಿದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್.ಹೊಸಮನೆ ಅವರು, ಸಾರ್ವಜನಿಕರು ಮತ್ತು ದಾವೆದಾರರು ಈ ಸುವರ್ಣಾವಕಾಶವನ್ನು ಬಳಸಿಕೊಳ್ಳಬೇಕು. ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇರುವ ಪ್ರಕರಣಗಳನ್ನು ಸೌಹಾರ್ದಯುತವಾಗಿ ಇತ್ಯರ್ಥಪಡಿಸಿಕೊಳ್ಳಲು ಇದು ಉತ್ತಮ ವೇದಿಕೆಯಾಗಿದೆ. ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವನ್ನು ಸಂಪರ್ಕಿಸಬಹುದು ಎಂದರು.

ಸುಪ್ರೀಂ ಕೋರ್ಟ್ ನೀಡಿರುವ ಪಟ್ಟಿಯ ಅನ್ವಯ, ಕರ್ನಾಟಕ ರಾಜ್ಯದಿಂದ ಸುಮಾರು 4,328 ಪ್ರಕರಣಗಳನ್ನು ಗುರುತಿಸಲಾಗಿದೆ. ಈ ಪೈಕಿ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಿಗೆ ಸಂಬಂಧಿಸಿದ 109 ಪ್ರಕರಣಗಳು ಇತ್ಯರ್ಥಕ್ಕೆ ಲಭ್ಯವಿವೆ. ಸುಪ್ರೀಂ ಕೋರ್ಟ್‌ಗೆ ಅಲೆಯುವ ಬದಲು, ಸ್ಥಳೀಯವಾಗಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಅಥವಾ ತಾಲೂಕು ಕಾನೂನು ಸೇವಾ ಸಮಿತಿಗಳ ಮೂಲಕವೇ ಸಂಧಾನ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು ಎಂದು ತಿಳಿಸಿದರು.

ಪಕ್ಷಕಾರರು ಭೌತಿಕವಾಗಿ ಹಾಜರಾಗಲು ಸಾಧ್ಯವಾಗದಿದ್ದರೆ, ವಿಡಿಯೋ ಕಾನ್ಫರೆನ್ಸ್ ಮೂಲಕವೂ ಸಂಧಾನದಲ್ಲಿ ಪಾಲ್ಗೊಳ್ಳಲು ಅವಕಾಶವಿದೆ. ಉದಾಹರಣೆಗೆ, ಒಬ್ಬರು ಬಳ್ಳಾರಿಯಲ್ಲಿದ್ದು ಇನ್ನೊಬ್ಬರು ಮುಂಬೈ ಅಥವಾ ವಿದೇಶದಲ್ಲಿದ್ದರೂ ತಂತ್ರಜ್ಞಾನದ ಮೂಲಕ ಸಂಧಾನ ನಡೆಸಬಹುದು. ತರಬೇತಿ ಪಡೆದ ಪರಿಣಿತ ಮಧ್ಯಸ್ಥಿಕೆದಾರರು ಮತ್ತು ವಕೀಲರು ಉಭಯ ಪಕ್ಷಗಳ ನಡುವೆ ಸಮಾಲೋಚನೆ ನಡೆಸಿ, ಇಬ್ಬರಿಗೂ ಒಪ್ಪಿಗೆಯಾಗುವಂತಹ ಪರಿಹಾರ ಕಂಡುಕೊಳ್ಳಲು ನೆರವಾಗುತ್ತಾರೆ. ಇದರಲ್ಲಿ ವೈವಾಹಿಕ ವಿವಾದಗಳು, ಅಪಘಾತ ವಿಮೆ ಪರಿಹಾರ, ಚೆಕ್ ಬೌನ್ಸ್ ಪ್ರಕರಣಗಳು, ಭೂಸ್ವಾಧೀನ ಪ್ರಕರಣಗಳು, ಕ್ರಿಮಿನಲ್ ರಾಜಿ ಪ್ರಕರಣಗಳು ಹಾಗೂ ಕಾರ್ಮಿಕ ವಿವಾದಗಳನ್ನು ಇಲ್ಲಿ ಇತ್ಯರ್ಥಪಡಿಸಿಕೊಳ್ಳಬಹುದು ಎಂದು ಹೇಳಿದರು.

ನ್ಯಾಯಾಲಯದಲ್ಲಿ ಒಬ್ಬರು ಗೆದ್ದು ಇನ್ನೊಬ್ಬರು ಸೋಲುತ್ತಾರೆ. ಆದರೆ ಸಂಧಾನದ ಮೂಲಕ ಪ್ರಕರಣ ಇತ್ಯರ್ಥವಾದರೆ ಇಬ್ಬರೂ ಗೆದ್ದಂತೆ. ಇದು ಸಮಯ ಮತ್ತು ಹಣದ ಉಳಿತಾಯ ಮಾಡುವುದಲ್ಲದೆ, ಸಮಾಜದಲ್ಲಿ ಶಾಂತಿ ಮತ್ತು ಬಾಂಧವ್ಯವನ್ನು ಕಾಪಾಡುತ್ತದೆ. ನಿಮ್ಮ ಪ್ರಕರಣವು ಸುಪ್ರೀಂ ಕೋರ್ಟ್ ಪಟ್ಟಿಯಲ್ಲಿ ಇಲ್ಲದಿದ್ದರೂ, ವೆಬ್‌ಸೈಟ್ ಮೂಲಕ ನೋಂದಾಯಿಸಿಕೊಂಡು ಈ ಸೌಲಭ್ಯ ಪಡೆಯಬಹುದು ಎಂದು ಅವರು ತಿಳಿಸಿದರು.

ಈ ವೇಳೆ ಮಾಧ್ಯಮ ಪ್ರತಿನಿಧಿಗಳು ಹಾಗೂ ನ್ಯಾಯಾಲಯದ ಸಿಬ್ಬಂದಿ ಇದ್ದರು.

# ಹೈಕೋರ್ಟ್ ನ್ಯಾಯಮೂರ್ತಿಯಿಂದ ಜಂಟಿ ಪತ್ರಿಕಾಗೋಷ್ಠಿ

• ಮಲ್ಲಮ್ಮ ನುಡಿವಾರ್ತೆ, ಕೊಪ್ಪಳ

ಸರ್ವೋಚ್ಚ ನ್ಯಾಯಾಲಯದ (ಸುಪ್ರಿಂ ಕೋರ್ಟ) ಅಂಗಳ ತಲುಪಿದ ಯಾವುದೇ ಬಗೆಯ ವ್ಯಾಜ್ಯಗಳ ಪರಿಹಾರಕ್ಕಾಗಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಲು ಸರ್ವೋಚ್ಚ ನ್ಯಾಯಾಲಯವು ವಿಶೇಷ ಅಭಿಯಾನ ಹಮ್ಮಿಕೊಂಡಿದೆ ಎಂದು ಹೈಕೋರ್ಟನ ನ್ಯಾಯಮೂರ್ತಿ ಗೌರವಾನ್ವಿತ ಅನು ಶಿವರಾಮ್ ಅವರು ಹೇಳಿದರು.

ಬೆಂಗಳೂರಿನ ಹೈಕೋರ್ಟ ಸಭಾಂಗಣದಲ್ಲಿ ಏಪ್ರಿಲ್ 30ರಂದು ಸುದ್ದಿಗೋಷ್ಠಿ ನಡೆಸಿ ಅವರು ಮಾತನಾಡಿದರು.

ಆಗಸ್ಟ 21, 22 ಮತ್ತು 23ರಂದು ಅಭಿಯಾನ ನಡೆಯಲಿದ್ದು, ರಾಜ್ಯದ ಯಾವುದೇ ಭಾಗದಲ್ಲಿನ ಪಕ್ಷಗಾರರು ತಾವು ಇರುವ ಸ್ಥಳದಲ್ಲಿನ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವನ್ನು ಸಂಪರ್ಕಿಸಿ ವ್ಯಾಜ್ಯ ಪರಿಹಾರ ಮಾಡಿಕೊಳ್ಳಬಹುದು. ಪಕ್ಷಗಾರರಿಬ್ಬರು ಒಂದೆಡೆ ಸೇರಿ ವ್ಯಾಜ್ಯ ಪರಿಹರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಈ ಅಭಿಯಾನ ಹಿನ್ನೆಲೆಯಲ್ಲಿ ಎಲ್ಲ ಕಡೆಗಳಲ್ಲಿ ಈಗಾಗಲೇ 4328 ಕೇಸಗಳನ್ನು ಗುರುತಿಸಿದ್ದೇವೆ. ಜನತೆಯ ಸಮಯ ಮತ್ತು ಖರ್ಚು ವೆಚ್ಚ ಉಳಿಸಬೇಕು ಎಂದು ಯೋಜಿಸಿ ಅಭಿಯಾನ ರೂಪಿಸಲಾಗಿದೆ ಎಂದು ಅವರು ತಿಳಿಸಿದರು.

ಸುಪ್ರೀಂ ಕೋರ್ಟನ ನ್ಯಾಯಮೂರ್ತಿಗಳಾದ ಆರ್ ದೇವದಾಸ್ ಅವರು ಮಾತನಾಡಿ, ಈ ಅಭಿಯಾನ ಸರ್ವೋಚ್ಚ ನ್ಯಾಯಾಲಯದ ಐತಿಹಾಸಿಕ ಪ್ರಥಮ ಪ್ರಯತ್ನವಾಗಿದೆ. ಬಹುವರ್ಷಗಳಿಂದ ನ್ಯಾಯಕ್ಕೆ ಕಾಯುತ್ತಿರುವ ಜನತೆಗೆ ಅನುಕೂಲ ಕಲ್ಪಿಸಬೇಕು ಎಂದು ಉದ್ದೇಶಿಸಿ ಸರ್ವೋಚ್ಚ ನ್ಯಾಯಾಲಯವು ದಿಟ್ಟ ಹೆಜ್ಜೆ ಇಟ್ಟು ವ್ಯಾಜ್ಯ ವಿಲೇವಾರಿ ವಿಶೇಷ ಅಭಿಯಾನ (ಸ್ಪೆಷಲ್ ಡ್ರೈವ್) ಹಮ್ಮಿಕೊಂಡಿದೆ.

ಸುಪ್ರೀಂಕೋರ್ಟನಲ್ಲಿರುವ ವ್ಯಾಜ್ಯಗಳ ಪರಿಹಾರಕ್ಕಾಗಿ ಮಾತ್ರ ಈ ಅಭಿಯಾನ ಹಮ್ಮಿಕೊಂಡಿದೆ.

ಸುಪ್ರಿಂ ಕೋರ್ಟನಲ್ಲಿ ನಿಮ್ಮ ನಿಮ್ಮ ಕೇಸ್ ಇದ್ದರೆ ಅದನ್ನು ಬಗೆಹರಿಸಿಕೊಳ್ಳಲು ಇದೊಂದು ಸದವಕಾಶ ಎಂದು ಸಾರ್ವಜನಿಕರಿಗೆ ಸಂದೇಶ ಹೋಗಬೇಕು. ಈ ಅಭಿಯಾನದ ಸಂದೇಶವು ರಾಜ್ಯದ ಜನತೆಗೆ ತಲುಪಬೇಕು. ಜನತೆಗೆ ಸಹಾಯ ಆಗಬೇಕು ಎಂಬುದು ನಮ್ಮ ಪ್ರಾರ್ಥನೆಯಾಗಿದೆ ಎಂದು ಅವರು ತಿಳಿಸಿದರು.

ಆಯಾ ಜಿಲ್ಲೆಗಳಲ್ಲಿ ಆಗಸ್ಟ 21ರಿಂದ ಮೂರು ದಿನಗಳ ಕಾಲ ಆಯಾ ಜಿಲ್ಲೆಯ ಪ್ರಧಾನ ನ್ಯಾಯಾಧೀಶರು ಮತ್ತು ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ವ್ಯಾಜ್ಯ ಪರಿಹಾರಕ್ಕೆ ಸ್ಥಳೀಯ ಮಟ್ಟದಲ್ಲಿ ಅಗತ್ಯ ಏರ್ಪಾಡು ಮಾಡಲಿದ್ದಾರೆ. ನಾನು ನನ್ನ ಕೇಸನ್ನು ಬಗೆ ಹರಿಸಿಕೊಳ್ಳಲು ಇಚ್ಛಿಸಿದ್ದೇನೆ ಎಂದು ಪಕ್ಷಗಾರರು ನೇರವಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯವರನ್ನು ಸಂಪರ್ಕಿಸಿದಲ್ಲಿ ವ್ಯಾಜ್ಯ ಪರಿಹರಿಸಿಕೊಳ್ಳಬಹುದು ಎಂದು ಅವರು ತಿಳಿಸಿದರು.

ಈ ವಿಷಯದಲ್ಲಿ ವಕೀಲರು ಅಡ್ಡಿ ಪಡಿಸುವುದಿಲ್ಲ ಎಂದು ನ್ಯಾಯಮೂರ್ತಿಗಳು ಸ್ಪಷ್ಟಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ನ್ಯಾಯಾಧೀಶರು ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಶಶಿಧರ ಶೆಟ್ಟಿ ಹಾಗೂ ಇತರರು ಇದ್ದರು.

# ಕಾರ್ಮಿಕರಿಂದ ಕಾರ್ಮಿಕ ದಿನಾಚರಣೆ



• ಮಲ್ಲಮ್ಮ ನುಡಿ ವಾರ್ತೆ, ಆಲಮಟ್ಟಿ

ಇಲ್ಲಿನ ವಿವಿಧ ಉದ್ಯಾನಗಳಲ್ಲಿ, ನೆಡುತೋಪು, ನರ್ಸರಿ ಸೇರಿದಂತೆ ವಿವಿಧೆಡೆ ದಿನಗೂಲಿ ಕಾರ್ಮಿಕರಾಗಿ ಕಾರ್ಯನಿರ್ವಹಿಸುತ್ತಿರುವ ಕೆಲಸಗಾರರು ಕಾರ್ಮಿಕ ದಿನಾಚರಣೆ ಆಚರಿಸಿದರು.

ಈ ವೇಳೆ ಎಸಿಎಫ್ ಗಳಾದ ಆರ್.ಆರ್.ಚವ್ಹಾಣ, ಶಿವಾನಂದ ಜಿಡ್ಡಿಮನಿ, ವಲಯ ಅರಣ್ಯಾಧಿಕಾರಿ ಮಹೇಶ ಪಾಟೀಲ, ಉಪವಲಯ ಅರಣ್ಯಾಧಿಕಾರಿ ಸತೀಶ ಗಲಗಲಿ, ಸಂತೋಷ ರಾಠೋಡ, ಅಶೋಕ ಮೇಲಿಮಾಮಿ, ಸಯ್ಯದ್ ಖರೋಳಿ, ಕಾರ್ಮಿಕ ಸಂಘಟನೆಯ ಮುಖಂಡರಾದ ವಿರೂಪಾಕ್ಷ ಮಾದರ, ಭೀಮಶಿ ಪವಾರ, ಸರೋಜಾ ಲಮಾಣಿ ಮೊದಲಾದವರಿದ್ದರು.

# ಸರ್ವೋತ್ತಮ ಪ್ರಶಸ್ತಿಗೆ ಆಯ್ಕೆಯಾದ ಅಧಿಕಾರಿಗಳು



• ಮಲ್ಲಮ್ಮ ನುಡಿ ವಾರ್ತೆ, ಯಲಬುರ್ಗಾ

ತಾಲೂಕಿನ ಬಿಸಿಎಂ ಇಲಾಖೆಯ ಅಧಿಕಾರಿ ಶಿವಶಂಕರ ಕರ್ಡಕಲ್, ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ನಾಗೇಶ, ಬೇವೂರ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಅಬ್ದುಲ್ ಗಫರ್, ಕರಮುಡಿ ಗ್ರಾಮ ಆಡಳಿತಾಧಿಕಾರಿ ದೇವರಾಜ ಇವರುಗಳಿಗೆ 2024 –25 ನೇ ಸಾಲಿನ ಕೊಪ್ಪಳ ಜಿಲ್ಲಾ ಮಟ್ಟದ ಸರ್ವೋತ್ತಮ ಸೇವಾ ಪ್ರಶಸ್ತಿಗೆ ಭಾಜನರಾಗಿದ್ದು ಜನತೆಗೆ , ಪತ್ರಕರ್ತರಿಗೆ, ವಿವಿಧ ಇಲಾಖೆಯ ಅಧಿಕಾರಿಗಳಿಗೆ ಸಂತಸವಾಗಿ ಅಭಿನಂದಿಸಿದ್ದಾರೆ.

# ಜೆಸ್ಕಾಂ ಗ್ರಾಹಕರ ಕುಂದು ಕೊರತೆ ಸಭೆ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ರಾಯಚೂರು ಜಿಲ್ಲೆಯ ಎಲ್ಲಾ ತಾಲ್ಲೂಕಿನ ಜೆಸ್ಕಾಂ ಉಪ ವಿಭಾಗಳಲ್ಲಿ ಗ್ರಾಹಕರ ಕುಂದು ಕೊರತೆ ತ್ರೈಮಾಸಿಕ ಸಭೆಯನ್ನು ಜೆಸ್ಕಾಂ ಅಧೀಕ್ಷಕ ಅಭಿಯಂತರರ ಅಧ್ಯಕ್ಷತೆಯಲ್ಲಿ ವಿವಿಧ ದಿನಾಂಕಗಳಂದು ಹಮ್ಮಿಕೊಳ್ಳಲಾಗಿದ್ದು, ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಹಕರು ಹಾಜರಾಗಿ ತಮ್ಮ ಕುಂದು ಕೊರತೆಗಳನ್ನು ನಿವಾರಿಸಿಕೊಳ್ಳಬಹುದಾಗಿದೆ ಎಂದು ಕೋರಲಾಗಿದೆ.

ಮೇ.06ರ ಬೆಳಿಗ್ಗೆ 9ಗಂಟೆಗೆ ಮಸ್ಕಿ, ಮೇ.11ರ ಬೆಳಿಗ್ಗೆ 9ಕ್ಕೆ ದೇವದುರ್ಗ, ಮೇ.14ರ ಬೆಳಿಗ್ಗೆ 9ಕ್ಕೆ ಲಿಂಗಸುಗೂರು ಹಾಗೂ ಮೇ.16ರ ಬೆಳಿಗ್ಗೆ 9ಕ್ಕೆ ಸಿರವಾರದಲ್ಲಿ ಗ್ರಾಹಕರ ಕುಂದು ಕೊರತೆ ತ್ರೈಮಾಸಿಕ ಸಭೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ವಿಭಾಗದ ಅಧೀಕ್ಷಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ ಅಪೇಕ್ಷಣೆಗೆ ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ರಾಯಚೂರು ಶಿಶು ಅಭಿವೃದ್ಧಿ ಯೋಜನೆ ವ್ಯಾಪ್ತಿಗೆ ಬರುವ ರಾಮಾಂಜಿನೇಯ್ಯ ಕಾಲೋನಿ–01ನೇ ಅಂಗನವಾಡಿ ಕೇಂದ್ರದ ಅಂಗನವಾಡಿ ಸಹಾಯಕಿ ಹುದ್ದೆಯ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲಾಗಿದ್ದು, ಆಯ್ಕೆ ಪಟ್ಟಿಗೆ ಅಕ್ಷೇಪಣೆ ಸಲ್ಲಿಸಲು ಮೇ.06 ಕೊನೆಯ ದಿನಾಂಕವಾಗಿದೆ.

ಅಂಗನವಾಡಿ ಸಹಾಯಕಿ ಹುದ್ದೆಗೆ ಶ್ರೀಮತಿ ಪದ್ಮಾವತಿ ಗಂಡ ಡಿ.ಹೆಚ್.ಆನಂದ ಪರಿಶಿಷ್ಟ ಜಾತಿ ಅವರನ್ನು ತಾತ್ಕಾಲಿಕವಾಗಿ ಆಯ್ಕೆ ಮಾಡಲಾಗಿದ್ದು, ತಾತ್ಕಾಲಿಕ ಆಯ್ಕೆ ಪಟ್ಟಿಗೆ ಅಕ್ಷೇಪಣೆ ಅರ್ಜಿ ಸಲ್ಲಿಸುವವರು ಸೂಕ್ತ ದಾಖಲಾತಿಗಳೊಂದಿಗೆ ದಿನಾಂಕ 06–05–2026ರ ಬೆಳಿಗ್ಗೆ 8ಗಂಟೆಯಿಂದ ಮಧ್ಯಾಹ್ನ 01:30ರವರೆಗೆ ರಾಯಚೂರಿನ ಶಿಶು ಅಭಿವೃದ್ಧಿ ಕಾರ್ಯಾಲಯಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ ಎಂದು ರಾಯಚೂರು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗುಡಿಸಲಿಗೆ ಆಕಸ್ಮಿಕ ಬೆಂಕಿ 5 ಜನರು ಪ್ರಾಣಪಾಯದಿಂದ ಪಾರು



• ಮಲ್ಲಮ್ಮ ನುಡಿವಾರ್ತೆ, ಕೊಪ್ಪಳ

ಜಿಲ್ಲೆಯ ಕಾರಟಗಿ ತಾಲೂಕಿನ ಸಿಂಗನಾಳ ಗ್ರಾಮದ ಸಿಂಗನಾಳ ಕ್ಯಾಪಿನಲ್ಲಿ ಗುರುವಾರ ರಾತ್ರಿ 11 ಗಂಟೆ ಸುಮಾರಿಗೆ ಗುಡಿಸಲಿಗೆ ಆಕಸ್ಮಿಕವಾಗಿ ದೀಪದ ಕಿಡಿ ಹಾರಿ ಗುಡಿಸಲಿಗೆ ಬೆಂಕಿ ಹತ್ತಿಕೊಂಡು ಕುಡಿಸಿದಲ್ಲಿರುವ ಸಿಲೆಂಡರ್ ಸ್ಫೋಟಕವಾಗಿದೆ, ಗಂಗಾವತಿ ಅಗ್ನಿಶಾಮಕ ದಳದವರು ಕೂಡಲೇ ಸ್ಥಳಕ್ಕೆ ಬಂದು ಅಗ್ನಿ ಹಾರಿಸುವಲ್ಲಿ ಯಶಸ್ವಿಯಾಗಿದ್ದಾರೆ, ಗುಡಿಸಲಲ್ಲಿ ಇಂದ 5 ಜನರು ಪ್ರಾಣಪಾಯದಿಂದ ಪಾರಾಗಿದ್ದಾರೆ,

> “ಗ್ರಾಮ ಪಂಚಾಯಿತಿ ಆಡಳಿತ ಅಧಿಕಾರಿಗಳು ಸ್ಥಳವನ್ನು ಪರಿಶೀಲಿಸಿ ಸ್ಥಳೀಯವಾಗಿ ಅಧಿಕಾರಿ ಜೊತೆಗೆ ಮಾತನಾಡಿ ಪರಿಹಾರ ಒದಗಿಸಲಾಗುವುದು ಎಂದರು, ದಸ್ತಗಿರಿ ಸಾಬ್ ಹಡದ ಅಧಿಕಾರಿಗಳು ಗ್ರಾಮ ಪಂಚಾಯಿತಿ ಗುಂಡೂರು

ಬಂಗಾರದ ಆವರಣಗಳು, ಬೆಲೆಬಾಳು ವಸ್ತಗಳು, ಮನೆಯಲ್ಲಿರುವ ಸಮಗ್ರಗಳು ಅಡಿಗೆ ಧಾನ್ಯಗಳು 5ಲಕ್ಷ ಅಧಿಕ ಮೌಲ್ಯಗಳು ಬಸ್ಮವಾಗಿದ್ದಾವೆ, ಎಂದು ಮನೆಯ ಮಾಲೀಕರಾದ ವೆಂಕಟೇಶ್ ಕಳಿಸಿದ್ದಾರೆ. ಗ್ರಾಮ ಪಂಚಾಯತ್ ಆಡಳಿತ ಅಧಿಕಾರಗಳು, ಗ್ರಾಮ ಲೆಕ್ಕ ಆಡಳಿತ ಅಧಿಕಾರಿಗಳು, ಪೊಲೀಸ್ ಇಲಾಖೆಯವರು, ಸ್ಥಳವನ್ನು ಪರಿಶೀಲಿಸಿ ಗಂಗಾವತಿ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಿಸಿ ಸರಕಾರದಿಂದ ಪರಿಹಾರವನ್ನು ಒದಗಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಕೆ.ಪಿ.ಎಸ್.ಸಿ ಗೆಜೆಟೆಡ್ ಪ್ರೋಬೇಷನರಿ ವ್ಯಕ್ತಿತ್ವ ಪರೀಕ್ಷೆಗೆ

# ಅರ್ಹತೆ ಪಡೆದ ಅಭ್ಯರ್ಥಿಗಳಿಗಾಗಿ ಅಣುಕು ವ್ಯಕ್ತಿತ್ವ ಪರೀಕ್ಷೆ ಆಯೋಜನೆ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಕರ್ನಾಟಕ ಲೋಕಸೇವಾ ಆಯೋಗ (ಕೆ.ಪಿ.ಎಸ್.ಸಿ) ವತಿಯಿಂದ 2023–24ನೇ ಸಾಲಿನ ಗೆಜೆಟೆಡ್ ಪ್ರೋಬೇಷನರಿ ಗ್ರೂಪ್–ಎ ಹಾಗೂ ಬಿ ವೃಂದದ ಒಟ್ಟು 384 ಹುದ್ದೆಗಳ (310–ಆರ್‌ಪಿಸಿ+74–ಹೆಚ್‌ಕೆ) ನೇಮಕಾತಿ ಪ್ರಕ್ರಿಯೆ ನಡೆಯುತ್ತಿದ್ದು, ಮುಖ್ಯ ಪರೀಕ್ಷೆಯಲ್ಲಿ ತೇರ್ಗಡೆಗೊಂಡು 1:3ರ ಅನುಪಾತದಲ್ಲಿ ವ್ಯಕ್ತಿತ್ವ ಪರೀಕ್ಷೆಗೆ ಅರ್ಹತೆ ಪಡೆದ ಅಭ್ಯರ್ಥಿಗಳಿಗಾಗಿ ಸಂದರ್ಶನ ಪೂರ್ವ ಸಿದ್ಧತೆ ಹಾಗೂ ಆತ್ಮವಿಶ್ವಾಸ ವೃದ್ಧಿ ಉದ್ದೇಶದಿಂದ ರಾಯಚೂರು ಜಿಲ್ಲಾಡಳಿತ ವತಿಯಿಂದ ಅಣುಕು ವ್ಯಕ್ತಿತ್ವ ಪರೀಕ್ಷೆ (MockPersonality Test) ಆಯೋಜಿಸಲಾಗುತ್ತಿದೆ.

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಸಾಧಿಸಲು ವಿಷಯ ಜ್ಞಾನದ ಜೊತೆಗೆ ವ್ಯಕ್ತಿತ್ವ, ಸಂವಹನ ಕೌಶಲ್ಯ, ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ, ಆಡಳಿತಾತ್ಮಕ ಮನೋಭಾವ ಹಾಗೂ ಸಮಕಾಲೀನ ವಿಷಯಗಳ ಅರಿವು ಅತ್ಯಂತ ಅವಶ್ಯಕವಾಗಿದೆ. ಈ



ಹಿನ್ನೆಲೆಯಲ್ಲಿ ಅಭ್ಯರ್ಥಿಗಳಿಗೆ ನೈಜ ಸಂದರ್ಶನದ ಅನುಭವ ಕಲ್ಪಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮ ರೂಪಿಸಲಾಗಿದೆ.

ಅಣುಕು ವ್ಯಕ್ತಿತ್ವ ಪರೀಕ್ಷೆಯಲ್ಲಿ ಅನುಭವಿ ಜಿಲ್ಲಾಮಟ್ಟದ ಅಧಿಕಾರಿಗಳು, ವಿಷಯ ತಜ್ಞರು, ಹಿರಿಯ ಸ್ಪರ್ಧಾತ್ಮಕ ಪರೀಕ್ಷಾ ಮಾರ್ಗದರ್ಶಕರು ಹಾಗೂ ಸಂದರ್ಶನ ಪ್ಯಾನೆಲ್ ಸದಸ್ಯರು ಭಾಗವಹಿಸಿ, ಅಭ್ಯರ್ಥಿಗಳ ಸಂದರ್ಶನ ನಡೆಸುವ ಮೂಲಕ ವೈಯಕ್ತಿಕ ಪ್ರತಿಕ್ರಿಯೆ, ಸಂದರ್ಶನ ತಂತ್ರಗಳು, ಸಾಮಾನ್ಯ ತಪ್ಪುಗಳು ಹಾಗೂ ವ್ಯಕ್ತಿತ್ವ ಅಭಿವೃದ್ಧಿಗೆ ಸಂಬಂಧಿಸಿದ ಉಪಯುಕ್ತ ಸಲಹೆಗಳನ್ನು ನೀಡಲಿದ್ದಾರೆ.

ಭಾಗವಹಿಸಲು ಇಚ್ಛಿಸುವ ಅರ್ಹ ಅಭ್ಯರ್ಥಿಗಳು ತಮ್ಮ ಹೆಸರು, ಪರೀಕ್ಷಾ ನೋಂದಣಿ ಸಂಖ್ಯೆ, ಸಂಪರ್ಕ ಸಂಖ್ಯೆ ಹಾಗೂ ಮುಖ್ಯ ಪರೀಕ್ಷೆಯ ವಿವರಗಳನ್ನು ಜಿಲ್ಲಾಡಳಿತದ ಸೂಚನೆಯಂತೆ ಮುಂಚಿತವಾಗಿ ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿದೆ.

ನೋಂದಣಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಕಾರ್ಯಕ್ರಮ ಆಯೋಜನಾ ಅಧಿಕಾರಿಗಳಾದ ಮಹಮ್ಮದ್ ಯೂಸೂಫ್, ಯೋಜನಾ ನಿರ್ದೇಶಕ□ರು ಸಿಯೋಲ್ ಇವರ ಮೊಬೈಲ್ ಸಂಖ್ಯೆ:9964012161ಗೆ ಸಂಪರ್ಕ ಮಾಡಬಹುದಾಗಿದೆ. ಕಾರ್ಯಕ್ರಮದ ದಿನಾಂಕ ಹಾಗೂ ಸ್ಥಳವನ್ನು ಶೀಘ್ರದಲ್ಲೇ ಪ್ರತ್ಯೇಕವಾಗಿ ಪ್ರಕಟಿಸಲಾಗುವುದು.

ಜಿಲ್ಲೆಯ ಸ್ಪರ್ಧಾತ್ಮಕ ಪರೀಕ್ಷಾ ಅಭ್ಯರ್ಥಿಗಳು ಈ ಅಪರೂಪದ ಅವಕಾಶವನ್ನು ಸದುಪಯೋಗಪಡಿಸಿಕೊಂಡು ವ್ಯಕ್ತಿತ್ವ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡುವಂತೆ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗ್ರಾಮೀಣ ಭಾಗದಲ್ಲಿ ವಿದ್ಯುತ್ ವ್ಯತ್ಯಯ

ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ವ್ಯಾಪ್ತಿಗೆ ಬರುವ 110/11 ಕೆವಿ ಯರಗೇರಾ ವಿದ್ಯುತ್ ಉಪ–ಕೇಂದ್ರದ ಮಿಡಗಲದಿನ್ನಿ, ವೈ.ಮಲ್ಲಾಪುರ, ಎಲ್.ಕೆ.ದೊಡ್ಡಿ, ಜಂಬಲದಿನ್ನಿ ಫೀಡರ್‌ಗಳಲ್ಲಿ ತುರ್ತು ನಿರ್ವಹಣ ಕಾರ್ಯ ಹಮ್ಮಿಕೊಂಡಿರುವ ಪ್ರಯುಕ್ತ ಮೇ.02ರ ಬೆಳಗ್ಗೆ 10ಗಂಟೆಯಿಂದ ಸಾಯಂಕಾಲ 05ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ವಿದ್ಯುತ್ ಗ್ರಾಹಕರು ಸಹಕರಿಸುವಂತೆ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕನ್ನಡ ರಕ್ಷಣಾ ಯುವ ವೇದಿಕೆಯಿಂದ 30 ಜೋಡಿಗಳ ಸಾಮೂಹಿಕ ವಿವಾಹ



• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ

ಇಲ್ಲಿನ ಕನ್ನಡ ರಕ್ಷಣಾ ಯುವ ವೇದಿಕೆಯಿಂದನಿನ್ನೆಡಾ.ಸಿ.ಮುನಿಸ್ವಾಮಿ ಕಪ್ಪಗಲ್ಲು ಇವರ ನೇತೃತ್ವದಲ್ಲಿ 23 ನೇ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ ತಾಲೂಕಿನಕಪ್ಪಗಲ್ಲು ಬಳಿಯ ಅಮರೇಶ್ವರ ದೇವಸ್ಥಾನದ ಆವರಣದಲ್ಲಿ ನಡೆದವು.

ಮುನಿಸ್ವಾಮಿ ಅವರ ಅಧ್ಯಕ್ಷತೆಯಲ್ಲಿ 30 ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿರಿಸಿದರು. ಈ ವೇಳೆ ಮಾತನಾಡಿದ ಅವರು ಕಳೆದ ಅನೇಕ ವರ್ಷಗಳಿಂದ ನಡೆಯುತ್ತಿರುವ ಈ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ನೂರಾರು ಜೋಡಿಗಳು ದಾಂಪತ್ಯಕ್ಕೆ ಕಾಲಿಟ್ಟು ಉತ್ತಮಜೀವನ ನಡರಸುತ್ತಿದ್ದಾರೆ. ಹಾಗೆ ನೀವು ಸಹ ಉತ್ತಮ ಜೀವನಕ್ಕೆ ಸಾಕ್ಷಿಗಳಾಗಬೇಕು ಎಂದು ನವ ಜೋಡಿಗಳಿಗೆ ಆಶಿರ್ವಾದ ಪೂರಕ ಕರೆ ನೀಡಿದರು.

ಈ ಸಮಾರಂಭದಲ್ಲಿ ಶ್ರೀ ರಾಯರ ಸೇವ ಟ್ರಸ್ಟ್ ಅದ್ಯಕ್ಷೆ ಎಸ್. ರತ್ನಮ್ಮ ಶ್ರೀಧರ್ ಇವರು ಮತ್ತು ಸದಸ್ಯರು ಸೇರಿ ಈ ಉಚಿತ ಸಾಮೂಹಿಕ ವಿವಾಹ ಕಾರ್ಯಕಮದಲ್ಲಿ ಪಾಲ್ಗೊಂಡು ಸೇವೆ ಸಲ್ಲಿಸಿದರು.

ಸುಸೀಲಮ್ಮ ಮುನಿಸ್ವಾಮಿ, ಶೃತಿ, ಶಂಕರ್, ಕೊರಿಬಸವ, ದ್ಯಾವಣ್ಣ ಸಿರಿವಾರ, ತಿಪ್ಪೇಸ್ವಾಮಿ ಬಿಸಲಳ್ಳಿ, ಪರಸರಾಮಪ್ಪ, ಅರ್ಚಕ ಶಿವಪ್ಪಸ್ವಾಮಿ ಇನ್ನು ಅನೇಕರು ಪಾಲ್ಗೊಂಡಿದ್ದರು.

# ಸರ್ಕಾರದ ವಿರುದ್ಧ ಭೂ ಸಂತ್ರಸ್ಥರಿಂದ ಮೇ2 ರಿಂದ ಸರಣಿ ಉಪವಾಸ ಸತ್ಯಾಗ್ರಹ

• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ

ತಾಲೂಕಿನ ಕುಡುತಿನಿ ಬಳಿ ಕೈಗಾರಿಕೆಗಳಿಗೆಂದು ಕೆಐಡಿಬಿ ವಶ ಪಡಿಸಿಕೊಂಡ ನಮ್ಮ ಜಮೀನಿಗೆ ನ್ಯಾಯವಾದ ಭೂ ಬೆಲೆ ನೀಡಬೇಕು, ಉದ್ದೇಶಿತ ಕೈಗಾರಿಕೆಗಳನ್ನು ಪ್ರಾರಂಭ ಮಾಡಬೇಕು, ಭೂ ಸಂತಸ್ತರ ಕುಟುಂಬಗಳಿಗೆ ಉದ್ಯೋಗ ನೀಡಬೇಕು, ಇಲ್ಲವಾದರೆ ನಮ್ಮ ಭೂಮಿ ನಮಗೆ ವಾಪಸು ನೀಡಬೇಕು ಎಂದು ಹೋರಾಟ ಮಾಡುವ ಭೂ ಸಂತ್ರಸ್ಥ ರೈತರ ಹೋರಾಟವನ್ನು ಪೊಲೀಸರಿಂದ ಹತ್ತಿಕ್ಕುವ ಪ್ರಯತ್ನ ನಡೆಯುತ್ತಿದೆ. ಅದಕ್ಕಾಗಿ ಈ ಧೋರಣೆಯನ್ನು ಖಂಡಿಸಿ ಮೇ.2 ರಿಂದ ಸರಣಿ ಉಪವಾಸ ಸತ್ಯಾಗ್ರಹ ನಡೆಸಲು ನಿರ್ಧರಿಸಿದೆ.

ಈ ಕುರಿತು ಇಂದು ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಟಿ ನಡೆಸಿದ ಜೆ.ಸತ್ಯಬಾಬು. ಸರ್ಕಾರ, ಪೊಲೀಸರು ಜಿಂದಾಲ್ ನ ಕೈಗೊಂಬೆಗಳಾಗಿ ಕೆಲಸ ಮಾಡುತ್ತಿದ್ದಾರೆ. ಸಂಡೂರು ಶಾಸಕರ ಕಛೇರಿಗೆ ತೆರಳಿ ಮನವಿ ಮಾಡಲು ಪಾದಯಾತ್ರೆ ಹೊರಟರೆ ರೈತರನ್ನು ಬಂಧಿಸುತ್ತಾರೆ.ಆರ್ಸಲ್ ಮಿತ್ತಲ್ ಗಾಗಿ ವಶಪಡಿಸಿಕೊಂಡ ಭೂಮಿಯಲ್ಲಿ ಈಗ ಜಿಂದಾಲ್ ಕಂಪನಿಯ ಜೆ.ಎಫ್. ಇ. ಎಲೆಕ್ಟ್ರಿಕಲ್ ಗಾಗಿ 204 ಎಕರೆಗಳು ಒಳಗೊಂಡು ಒಟ್ಟು 900 ಎಕರೆಗಳ ಭೂಮಿಯನ್ನು ಜಿಂದಾಲ್ ಕಂಪನಿಗೆ ಪರಬಾರೆ ಮಾಡಲು ಮುಂದಾಗಿರುವ ಕೆಐಡಿಬಿ ಯು ಕೋರ್ಟ್ ಗೆ ಸುಳ್ಳು ಹೇಳಿಕೆ ನೀಡಿದೆ.


ಶಾಂತ ರೀತಿಯಿಂದ, ಕಾನೂನು ಬದ್ಧವಾಗಿ ಹೋರಾಟ ಮಾಡುತ್ತಾ ಧರಣಿ ಕುಳಿತಿರುವ ರೈತರು ರಸ್ತೆ ತಡೆ ಮಾಡುತ್ತಾರೆ, ಅಲ್ಲಿಯೆ ಧರಣಿ ಮಾಡುತ್ತಾರೆ. ಸಾರ್ವಜನಿಕರಿಗೆ ತೊಂದರೆ ಉಂಟು ಮಾಡುವ ಹೋರಾಟವನ್ನು ಸಮಿತಿಯು ಮಾಡಲಿದೆ ಎಂದು ಸುಳ್ಳು ಹೇಳಿಕೆಯನ್ನು ನ್ಯಾಯಾಲಯಕ್ಕೆ ನೀಡಿ ರೈತರ ಮೇಲೆ ಇಂಜಕ್ಸನ್ ಆರ್ಡರ್ ತಂದಿದ್ದಾರೆ. ಜೂನ್ 7 ರ ವರೆಗೆ 144 ಸೆಕ್ಸನ್ ಸಹ ಜಾರಿಮಾಡಲಾಗಿದೆ.

ಅದಕ್ಕಾಗಿ ಈ ಸರ್ಕಾರಕ್ಕೆ ಪಾಠಕಲಿಸಲು ಹೋರಾಟವನ್ನು ತೀವ್ರಗೊಳಿಸಲಿದೆಂದು ಹೇಳಿದರು.



# ಮೇ 3ಕ್ಕೆ ಸ್ವಾಮಿ ನಿರ್ಭಯಾನಂದ ಸರಸ್ವತಿ ಅವರಿಂದ ಉಪನ್ಯಾಸ

• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ



ನಗರದಡಾ.ರಾಜ್ ಕುಮಾರ್ ರಸ್ತೆಯಲ್ಲಿರುವ ಪಾಂಚಜನ್ಯ ಸಭಾಂಗಣದಲ್ಲಿ ಮೇ 3ರಂದು ಸಂಜೆ 6 ಗಂಟೆಗೆ ವಿಜಯಪುರ–ಗದಗ ಶ್ರೀರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷ

ಶ್ರೀ ನಿರ್ಭಯಾನಂದ ಸರಸ್ವತಿ ಅವರಿಂದ ಸ್ವಾಮಿ ವಿವೇಕಾನಂದರ ಜೀವನ ಸಂದೇಶ ಕುರಿತು ವಿಶೇಷ ಉಪನ್ಯಾಸ "ವಿವೇಕಲೀಲಾಮೃತ" ಜರುಗಲಿದೆ. ಉಪನ್ಯಾಸ ಶುರು ಮುನ್ನ ರಾಜ್ಯೋತ್ಸವ ಪ್ರಶಸ್ತಿಪುರಸ್ಕೃತ ಹಿರಿಯ ರಂಗಭೂಮಿ ಕಲಾವಿದೆ ವೀಣಾ ಆದವಾನಿ ಅವರು ಹೇಮರೆಡ್ಡಿ ಮಲ್ಲಮ್ಮ ನಾಟಕದ ಭಕ್ತಿಗೀತೆಗಳನ್ನು ಪ್ರಸ್ತುತಪಡಿಸುವರು. ಮುದ್ದಟನೂರು ಹೆಚ್.ತಿಪ್ಪೇಸ್ವಾಮಿ

ಹಾರ್ಮೋನಿಯಂ ಹಾಗೂ ಯೋಗೀಶ್ ಸಂಗನಕಲ್ಲು ತಬಲಾ ಸಾಥ್ ನೀಡುವರು. ಬಳ್ಳಾರಿ ಭಾಗದ ಭಕ್ತರ ಆಪೇಕ್ಷೆ ಮೇರೆಗೆ ಸ್ವಾಮಿ ನಿರ್ಭಯಾನಂದ ಶ್ರೀಗಳು ಪ್ರತಿ ತಿಂಗಳ ಮೊದಲ ಭಾನುವಾರ ನಗರಕ್ಕೆ ಆಗಮಿಸಿ ವಿಶೇಷ ಉಪನ್ಯಾಸ ನೀಡುತ್ತಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಯುವಕರು ಹಾಗೂ ಮಹಿಳೆಯರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಮೂಲಕ ಸ್ವಾಮಿ ವಿವೇಕಾನಂದರ ವಿಚಾರಧಾರೆಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ವಿವೇಕಮಂಟಪದ ಸಂಯೋಜಕ ಪ್ರಭುದೇವ ಕಪ್ಪಗಲ್ಲು ಅವರು ಮನವಿ ಮಾಡಿದ್ದಾರೆ.

# ಎ.ಎಸ್.ಎಂ ಕಾಲೇಜ್‌ಯಿಂದ ವಾರ್ಷಿಕ ಕ್ರೀಡಾಕೂಟ ಆಯೋಜನೆ



• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ

ನಗರದ ಶ್ರೀಮತಿ ಅಲ್ಲಂ ಸುಮಂಗಳಮ್ಮ ಸ್ಮಾರಕ ಮಹಿಳಾ ಮಹಾವಿದ್ಯಾಲಯದ ಆಂತರಿಕ ಗುಣಮಟ್ಟ ಭರವಸೆಯ ಕೋಶ ಮತ್ತು ದೈಹಿಕ ಶಿಕ್ಷಣ ವಿಭಾಗದ ಸಹಯೋಗದೊಂದಿಗೆ "2025–26 ನೇ ವಾರ್ಷಿಕ ಕ್ರೀಡಾಕೂಟ" ಕಾರ್ಯಕ್ರಮವನ್ನು ಆಯೋಜನೆ ಮಾಡಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಹಾವಿದ್ಯಾಲಯದ ಕಾಲೇಜು ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀಮತಿ ಕಾತ್ಯಾಯಿನಿ ಮರಿದೇವಯ್ಯರವರುವಹಿಸಿಕೊಂಡಿದ್ದರು. ವೇದಿಕೆಯ ಮೇಲಿರುವ ಎಲ್ಲ ಗಣ್ಯಮಾನ್ಯರು ಕ್ರೀಡಾ ಜ್ಯೋತಿಯನ್ನು ಬೆಳಗುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಹಿರಿಯ ಆಯ್ಕೆ ದರ್ಜೆಯ ದೈಹಿಕ ಶಿಕ್ಷಣ ನಿರ್ದೇಶಕರಾದ ಮುತ್ತೇಗೌಡ ಕೆ.ವಿ, ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಕ್ರೀಡೆಗಳಲ್ಲಿ ವಿದ್ಯಾರ್ಥಿನಿಯರು ಭಾಗವಹಿಸಿದಾಗ ಸೋಲು ಮತ್ತು ಗೆಲುವನ್ನು ಸಮಾನವಾಗಿ ಸ್ವೀಕರಿಸುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು ಎಂದು ವಿದ್ಯಾರ್ಥಿನಿಯರಿಗೆ ತಮ್ಮ ಭಾಷಣದ ಮೂಲಕ ತಿಳಿಸಿದರು.

ಮಹಾವಿದ್ಯಾಲಯದಪ್ರಾಂಶುಪಾಲರಾದ ಡಾ. ದೂಪಂ ಸತೀಶ್ ರವರು ಈ ಕ್ರೀಡೆಗಳು ದೈಹಿಕ ಸಾಮರ್ಥ್ಯ ಮತ್ತು ಕೌಶಲ್ಯಗಳನ್ನು ಪ್ರದರ್ಶಿಸುವ ಮನರಂಜನಾ ಚಟುವಟಿಕೆಗಳಾಗಿವೆ ಮತ್ತು ವಿದ್ಯಾರ್ಥಿನಿಯರಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತವೆ ಎಂದು ತಿಳಿಸಿದರು. ಶ್ರೀಮತಿ ಕಾತ್ಯಾಯಿನಿ ಎಂ. ಮರಿದೇವಯ್ಯ ಅವರು ದೈಹಿಕ ಆರೋಗ್ಯ, ಮಾನಸಿಕ ಸದೃಢತೆ ಮತ್ತು ಶಿಸ್ತು ಸಹಕಾರದಂತಹ ಜೀವನ ಮೌಲ್ಯಗಳು ಬೆಳೆಸುವ ಮೂಲಕ ವ್ಯಕ್ತಿಯ ಸರ್ವಾಂಗೀಣ ಅಭಿವೃದ್ಧಿಗೆ ಈ ಕ್ರೀಡೆಗಳು ಅಡಿಪಾಯವಾಗಿವೆ ಮತ್ತು ವಿದ್ಯಾರ್ಥಿನಿಯರಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸುತ್ತವೆ ಎಂದು ತಮ್ಮ ಅಧ್ಯಕ್ಷತೆಯ ನುಡಿಗಳ ಮೂಲಕ ತಿಳಿಸಿದರು.

ಮಹಾವಿದ್ಯಾಲಯದ ಐಕಿಂಅ ಸಂಯೋಜಕರಾದ ಡಾ. ಸಾಯಿದ ಕೆ.ತನ್ವೀರ್, ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಜಿ ಅಶೋಕ್, ದೈಹಿಕ ಶಿಕ್ಷಣ ವಿಭಾಗದ ವಿದ್ಯಾರ್ಥಿನಿಯರ ಪ್ರಧಾನ ಕಾರ್ಯದರ್ಶಿಗಳಾದ ಪ್ರತ್ಯುಷದೇವಿ, ಸಹ ಕಾರ್ಯದರ್ಶಿಗಳಾದ ಮಲ್ಲೇಶ್ವರಿ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು, ವಿದ್ಯಾರ್ಥಿನಿಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಬಿ.ಎ ವಿಭಾಗದ ನಾಲ್ಕನೇ ಸೆಮಿಸ್ಟರ್ ವಿದ್ಯಾರ್ಥಿನಿಯಾದ ಶ್ರೀಲತಾ ವಾರ್ಷಿಕ ಕ್ರೀಡಾಕೂಟದ ಪ್ರತಿಜ್ಞಾವಿಧಿಯನ್ನು ಬೋಧಿಸಿದರು.ಬಿ.ಎಸ್ಸಿ ನಾಲ್ಕನೇ ಸೆಮಿಸ್ಟರ್ ವಿದ್ಯಾರ್ಥಿನಿಯಾದ ಶ್ರೇಯ ಅತಿಥಿಗಳನ್ನು ಸ್ವಾಗತಿಸಿದರು.

ಬಿ.ಎ ವಿಭಾಗದ ನಾಲ್ಕನೇ ಸೆಮಿಸ್ಟರ್ ವಿದ್ಯಾರ್ಥಿನಿಯಾದ ಆರತಿ ಮುಖ್ಯ ಅತಿಥಿಗಳ ಪರಿಚಯವನ್ನು ಮಾಡಿದರು. ಬಿ.ಎಸ್ಸಿ ವಿಭಾಗದ ನಾಲ್ಕನೇಸೆಮಿಸ್ಟರ್ ವಿದ್ಯಾರ್ಥಿನಿಯಾದ ಅಮೃತ ವಂದನಾರ್ಪಣೆಯನ್ನು ಮಾಡಿದರು. ಬಿ.ಎ ವಿಭಾಗದ ನಾಲ್ಕನೇ ಸೆಮಿಸ್ಟರ್ ವಿದ್ಯಾರ್ಥಿನಿಯಾದ ರಾಜೇಶ್ವರಿ ಕಾರ್ಯಕ್ರಮವನ್ನು ನಿರೂಪಿಸಿದರು.

# ಬುದ್ಧ ಜಯಂತಿ: ಪ್ರತಿಭಾ ಪುರಸ್ಕಾರ



• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ

ಇಂದು 2570ನೇ ಬುದ್ದ ಜಯಂತಿ ಅಂಗವಾಗಿ ತಾಲೂಕಿನ ಸಂಗನಕಲ್ಲು ಬೆಟ್ಟದಲ್ಲಿನ ಬಯಲು ಬುದ್ದ ವಿಹಾರದಲ್ಲಿ. ದೇವನಾಂ ಪ್ರಿಯ ಬಯಲು ಬುದ್ಧ ವಿವಾರ ಟ್ರಸ್ಟ್2570ನೇ ನಿಂದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಜರುಗಿತು.

ತಾಲೂಕಿನಸಿರಿವಾರ,ಕಪ್ಪಗಲ್ಲುಮತ್ತು ಸಂಗನಕಲ್ಲು ಗ್ರಾಮಗಳ ವಾಸಿಗಳಾಗಿ 2025 26ನೇ ಸಾಲಿನ ಎಸ್ ಎಸ್ ಎಲ್ ಸಿ ಮತ್ತು ಪಿಯುಸಿಯಲ್ಲಿ ಶೆ. 90 ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನಡೆಯಿತು.

ಟ್ರಸ್ಟಿನ ಪದಾಧಿಕಾರಿಗಳೊಂದಿಗೆ ಮೇಯರ್ ಗಾದೆಪ್ಪ, ಹಿರಿಯ ಲೆಕ್ಕ ಪರಿಶೋಧಕ ಸಿರಿಗೇರಿ ಪನ್ನರಾಜ್, ಸಂಗನಕಲ್ಲು ವಿಜಯ್ ಕುಮಾರ್, ಎರ್ರೆಣ್ಣ, ಈರಣ್ಣ , ಮೆಹತಾಬ್ ನಿವೃತ್ತ ಶಿಕ್ಷಕರು, ಕೊಪ್ಪಲ್ ಬಾಬು, ಮುಖ್ಯಗುರು, ಧರ್ಮಣ್ಣ ಶಿಕ್ಷಕರು, ಸಿ ಶಿವಕುಮಾರ್ ಜಿಲ್ಲಾ ಛಲವಾದಿ ಮಹಾಸಭಾಧ್ಯಕ್ಷ, ಗೋವಿಂದರಾಜ್ ನಾಗಲಕರಿ, ನರಸಪ್ಪ, ನಾಗರತ್ನ ಬಂತೇಜಿ, ನಾಗರಾಜ್ ಕೆ, ಲಿಂಗಪ್ಪ, ಹೊನ್ನೂರಪ್ಪ ಕಪ್ಪಗಲ್, ಚಂದ್ರಣ್ಣ. ಲಿಂಗದೇವನಹಳ್ಳಿ ನಾಗೇಂದ್ರ, ಮೋಕ ಹನುಮಂತ, ಕೊಳಗಲ್, ಸೂರಿ ಕಪ್ಪಗಲ್, ಸಂಗನಕಲ್ ಚಂದ್ರ, ಮಹೇಂದ್ರ ಕಪ್ಪಗಲ್ ಮೊದಲಾದವರು ಇದ್ದರು.ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳಾದ ಉಮಾದೇವಿ, ಕಪಗಲ್, ಕಾವೇರಿ ಕೆ, ಉಮಾ, ತ್ರಿಷಾ ಕೆ, ಕಸ್ತೂರಿ, ಆಶಾಭಿ,ಕಾಮಾಕ್ಷಿ.ಹೆಚ್, ಪಿ ನಬಿ ರಸುಲ್, ತನುಜಾ, ಉಮಾದೇವಿ, ವಂಶಿ, ಶ್ವೇತ, ಭಾಗ್ಯ ಚಂದನ, ವಚನ ಪ್ರಿಯ ಡಿ.ಎನ್, ಸಿ.ಗಿರಿಸಾಯಿ, ನಾಗವೇಣಿ ದ್ವಿತೀಯ: ಪಿಯುಸಿಯಲ್ಲಿ ಸಿ. ಉಮಾದೇವಿ ಕಪಗಲ್, ದೀಕ್ಷಿತ್ ಕಾರೇಕಲ್ ಇವರನ್ನು ಸನ್ಮಾನಿಸಿ ಗೌರವಿಸಲಾಯ್ತು.

# ಯಾಸಿನ್ ಸಾಬ್ ಮಸ್ಜಿದ್(ಸುನ್ನಿ) ವಕ್ಫ್ ಸಂಸ್ಥೆಯ ಕಾರ್ಯಕಾರಿ ಸಮಿತಿ ಚುನಾವಣೆ

• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ

ಬಳ್ಳಾರಿ ನಗರದ ಕೌಲ್ ಬಜಾರ್ ವ್ಯಾಪ್ತಿಯಲ್ಲಿ ಬರುವ ವಕ್ಫ್ ಸಂಸ್ಥೆಯಾದ ಯಾಸಿನ್ ಸಾಬ್ ಮಸ್ಜಿದ್(ಸುನ್ನಿ) ವಕ್ಫ್ ಸಂಸ್ಥೆಗೆ ಹೊಸ ಸಮಿತಿ ರಚಿಸುವ ನಿಮಿತ್ತ ಮೇ 05 ರಿಂದ 12 ರ ವರೆಗೆ ಚುನಾವಣೆ ಪ್ರಕ್ರಿಯೆ ನಡೆಯಲಿದೆ.

ಅರ್ಹ ಅಭ್ಯರ್ಥಿಗಳು ಚುನಾವಣಾ ನಾಮಪತ್ರವನ್ನು ಮೇ 05 ರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 01.30 ಗಂಟೆಯ ವರೆಗೆ ಜಿಲ್ಲಾ ವಕ್ಫ್ ಕಚೇರಿಯಿಂದ ಪಡೆದು ಭರ್ತಿ ಮಾಡಿ, ಸೂಕ್ತ ದಾಖಲೆಗಳೊಂದಿಗೆ ಮೇ 12 ರ ಮಧ್ಯಾಹ್ನ 01.30 ಗಂಟೆಯ ಒಳಗಾಗಿ ಸಲ್ಲಿಸಬಹುದು.

ನಾಮಪತ್ರ ಪರಿಶೀಲನೆ ಮೇ 13 ರ ಬೆಳಿಗ್ಗೆ 11.30 ಗಂಟೆಯಿಂದ ನಡೆಯಲಿದೆ. ನಾಮಪತ್ರ ಹಿಂಪಡೆಯಲು ಮೇ 14 ರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 02 ಗಂಟೆಯ ವರೆಗೆ ಅವಕಾಶವಿದೆ. ಅದೇ ದಿನ ಮಧ್ಯಾಹ್ನ 02.30 ರ ನಂತರ ಚುನಾವಣಾ ಚಿನ್ಹೆಗಳ ಹಂಚಿಕೆ ಮಾಡಿ ಅಭ್ಯರ್ಥಿಗಳ ಅಂತಿಮ ಪಟ್ಟಿ ಪ್ರಕಟಿಸಲಾಗುವುದು.

ಮೇ 23 ರ ಶನಿವಾರ ಬೆಳಿಗ್ಗೆ 08 ರಿಂದ ಮಧ್ಯಾಹ್ನ 03 ಗಂಟೆಯವರೆಗೆ ನಗರದ ಕೌಲ್ ಬಜಾರ್ ನ 1ನೇ ರೈಲ್ವೆ ಗೇಟ್ ಹತ್ತಿರದ ಮೊಹಮ್ಮದಿಯಾ ಶಾಲೆ ಮತ್ತು ಕಾಲೇಜಿನಲ್ಲಿ ಚುನಾವಣೆ ನಡೆಸಿ, ಅದೇ ದಿನ ಸಂಜೆ 04 ಗಂಟೆಯಿಂದ ಮತ ಎಣಿಕೆ ಕಾರ್ಯ ನಡೆಯಲಿದೆ ಎಂದು ಕಲಬುರಗಿ ವಿಭಾಗದ ವಿಭಾಗೀಯ ವಕ್ಫ್ ಅಧಿಕಾರಿ ಹಾಗೂ ಕೌಲ್ ಬಜಾರ್ ಯಾಸೀನ್ ಸಾಬ್ ಮಸ್ಜಿದ್(ಸುನ್ನಿ) ಚುನಾವಣಾಧಿಕಾರಿ ನೂರ್ ಪಾಷಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಯಡಿಯೂರಪ್ಪ ಅಭಿಮಾನೋತ್ಸವ ಸಿದ್ಧತಾ ಸಭೆ

• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ



ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಇಂದು ಈ ತಿಂಗಳ 9 ರಂದು ಚಿತ್ರದುರ್ಗದಲ್ಲಿ ನಡೆಯುವ ಮಾಜಿ ಮುಖ್ಯಮಂತ್ರಿಬಿ.ಎಸ್.ಯಡಿಯೂರಪ್ಪ ಅವರ 50 ವರ್ಷಗಳ ರಾಜಕೀಯ ಜೀವನದ ಅಭಿಮಾನೋತ್ಸವ ಪೂರ್ವ ಸಿದ್ದತಾ ಸಭೆ ನಡೆಯಿತು.

ನಗರದ ಮಾಜಿ ಶಾಸಕ ಗಾಲಿ ಸೋಮಶೇಖರ ರೆಡ್ಡಿ, ಮಾಜಿ ಸಂಸದ ಸಣ್ಣ ಪಕ್ಕೀರಪ್ಪ, ಜಿಲ್ಲಾ ಬಿಜೆಪಿ ಅಧ್ಯಕ್ಷ ಅನಿಲ್ ನಾಯ್ಡು, ಮಾಜಿ ಅಧ್ಯಕ್ಷ ಗುತ್ತಿಗನೂರು ವಿರೂಪಾಕ್ಷಗೌಡ, ಬಿಚ್ಚುಗಲ್ಲು ಪಂಚಾಕ್ಷರಪ್ಪ ಮೊದಲಾದವರು ಅಭಿಮಾನೋತ್ಸವಕ್ಕೆ ಜಿಲ್ಲೆಯಿಂದ ಯಡಿಯೂರಪ್ಪಅವರಅಭಿಮಾನಿಗಳನ್ನು ಕರೆದುಕೊಂಡು ಹೋಗುವ ಕುರಿತು ಚರ್ಚೆ ನಡೆಸಿದರು.

ಈ ವೇಳೆ ಜಿಲ್ಲೆಯಲ್ಲಿನ ಯಡಿಯೂರಪ್ಪ ಅಭಿಮಾನಿಗಳ ಮತ್ತು ವೀರಶೈವ ಲಿಂಗಾಯತ ಸಮಾಜದ ಮುಖಂಡರುಗಳ ಸಭೆಯನ್ನು ನಾಳೆ ಸಂಜೆ. 5 ಕ್ಕೆ ನಗರದ ವೀರಶೈವ ವಿದ್ಯಾವರ್ಧಕ ಸಂಘದ ಸಭಾಂಗಣದಲ್ಲಿ ನಡೆಸಲು ನಿರ್ಧರಿಸಲಾಯ್ತು.

ಸಭೆಯಲ್ಲಿ ಮುಖಂಡರುಗಳಾದ, ಎಸ್.ಮಲ್ಲನಗೌಡ, ಶ್ರಿನಿವಾಸ್ ಮೋತ್ಕರ್, ಬಣಾಪುರ ನಾಗರಾಜಗೌಡ, ಕಪ್ಪಗಲ್ಲು ಶಿವರುದ್ರಪ್ಪ, ಹೊನ್ನನಗೌಡ, ನಡವಿ ವೀರನಗೌಡ, ಹಲಕುಂದಿ ವೀರನಗೌಡ, ಜಡೇಗೌಡ ಮೊದಲಾದವರು ಇದ್ದರು.

# ನಂದಿನಿ ಪಾರ್ಲರ್ ಸ್ಥಾಪನೆ ಅಹವಾಲುಗಳಿಗೆ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ

ಸಾರ್ವಜನಿಕರಿಗೆ ಮತ್ತು ಪ್ರಯಾಣಿಕರಿಗೆ ಗುಣಮಟ್ಟದ ಹಾಲು ಹಾಗೂ ಹಾಲಿನ ಉತ್ಪನ್ನಗಳನ್ನು ಸುಲಭವಾಗಿ ಒದಗಿಸುವ ಉದ್ದೇಶದಿಂದ, ಸಿರುಗುಪ್ಪ ನಗರಸಭೆಯ ಮಾರುಕಟ್ಟೆ ಆವರಣದಲ್ಲಿ ನಂದಿನಿ ಪಾರ್ಲರ್ ಸ್ಥಾಪಿಸಲು ರಾಬಕೊವಿ ಜಿಲ್ಲಾ ಹಾಲು ಒಕ್ಕೂಟಕ್ಕೆ ನಿವೇಶನ ಮಂಜೂರು ಮಾಡಲು ಉದ್ದೇಶಿಸಲಾಗಿದ್ದು, ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸಬಹುದಾಗಿದೆ.

ಸಿರುಗುಪ್ಪ–ಬಳ್ಳಾರಿ ರಾಷ್ಟ್ರೀಯ ಹೆದ್ದಾರಿಯ ಬಸ್ ನಿಲ್ದಾಣದ ಪಕ್ಕದಲ್ಲಿರುವ ಇಂದಿರಾ ಕ್ಯಾಂಟೀನ್ ಮುಂಭಾಗದ ನಗರಸಭೆ ತರಕಾರಿ ಮಾರುಕಟ್ಟೆ ಆವರಣದಲ್ಲಿ 10*15=150 ಚದರ ಅಡಿ ವಿಸ್ತೀರ್ಣದ ನಿವೇಶನ ಅಳತೆಯಲ್ಲಿ ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಜಿಲ್ಲಾ ಹಾಲು ಒಕ್ಕೂಟದ ಮೂಲಕ ಶುದ್ಧ ಮತ್ತು ಪೌಷ್ಟಿಕ ನಂದಿನಿ ಉತ್ಪನ್ನಗಳನ್ನು ಸಾರ್ವಜನಿಕರಿಗೆ ತಲುಪಿಸುವ ಉದ್ದೇಶ ಹೊಂದಲಾಗಿದೆ.

ಈ ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ಸಾರ್ವಜನಿಕರಲ್ಲಿ ಏನಾದರೂ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಹೊರಡಿಸಿದ 15 ದಿನಗಳ ಒಳಗಾಗಿ ಸೂಕ್ತ ದಾಖಲೆಗಳೊಂದಿಗೆ ಸಿರಗುಪ್ಪ ನಗರಸಭೆ ಕಾರ್ಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಒಂದು ವೇಳೆ ನಿಗದಿತ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಬರದಿದ್ದಲ್ಲಿ, ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ರ ನಿಯಮಾನುಸಾರ ನಿವೇಶನ ಮಂಜೂರು ಮಾಡಲು ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಸಿರುಗುಪ್ಪ ನಗರಸಭೆಯ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಟ ಚೇತನ್ ಗಡಿಪಾರಿಗೆ ಕರ್ನಾಟಕ ರಕ್ಷಣಾ ವೇದಿಕೆ ಕಾವಲುಪಡೆ ಆಗ್ರಹ



• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ

ಕರ್ನಾಟಕ ರತ್ನ ರಾಜಕುಮಾರ್ ಅವರ ಸಮಾಧಿ ಸ್ಥಳ ಪುಣ್ಯ ಭೂಮಿ ಬಗ್ಗೆ ವಿವಾದ ಹೇಳಿಕೆ ನೀಡಿದ ನಟ ಚೇತನ ಅವನನ್ನು ಕರ್ನಾಟಕದಿಂದ ಗಡಿ ಪಾರು ಮಾಡುವಂತೆ ಕರ್ನಾಟಕ ರಕ್ಷಣಾ ವೇದಿಕೆ ಕಾವಲುಪಡೆ ಗೃಹ ಸಚಿವ ಡಾ.ಪರಮೇಶ್ವರ ಅವರಿಗೆ ಬರೆದ ಮನವಿ ಪತ್ರವನ್ನು ಇಂದು ಜಿಲ್ಲಾಡಳಿತಕ್ಕೆ ಸಲ್ಲಿಸಿದೆ.

ಕಾವಲ ಪಡೆಯ ರಾಜ್ಯ ಅಧ್ಯಕ್ಷ ಡಾ.ಹೆಚ್ .ಸುರೇಶ್ ಅವರು ತಮ್ಮ ಕಾರ್ಯಕರ್ತರ ಜೊತೆ ಮನವಿ ಸಲ್ಲಿಸಿ. ವರನಟ ಡಾ। ರಾಜ್ ಕುಮಾರ್ ಅವರು ಈ ನಾಡಿನ ಸಾಂಸ್ಕೃತಿಕ ರಾಯಭಾರಿಯಾಗಿದ್ದಾರೆಸಾಹಿತಿಗಳು, ಕನ್ನಡ ಚಿಂತಕರು, ಕನ್ನಡ ಬಾಷೆಗೆ ಬದ್ದವಾದನಿಯಮಜಾರಿಗೊಳಿಸಬೇಕೆಂದು ನಡೆದ ಗೋಕಾಕ್ ಚಳುವಳಿಯ ನಾಯಕತ್ವ ವಹಿಸಿದ್ದರು.

ಹಲವಾರು ರಾಜ್ಯದ ಕ್ರೀಡಾಂಗಣಗಳ ಅಭಿವೃದ್ಧಿಗಾಗಿ, ರಾಜ್ಯದಲ್ಲಿ ಬರ ಘೋಷಣೆಯಾದಾಗದೇಣಿಗೆಸಂಗ್ರಹಕ್ಕೆ. ದುಬೈ ಕನ್ನಡ ಭವನ, ದೆಹಲಿ ಕನ್ನಡ ಭವನ ಮತ್ತು ಕರ್ನಾಟಕ ಪೊಲೀಸ್ ನಿಧಿಗೆ, ರಸಮಂಜರಿ ಕಾರ್ಯಕ್ರಮ ಮಾಡುವುದರಮೂಲಕ ಆರ್ಥಿಕ ನೆರವು ಸರ್ಕಾರಕ್ಕೆ ನೀಡಿದ್ದಾರೆ.

ಇಂತಹ ಒಬ್ಬ ಮಹಾನ್ ವ್ಯಕ್ತಿಯ ಪುಣ್ಯ ಭೂಮಿಗೆ ನೀಡಿರುವ 2 ಎಕರೆ 50 ಸೆಂಟ್ಸ್ ಜಮೀನಿನ ಬಗ್ಗೆ ನಟ ಚೇತನ ಅವಹೇಳನವಾಗಿ ಹೇಳಿಕೆ ನೀಡಿರುತ್ತಾನೆ. ಇತನು ಆಮೆರಿಕಾ ಸಂಸ್ಕೃತಿಯಿಂದ ಬಂದಿದ್ದು. ಭಾರತ ದೇಶದ ಮತ್ತು ಕರ್ನಾಟಕ ರಾಜ್ಯದ ಯಾವುದೇ ರೀತಿಯ ಹಕ್ಕು ಈ ವ್ಯಕ್ತಿಗೆ ಇರುವುದಿಲ್ಲ. ಮಾನಸಿಕವಾಗಿ ಅಸ್ಥವ್ಯಸ್ಥಗೊಂಡಿರುವವ್ಯಕ್ತಿಯಾಗಿದ್ದಾನೆ. ನಾಡಿನಲ್ಲಿಸಮುದಾಯಸಮುದಾಯಗಳಲ್ಲಿ ಜಗಳ, ಬೆಂಕಿ ಹಚ್ಚುವ ಕೆಲಸ ಮತ್ತು ಪಕ್ಕದ ರಾಷ್ಟ್ರಪಾಕಿಸ್ತಾನಕ್ಕೆ ಜೈ ಅಂ–ದರೆ ಏನು ತಪ್ಪು ಎಂದು ಕೇಳುವ. ಈತನ ಮನಸ್ಸಿನಲ್ಲಿನ ವಿಚಾರಗಳು ಯಾವ ರೀತಿ ಇರುತ್ತದೆಂದು ತಿಳಿದುಕೊಳ್ಳಬೇಕು.

ನಟ ಚೇತನ ಈ ವ್ಯಕ್ತಿಯ ಸಂಪೂರ್ಣ ಹಿನ್ನೆಲೆಯನ್ನು ಪರಿಶೀಲಿನೆ ಮಾಡುವುದಕ್ಕೆ ಒಂದು ತಂಡ ರಚನೆ ಮಾಡಿ ತನಿಖೆಗೆ ಒಳಪಡಿಸಿ ಕಾನೂನು ಕ್ರಮ ಜರುಗಿಸಿ ಈ ನಾಡಿನಿಂದ ಗಡಿ ಪಾರು ಮಾಡಿಸುವಂತೆ ಒತ್ತಾಯಿಸಿದ್ದಾರೆ.ಈ ವೇಳೆ ಕಾವಲು ಪಡೆಯ ಜಿಲ್ಲಾ ಅಧ್ಯಕ್ಷ ಎಸ್.ಎನ್.ನರಸಿಂಹರಾಜು, ಜಿಲ್ಲಾ ಯುವ ಘಟಕ ಅಧ್ಯಕ್ಷ ವಿ.ಎಸ್.ಸಾಗರ್ ಅಪ್ಪು, ಶೇಖು, ಅನಿಲ್, ಶರತ್, ಶ್ರೀರಾಮ್, ಶಾಹಿದ್ ಮೊದಲಾದವರು ಇದ್ದರು.

# ಸುಪ್ರೀಂ ಕೋರ್ಟ ಅಂಗಳ ತಲುಪಿದ ವ್ಯಾಜ್ಯ ಪರಿಹಾರಕ್ಕೆ ವಿಶೇಷ ಅವಕಾಶ

• ಮಲ್ಲಮ್ಮ ನುಡಿವಾರ್ತ, ಕೊಪ್ಪಳ

ಸರ್ವೋಚ್ಚ ನ್ಯಾಯಾಲಯದ ( ಸುಪ್ರಿಂ ಕೋರ್ಟ) ಅಂಗಳ ತಲುಪಿದ ಯಾವುದೇ ಬಗೆಯ ವ್ಯಾಜ್ಯಗಳ ಪರಿಹಾರಕ್ಕಾಗಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಲು ಸರ್ವೋಚ್ಛ ನ್ಯಾಯಾಲಯವು ವಿಶೇಷ ಅಭಿಯಾನ ಹಮ್ಮಿಕೊಂಡಿದೆ ಎಂದು ಹೈಕೋರ್ಟನ ನ್ಯಾಯಮೂರ್ತಿ ಗೌರವಾನ್ವಿತ ಅನು ಶಿವರಾಮ್ ಅವರು ಹೇಳಿದರು.

ಬೆಂಗಳೂರಿನ ಹೈಕೋರ್ಟ ಸಭಾಂಗಣದಲ್ಲಿ ಏಪ್ರಿಲ್ 30ರಂದು ಸುದ್ದಿಗೋಷ್ಠಿ ನಡೆಸಿ ಅವರು ಮಾತನಾಡಿದರು.

ಆಗಸ್ಟ್ 21, 22 ಮತ್ತು 23ರಂದು ಅಭಿಯಾನ ನಡೆಯಲಿದ್ದು, ರಾಜ್ಯದ ಯಾವುದೇ ಭಾಗದಲ್ಲಿನ ಪಕ್ಷಗಾರರು ತಾವು ಇರುವ ಸ್ಥಳದಲ್ಲಿನ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವನ್ನು ಸಂಪರ್ಕಿಸಿ ವ್ಯಾಜ್ಯ ಪರಿಹಾರ ಮಾಡಿಕೊಳ್ಳಬಹುದು. ಪಕ್ಷಗಾರರಿಬ್ಬರು ಒಂದೆಡೆ ಸೇರಿ ವ್ಯಾಜ್ಯಪರಿಹರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.ಈ ಅಭಿಯಾನ ಹಿನ್ನೆಲೆಯಲ್ಲಿ

ಎಲ್ಲ ಕಡೆಗಳಲ್ಲಿ ಈಗಾಗಲೇ 4328 ಕೇಸಗಳನ್ನು ಗುರುತಿಸಿದ್ದೇವೆ. ಜನತೆಯ ಸಮಯ ಮತ್ತು ಖರ್ಚು ವೆಚ್ಚ ಉಳಿಸಬೇಕು ಎಂದು ಯೋಜಿಸಿ ಅಭಿಯಾನ ರೂಪಿಸಲಾಗಿದೆ ಎಂದು ಅವರು ತಿಳಿಸಿದರು.

ಸುಪ್ರೀಂ ಕೋರ್ಟನ ನ್ಯಾಯಮೂರ್ತಿಗಳಾದ ಆರ್ ದೇವದಾಸ್ ಅವರು ಮಾತನಾಡಿ, ಈ ಅಭಿಯಾನ ಸರ್ವೋಚ್ಚ ನ್ಯಾಯಾಲಯದ ಐತಿಹಾಸಿಕ

ಪ್ರಥಮ ಪ್ರಯತ್ನವಾಗಿದೆ. ಬಹುವರ್ಷಗಳಿಂದ ನ್ಯಾಯಕ್ಕೆ ಕಾಯುತ್ತಿರುವ ಜನತೆಗೆ ಅನುಕೂಲ ಕಲ್ಪಿಸಬೇಕು ಎಂದು ಉದ್ದೇಶಿಸಿ ಸರ್ವೋಚ್ಚ ನ್ಯಾಯಾಲಯವು ದಿಟ್ಟ ಹೆಜ್ಜೆ ಇಟ್ಟು ವ್ಯಾಜ್ಯ ವಿಲೇವಾರಿ ವಿಶೇಷ ಅಭಿಯಾನ (ಸ್ಪೆಷಲ್ ಡ್ರೈವ್) ಹಮ್ಮಿಕೊಂಡಿದೆ.ಸುಪ್ರೀಂಕೋರ್ಟನಲ್ಲಿರುವ ವ್ಯಾಜ್ಯಗಳ ಪರಿಹಾರಕ್ಕಾಗಿ ಮಾತ್ರ ಈ ಅಭಿಯಾನ ಹಮ್ಮಿಕೊಂಡಿದೆ.

ಸುಪ್ರಿಂ ಕೋರ್ಟನಲ್ಲಿ ನಿಮ್ಮ ನಿಮ್ಮ ಕೇಸ್ ಇದ್ದರೆ ಅದನ್ನು ಬಗೆಹರಿಸಿಕೊಳ್ಳಲು ಇದೊಂದು ಸದವಕಾಶ ಎಂದು ಸಾರ್ವಜನಿಕರಿಗೆ ಸಂದೇಶ ಹೋಗಬೇಕು. ಈ ಅಭಿಯಾನದ ಸಂದೇಶವು ರಾಜ್ಯದ ಜನತೆಗೆ ತಲುಪಬೇಕು. ಜನತೆಗೆ ಸಹಾಯ ಆಗಬೇಕು ಎಂಬುದು ನಮ್ಮ ಪ್ರಾರ್ಥನೆಯಾಗಿದೆ ಎಂದು ಅವರು ತಿಳಿಸಿದರು. ಆಯಾ ಜಿಲ್ಲೆಗಳಲ್ಲಿ ಆಗಸ್ಟ್ 21ರಿಂದ ಮೂರು ದಿನಗಳ ಕಾಲ ಆಯಾ ಜಿಲ್ಲೆಯಪ್ರಧಾನ ನ್ಯಾಯಾಧೀಶರು ಮತ್ತು ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ವ್ಯಾಜ್ಯ ಪರಿಹಾರಕ್ಕೆ ಸ್ಥಳೀಯ ಮಟ್ಟದಲ್ಲಿ ಅಗತ್ಯ ಏರ್ಪಾಡು ಮಾಡಲಿದ್ದಾರೆ.

ನಾನು ನನ್ನ ಕೇಸನ್ನು ಬಗೆ ಹರಿಸಿಕೊಳ್ಳಲು ಇಚ್ಚಿಸಿದ್ದೇನೆ ಎಂದು ಪಕ್ಷಗಾರರು ನೇರವಾಗಿ

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯವರನ್ನು ಸಂಪರ್ಕಿಸಿದಲ್ಲಿ ವ್ಯಾಜ್ಯ ಪರಿಹರಿಸಿಕೊಳ್ಳಬಹುದು ಎಂದು ಅವರು ತಿಳಿಸಿದರು. ಈ ವಿಷಯದಲ್ಲಿ ವಕೀಲರು

ಅಡ್ಡಿ ಪಡಿಸುವುದಿಲ್ಲ ಎಂದು ನ್ಯಾಯಮೂರ್ತಿಗಳು ಸ್ಪಷ್ಟಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ನ್ಯಾಯಾಧೀಶರು ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಶಶಿಧರ ಶೆಟ್ಟಿ ಹಾಗೂ ಇತರರು ಇದ್ದರು.

# ಕಳ್ಳತನ: 13 ಬೈಕ್ ಪತ್ತೆ ಓರ್ವನ ಬಂಧನ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಬೈಕ್ ಕಳ್ಳತನ ಪ್ರಕರಣದಲ್ಲಿ ಗಾಂಧಿನಗರ ಠಾಣೆಯ ಪೊಲೀಸರು ಓರ್ವನನ್ನು ಬಂಧಿಸಿ, 13 ಬೈಕ್ ವಶಪಡಿಸಿಕೊಂಡಿದ್ದಾರೆ.

ಬೈಕ್ ಕದಿಯುತ್ತಿದ್ದ ಆಂದ್ರಪ್ರದೇಶದ ಹಾಕರ್ವಿ ಬಳಿಯ ಮಾಚನೂರಿನ ಆರೋಪಿ ವಲಸೆ ರಾಜನನ್ನು ಬಂಧಿಸಿಸಲಾಗಿದೆ.

ಆರೋಪಿಯು ಗಾಂಧಿನಗರ, ಬ್ರೂಸ್ ಪೇಟೆ ಪೊಲೀಸ್ ಠಾಣೆ ಸೇರಿದಂತೆ ಇತರೆ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಬೈಕ್ ಕಳ್ಳತನ ಮಾಡಿದ್ದ.

# ಸುಳೇಭಾವಿಯಲ್ಲಿ ಕಾರ್ಮಿಕ ದಿನಾಚರಣೆ



• ಮಲ್ಲಮ್ಮ ನುಡಿ ವಾರ್ತೆಬಾಗಲಕೋಟೆ

1-ಜಿಲ್ಲೆಯ ಹುನಗುಂದ ತಾಲೂಕಿನ ಸೂಳೇಬಾವಿಯಲ್ಲಿ ಕಟ್ಟಡ ಕಾರ್ಮಿಕರಿಗೆ ಸನ್ಮಾನಿಸಿ ಸಿಹಿ ತಿನ್ನಿಸಿ ಕಾರ್ಮಿಕ ದಿನ ಆಚರಿಸಲಾಯಿತು.

ಶಿಕ್ಷಕ ಅಶೋಕ ಬಳ್ಳಾ ತಮ್ಮ ನೂತನ ಮನೆ ಕಟ್ಟಡದ ಕಾರ್ಮಿಕರಿಗೆ ಶಾಲು ಹೊದಿಸಿ ಸನ್ಮಾನಿಸಿ ಸಿಹಿ ಹಂಚಿದರು.

ಈ ಸಂದರ್ಭದಲ್ಲಿ ಶಿಕ್ಷಕ ಸುಭಾಸ ಕಣಗಿ ಮಾತನಾಡಿ, ಕಾರ್ಮಿಕರ ಬದುಕು ತುಂಬಾ ಶ್ರಮದಾಯಕವಾಗಿದ್ದು, ಬಿಸಿಲು ಮಳೆ ಗಾಳಿಯನ್ನದೆ ನಿರಂತರ ದುಡಿಮೆಯಲ್ಲಿ ತೊಡಗುವ ಅವರ ಬದುಕು ಬಂಗಾರವಾಗಬೇಕಾದರೆ, ದಿನದ ಕೂಲಿಯಲ್ಲಿ ತುಸು ಭಾಗ ಭವಿಷ್ಯಕ್ಕಾಗಿ ಉಳಿತಾಯ ಮಾಡಬೇಕು. ದುಶ್ಚಟಗಳಿಂದ ದೂರವಿರಬೇಕು. ಮೈಮುರಿದು ದುಡಿಯುವ ಕಾರ್ಮಿಕರು ಆದಾಯ ಕಡಿಮೆ ಇದ್ದರೂ ಆರೋಗ್ಯವಂತರಾಗಿರುತ್ತಾರೆ ಎಂದರು.

ಸನ್ಮಾನ ಸ್ವೀಕರಿಸಿದ ಗುಳೇದಗುಡ್ಡ ತಾಲೂಕಿನ ಪರ್ವತಿ ಗ್ರಾಮದ ಕಾರ್ಮಿಕ ಮಲ್ಲು ಹಾಲಟ್ಟಿ ಮಾತನಾಡಿ, ನಮ್ಮನ್ನು ಗೌರವಿಸಿ ಸತ್ಕರಿಸಿದ್ದು ಖುಷಿಯ ಸಂಗತಿ. ಅಷ್ಟಾಗಿ ಶಾಲೆ ಕಲಿಯದ ನಮಗೆ ಕಾರ್ಮಿಕರಿಗೂ ಒಂದು ದಿನ ಆಚರಣೆ ಮಾಡುತ್ತಾರೆ ಎಂಬುದು ತಿಳಿದಿರಲಿಲ್ಲ. ಶಾಲೆ ಕಲಿತರೆ ಇಂತಹ ತಿಳುವಳಿಕೆ, ಸಮಾಜದಲ್ಲಿ ಗೌರವ, ಸರಕಾರಿ ನೌಕರಿ, ಕೈತುಂಬ ಸಂಬಳ ಸಿಗುತ್ತದೆ. ಹೀಗಾಗಿ ನಮ್ಮ ಮಕ್ಕಳಿಗಾದರೂ ಒಳ್ಳೆಯ ಶಿಕ್ಷಣ ಕೊಡಿಸುತ್ತೇವೆ ಎಂದರು.

ಶಿಕ್ಷಕ ಅಶೋಕ ಬಳ್ಳಾ ಮಾತನಾಡಿ, ಸರಕಾರ, ಸಂಘ-ಸಂಸ್ಥೆಗಳು ತಮ್ಮ ಕಚೇರಿಗಳಲ್ಲಿ ಈ ದಿನ ಆಚರಿಸಿದರೆ ಸಾಲದು. ನಿಜವಾದ ಕಾರ್ಮಿಕರಿಗೆ ಈ ದಿನದ ಅರಿವು, ಉದ್ದೇಶಗಳು ತಿಳಿಯಬೇಕು. ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಮಾರ್ಗ ಮತ್ತು ಸರಕಾರದ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಳ್ಳುವ ಅವಕಾಶಗಳ ಬಗ್ಗೆ ಜಾಗೃತಿ ಮೂಡಬೇಕು ಎಂಬ ಉದ್ದೇಶದಿಂದ ಅವರು ಕೆಲಸ ನಿರ್ವಹಿಸುವ ಸ್ಥಳದಲ್ಲೇ ಅವರನ್ನು ಸತ್ಕರಿಸಿ ಕಾರ್ಮಿಕರ ದಿನ ಆಚರಿಸಲಾಗಿದೆ. ಇದರಿಂದ ಅವರಲ್ಲಿ ತಮ್ಮ ವೃತ್ತಿ ಗೌರವ ಮತ್ತು ಅಭಿಮಾನ ಇಮ್ಮಡಿಗೊಳ್ಳುತ್ತದೆ ಎಂಬ ಸದಾಶಯ ನನ್ನದು ಎಂದರು.

ಮೇಸ್ತ್ರಿ ಮಹಮ್ಮದರಫೀಕ್ ಮುಲ್ಲಾ, ಕಾರ್ಮಿಕರಾದ ಕುಶೇಲ ಕೊಟ್ನಳ್ಳಿ, ರಮೇಶ ಜಟ್ರೆ, ಕೆಲೂಡೆಪ್ಪ ಮುರಡಿ, ಯಲ್ಲಪ್ಪ ಹಾದಿಮನಿ, ಮಕ್ಕಳಾದ ಪ್ರಥಮ್, ವಿಮೋಚನಾ ಉಪಸ್ಥಿತರಿದ್ದರು.

# ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಭಾರತ ಕಿರುಚಿತ್ರ ಸ್ಪರ್ಧೆ-2026

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ ನವದೆಹಲಿಯ ಭಾರತದ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ 2015 ರಿಂದ ಮಾನವ ಹಕ್ಕುಗಳ ಕುರಿತು ಕಿರುಚಿತ್ರ ಸ್ಪರ್ಧೆಯನ್ನು ನಡೆಸಿಕೊಂಡು ಬರುತ್ತಿದೆ. 2026 ರಲ್ಲಿ

ಸ್ಪರ್ಧೆಯ 12 ನೇ ಆವೃತ್ತಿಗೆ, ದೇಶದ ನಾಗರಿಕರಿಂದ ಆನ್‌ಲೈನ್‌ನಲ್ಲಿ ಪ್ರವೇಶಗಳನ್ನು ಆಹ್ವಾನಿಸಿದೆ.

ಮೊದಲ, ಎರಡನೇ ಮತ್ತು ಮೂರನೇ ಅತ್ಯುತ್ತಮ ಚಿತ್ರಕ್ಕೆ ಬಹುಮಾನದ ಮೊತ್ತವು ಕ್ರಮವಾಗಿ ರೂ. 2 ಲಕ್ಷ, ರೂ. 1 ಲಕ್ಷ 50 ಸಾವಿರ ಮತ್ತು ರೂ. 1 ಲಕ್ಷ ಆಗಿರುತ್ತದೆ.

ಆಯೋಗವು ಮೂರು ನಗದು ಪ್ರಶಸ್ತಿಗಳು, ಪ್ರಮಾಣಪತ್ರಗಳು ಮತ್ತು ಟ್ರೋಫಿಗಳ ಜೊತೆಗೆ, ತೀರ್ಪುಗಾರರು ಶಿಫಾರಸು ಮಾಡಿದ ಗರಿಷ್ಠ ನಾಲ್ಕು (4) ಚಿತ್ರಗಳಿಗೆ ತಲಾ ರೂ. 50 ಸಾವಿರ ನಗದು ಬಹುಮಾನದೊಂದಿಗೆ 'ಪ್ರಮಾಣ ಪತ್ರ'ವನ್ನು ನೀಡಲಾಗುವುದು.

ಕಿರುಚಿತ್ರಗಳು ಹಿಂದಿ ಅಥವಾ ಯಾವುದೇ ಭಾರತೀಯ ಭಾಷೆಯಲ್ಲಿರಬಹುದು, ಇಂಗ್ಲೀಷ್ ನಲ್ಲಿ ಉಪಶೀರ್ಷಿಕೆಗಳನ್ನು ಹಾಕಿರಬೇಕು, ಕಿರುಚಿತ್ರದ ಅವಧಿ ಕನಿಷ್ಠ 3 ನಿಮಿಷಗಳು ಮತ್ತು ಗರಿಷ್ಠ 10 ನಿಮಿಷಗಳು.

ಪ್ರವೇಶಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ 30 ಜೂನ್ 2026. ಗೂಗಲ್ ಡ್ರೈವ್ ಬಳಸಿ nhrcshortfilm@gmail.com ಗೆ ಆನ್‌ಲೈನ್‌ನಲ್ಲಿ ಕಿರುಚಿತ್ರಗಳನ್ನು ಸ್ಪರ್ಧೆಗೆ ಕಳುಹಿಸಬೇಕು.

ನಿಯಮಗಳು ಮತ್ತು ಷರತ್ತುಗಳು ಮತ್ತು ಅರ್ಜಿ ನಮೂನೆಯ ಪ್ರತಿಯನ್ನು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ವೆಬ್‌ಸೈಟ್ https://nhrc.nic.in ಅಥವಾ ಲಿಂಕ್ https://nhrc.nic.in/flipbook/files/255 ನಿಂದ ಡೌನ್‌ಲೋಡ್ ಮಾಡಬಹುದು.

ಮಾನವ ಹಕ್ಕುಗಳ ಸಂಸ್ಕೃತಿ ಮತ್ತು ಸಂವೇದನೆಯನ್ನು ಮೂಡಿಸುವ ಉದ್ದೇಶದ ಈ ಸ್ಪರ್ಧೆಯಲ್ಲಿ ಸಾರ್ವಜನಿಕರು ಯಾವುದೇ ವಯೋಮಿತಿಯ ನಿರ್ಬಂಧವಿಲ್ಲದೇ ಭಾಗವಹಿಸಬಹುದಾಗಿದೆ.

ಹೆಚ್ಚಿನ ವಿವರಗಳಿಗೆ ದೂ.011-24663281/24663367 ಅನ್ನು ಸಂಪರ್ಕಿಸಬಹುದು ಎಂದು ಎನ್‌ಹೆಚ್‌ಆರ್‌ಸಿ ಮಾಧ್ಯಮ ಮತ್ತು ಸಂವಹನ ವಿಭಾಗದ ಉಪನಿರ್ದೇಶಕ ಜೈಮಿನಿ ಕುಮಾರ್ ಶ್ರೀವಾಸ್ತವ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಾರ್ಮಿಕರಿಗೆ ಸೇವಾ ಭದ್ರತೆಯ ಸೌಲಭ್ಯಗಳು ದೊರೆಯಲಿ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಮಾನವ ಸಮಾಜದ ಬೆಳವಣಿಗೆಯ ಹಾದಿಯಲ್ಲಿ ಶ್ರಮವೇ ಮೂಲಾಧಾರ. ಕರುಣೆ ಮತ್ತು ಸಮಾನತೆಯೇ ಮಾರ್ಗದರ್ಶಕ. ಕಾರ್ಮಿಕರ ದಿನ ಶ್ರಮಜೀವಿಗಳ ಹಕ್ಕು, ಗೌರವ ಮತ್ತು ಸಮಾನತೆಯ ಸಂಕೇತ. ಪ್ರತಿಯೊಬ್ಬ ಕಾರ್ಮಿಕನು ಬೆವರು ಹರಿಸಿ ದೇಶದ ಬೆಳವಣಿಗೆಗೆ ಶ್ರಮಿಸುತ್ತಾನೆ. ಅವರಿಗೆ ಸೇವಾ ಭದ್ರತೆ, ಸೂಕ್ತ ವೇತನ, ಸರ್ಕಾರಿ ನೌಕರರಂತೆ ಎಲ್ಲಾ ಸೌಲಭ್ಯಗಳು ನೀಡಬೇಕು ಎಂದು ಕಾರ್ಮಿಕ ಮುಖಂಡ ಡಾ.ಸುನೀಲಕುಮಾರ ಎಚ್.ವಂಟಿ ಹೇಳಿದರು. ನಗರದ ಸಾರ್ವಜನಿಕ ಉದ್ಯಾನವನದಲ್ಲಿ ಸುಜಯ ಶಿಕ್ಷಣ ಮತ್ತು ಕಲ್ಯಾಣ ಸಂಸ್ಥೆ, ಬಸವೇಶ್ವರ ಸಮಾಜ ಸೇವಾ ಬಳಗ ಮತ್ತು ಮಹಾದೇವಿ ನಾದ ಮಧುರ ಸಾಹಿತ್ಯ ಮತ್ತು ಸಾಂಸ್ಕೃತಿಕ ಸೇವಾ ಸಂಸ್ಥೆ ಇವುಗಳ ವತಿಯಿಂದ ಶುಕ್ರವಾರ ಜರುಗಿದ ವಿಶ್ವಕಾರ್ಮಿಕರ ದಿನಾಚರಣೆಯಲ್ಲಿ ಪೌರಕಾರ್ಮಿಕರಿಗೆ ಬೆಳಗಿನ ಉಪಹಾರ ವಿತರಿಸಿ, ಹೂಗುಚ್ಛ ನೀಡಿ, ಪುಷ್ಪವೃಷ್ಟಿಯ ಮೂಲಕ ಶುಭಾಷಯ ಕೋರಿ, ನಂತರ ಅವರು ಮಾತನಾಡಿದರು. ಉಪನ್ಯಾಸಕ,ಸಮಾಜ ಸೇವಕ ಎಚ್.ಬಿ.ಪಾಟೀಲ ಮಾತನಾಡಿ, 'ನಮಿಸುವ ಕೈಗಳಿಗಿಂತ,ದುಡಿಯುವ ಕೈಗಳು ಶ್ರೇಷ್ಠ'ವಾಗಿವೆ.ದುಡಿಯುವ ವರ್ಗ ಕನಿಷ್ಟ ಮತ್ತು ದುಡಿಸಿಕೊಳ್ಳುವ ವರ್ಗ ಗರಿಷ್ಟ ಎಂಬ ಮನೋಭಾವನೆಯನ್ನು ತೆಗೆದು ಕಾಯಕಕ್ಕೆ ದೈವತ್ವದ ಸ್ಥಾನವನ್ನು ನೀಡಿದ ಬಸವಾದಿ ಶರಣರ ಕೊಡುಗೆ ಅನನ್ಯವಾಗಿದೆ. ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರು ಕಾರ್ಮಿಕರ ಹಿತರಕ್ಷಣೆಗಾಗಿ ಸಂವಿಧಾನದ ಮೂಲಕ ಕಾನೂನುಗಳನ್ನು ನೀಡಿದ್ದಾರೆ. ಕಾಯಕ ಜೀವಿಗಳ ಕೊಡುಗೆ ಸಮಾಜ ಎಂದಿಗೂ ಕೂಡಾ ಮರೆಯುವಂತಿಲ್ಲ ಎಂದರು. ಕಾರ್ಯಕ್ರಮದಲ್ಲಿ ಸಮಾಜಸೇವಕರಾದ ಎಂ.ಬಿ.ನಿಂಗಪ್ಪ, ಶಿವಯೋಗೆಪ್ಪ ಎಸ್.ಬಿರಾದಾರ, ತೋಟಗಾರಿಕೆ ನಿರಿಕ್ಷಕಿ ಅಶ್ವಿನಿ ಚಿಂಚೋಳಿಕರ್ ಸೇರಿದಂತೆ ಅನೇಕರು ಇದ್ದರು.

# ಬಳ್ಳಾರಿ: 2030ರ ವೇಳೆಗೆ ಜಿಲ್ಲೆಯನ್ನು ಮಲೇರಿಯಾ ಮುಕ್ತವಾಗಿಸಲು ಆರೋಗ್ಯ ಇಲಾಖೆ ಸಂಕಲ್ಪ

ಮಲ್ಲಮ್ಮನುಡಿ ವಾರ್ತೆ ಬಳ್ಳಾರಿ

ಜಿಲ್ಲೆಯನ್ನು 2030ರ ವೇಳೆಗೆ ಮಲೇರಿಯಾ ಮುಕ್ತವಾಗಿಸಲು ಆರೋಗ್ಯ ಇಲಾಖೆ ಸಂಕಲ್ಪ ಹೊಂದಲಾಗಿದೆ. ಮಲೇರಿಯಾ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಜಿಲ್ಲೆಯ ಜನತೆ ಕೈಜೋಡಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಯಲ್ಲಾ ರಮೇಶ್ ಬಾಬು ಅವರು ತಿಳಿಸಿದ್ದಾರೆ.

"ಮಲೇರಿಯಾವನ್ನು ಅಂತ್ಯಗೊಳಿಸಲು ಸಂಕಲ್ಪ ಮಾಡೋಣ: ನಮಗಿದು ಸಾಧ್ಯವಿದೆ. ನಾವು ಇದನ್ನು ಮಾಡಬೇಕು" ಎಂಬ ಘೋಷವಾಕ್ಯದೊಂದಿಗೆ ವಿಶ್ವ ಮಲೇರಿಯಾ ದಿನವನ್ನು ಜಿಲ್ಲೆಯಾದ್ಯಂತ ಅರ್ಥಪೂರ್ಣವಾಗಿ ಆಚರಿಸಲಾಗಿದೆ.

ಬಳ್ಳಾರಿ ಜಿಲ್ಲೆಯು ಮಲೇರಿಯಾ ನಿಯಂತ್ರಣದಲ್ಲಿ ರಾಜ್ಯದಲ್ಲೇ ಮಾದರಿ ಸಾಧನೆ ಮಾಡಿದೆ. 2015 ರಿಂದ ಜಿಲ್ಲೆಯಲ್ಲಿ ಮಲೇರಿಯಾ ಪ್ರಕರಣಗಳು ಅತ್ಯಲ್ಪ ಸಂಖ್ಯೆಯಲ್ಲಿದ್ದು, ಕಳೆದ ಮೂರು ವರ್ಷಗಳಿಂದ ಶೂನ್ಯ ಸ್ಥಳೀಯ ಮಲೇರಿಯಾ ಪ್ರಕರಣಗಳನ್ನು ದಾಖಲಿಸುವ ಮೂಲಕ ಜಿಲ್ಲೆಯು ಮೈಲಿಗಲ್ಲು ಸಾಧಿಸಿದೆ ಎಂದು ಹೇಳಿದ್ದಾರೆ. 2027ರ ವೇಳೆಗೆ ಸ್ಥಳೀಯ ಪ್ರಕರಣಗಳನ್ನು ಸಂಪೂರ್ಣ ಶೂನ್ಯಗೊಳಿಸಿ, 2030ರ ವೇಳೆಗೆ ಜಿಲ್ಲೆಯನ್ನು ಸಂಪೂರ್ಣ ಮಲೇರಿಯಾ ಮುಕ್ತವಾಗಿಸುವ ಗುರಿಯನ್ನು ಇಲಾಖೆ ಹೊಂದಿದೆ ಎಂದಿದ್ದಾರೆ.

*ಸಾರ್ವಜನಿಕರಿಗೆ ಸೂಚನೆಗಳು:* ಮಲೇರಿಯಾವು ಪ್ಲಾಸ್ಮೋಡಿಯಂ ಪರಾವಲಂಬಿಗಳಿಂದ ಬರುವ ಕಾಯಿಲೆಯಾಗಿದ್ದು, ಹೆಣ್ಣು ಅನಾಫಿಲೀಸ್ ಸೊಳ್ಳೆಯ ಕಡಿತದಿಂದ ಹರಡುತ್ತದೆ. ಇದನ್ನು ತಡೆಗಟ್ಟಲು ಸಾರ್ವಜನಿಕರು ಅಗತ್ಯಕ್ರಮಗಳನ್ನು ಅನುಸರಿಸಬೇಕು ಎಂದು ಅವರು ತಿಳಿಸಿದ್ದಾರೆ. ಶೀಘ್ರ ಪತ್ತೆ ಮತ್ತು ಚಿಕಿತ್ಸೆ: ಜ್ವರ ಬಂದ ತಕ್ಷಣ ಎಲ್ಲಾ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ಲಭ್ಯವಿರುವ ರಕ್ತ ಪರೀಕ್ಷೆ ಮಾಡಿಸಿಕೊಳ್ಳಿ ಮತ್ತು ಸಂಪೂರ್ಣ ಚಿಕಿತ್ಸೆ ಪಡೆಯಿರಿ.

ಸೊಳ್ಳೆ ಉತ್ಪತ್ತಿ ತಡೆಗಟ್ಟಿ: ಮನೆಯ ಸುತ್ತಮುತ್ತ ನೀರು ನಿಲ್ಲದಂತೆ ಜಾಗ್ರತೆ ವಹಿಸಿ. ಸೊಳ್ಳೆಗಳ ಸಂತಾನೋತ್ಪತ್ತಿಯನ್ನು ತಡೆಗಟ್ಟಲು ಸಮುದಾಯದ ಸಹಭಾಗಿತ್ವ ಅತ್ಯಗತ್ಯ.

ಕೀಟನಾಶಕ ಸಿಂಪಡಣೆ: ಆರೋಗ್ಯ ಇಲಾಖೆಯ ವತಿಯಿಂದ ಕೈಗೊಳ್ಳಲಾಗುವ ಒಳಾಂಗಣ ಕೀಟನಾಶಕ ಸಿಂಪಡಣಾ ಕಾರ್ಯಕ್ಕೆ ಸಾರ್ವಜನಿಕರು ಸಹಕರಿಸಬೇಕು.

ವೈಯಕ್ತಿಕ ರಕ್ಷಣೆ: ಕೀಟನಾಶಕ ಸಂಸ್ಕರಿಸಿದ ಸೊಳ್ಳೆ ಪರದೆಗಳನ್ನು ಬಳಸಿ. ಸೊಳ್ಳೆ ನಿವಾರಕಗಳು ಮತ್ತು ವಿವಿಧ ಸ್ವಯಂ ರಕ್ಷಣಾ ವಿಧಾನಗಳನ್ನು ಅಳವಡಿಸಿಕೊಳ್ಳುವ ಮೂಲಕ ಸೊಳ್ಳೆ ಕಡಿತದಿಂದ ಪಾರಾಗಿ ಎಂದು ಹೇಳಿದ್ದಾರೆ.

ವಿಜ್ಞಾನ ಮತ್ತು ತಂತ್ರಜ್ಞಾನದ ಇಂದಿನ ದಿನಗಳಲ್ಲಿ ಮಲೇರಿಯಾ ನಿರ್ಮೂಲನೆ ಕಷ್ಟವೇನಲ್ಲ. ಲಸಿಕೆಗಳು, ಸುಧಾರಿತ ಚಿಕಿತ್ಸೆ ಮತ್ತು ಸಮುದಾಯದ ಜಾಗೃತಿ ಇದ್ದರೆ ನಮ್ಮ ಜೀವಿತಾವಧಿಯಲ್ಲೇ ಮಲೇರಿಯಾವನ್ನು ಕೊನೆಗಾಣಿಸಬಹುದು. ಸಣ್ಣ ಕಡಿತವು ಭಾರಿ ಪರಿಣಾಮ ಬೀರಬಲ್ಲದು, ಹಾಗಾಗಿ ಸಾರ್ವಜನಿಕರು ಮುನ್ನೆಚ್ಚರಿಕೆ ವಹಿಸಬೇಕು. ಈ ವರ್ಷದ ಅಭಿಯಾನವು ರಾಜಕೀಯ ಇಚ್ಛಾಶಕ್ತಿ, ಆರ್ಥಿಕ ಹೂಡಿಕೆ ಮತ್ತು ಸಮುದಾಯದ ಸಕ್ರಿಯ ಪಾಲ್ಗೊಳ್ಳುವಿಕೆಗೆ ಹೆಚ್ಚಿನ ಒತ್ತು ನೀಡಿದೆ. ಸಾರ್ವಜನಿಕರು ಆರೋಗ್ಯ ಇಲಾಖೆಯೊಂದಿಗೆ ಕೈಜೋಡಿಸಿ 2030ರ ಮಲೇರಿಯಾ ಮುಕ್ತ ಗುರಿಯನ್ನು ತಲುಪಲು ಸಹಕರಿಸಬೇಕು ಎಂದು ಡಾ.ಯಲ್ಲಾ ರಮೇಶ್ ಬಾಬು ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

# ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನಿರ್ದೇಶಕರ ಸ್ಥಾನಕ್ಕೆ ಚುನಾವಣೆ



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಮೇ.1: ತಾಲೂಕು ಮಟ್ಟದ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನಿರ್ದೇಶಕರ ಸ್ಥಾನಕ್ಕೆ ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಶುಕ್ರವಾರ ಬೆಳಿಗ್ಗೆ 8.30 ಗಂಟೆಯಿಂದ 4.30 ಗಂಟೆಯವರೆಗೆ ನಡೆದ ಚುನಾವಣೆಯಲ್ಲಿ 576 ಶಿಕ್ಷಕರು ಮತ ಚಲಾಯಿಸಿದ್ದಾರೆ. ಸಾಮಾನ್ಯ ಕ್ಷೇತ್ರದಲ್ಲಿ 9 ನಿರ್ದೇಶಕರು ಮತ್ತು ಮಹಿಳಾ ಕ್ಷೇತ್ರಕ್ಕೆ 4 ನಿರ್ದೇಶಕರನ್ನು ಸೇರಿದಂತೆ ಒಟ್ಟು 13 ನಿರ್ದೇಶಕರನ್ನು ಆಯ್ಕೆ ಮಾಡಬೇಕಿತ್ತು. ಇವರಲ್ಲಿ ಸ್ವಾಭಿಮಾನಿ ಪೇನಲ್ ನಿಂದ13, ವಿವೇಕಾನಂದ ಪೇನಲ್ ನಿಂದ 13 ಮತ್ತು ಓರ್ವ ಸ್ವತಂತ್ರ ಅಭ್ಯರ್ಥಿ ಸೇರಿದಂತೆ 27 ಜನ ಅಭ್ಯರ್ಥಿಗಳು ಕಣದಲ್ಲಿದ್ದರು. ಒಟ್ಟು 640 ಮತದಾರರಲ್ಲಿ 576 ಶಿಕ್ಷಕರು ಮತಲಾಯಿಸಿದ್ದಾರೆ. ಸ್ವಾಭೀಮಾನಿ ಪೇನಲ್ ನಾ ಬಸವರಾಜ್ ದಾನ ನೇತೃತ್ವದ ತಂಡ ಮತ್ತು ವಿವೇಕಾನಂದ ಪೇನಲ್ ಸಂತೋಷಕುಮಾರ ವಾಡೆ ನೇತೃತ್ವದ ತಂಡದಲ್ಲಿ ಬಿರುಸಿನ ಚುನಾವಣೆ ನಡೆದಿದೆ. ಇಂದೇ ರಾತ್ರಿ ಮತ ಎಣಿಕೆ ನಡೆಯಲಿದ್ದು ಯಾವ ಪೇನಲ್ ಅಭ್ಯರ್ಥಿಗಳು ವಿಜಯದ ಪತಾಕೆ ಹರಿಸಿದ್ದಾರೆ ಎನ್ನುವುದು ಶನಿವಾರದ ವರೆಗೆ ತಿಳಿದು ಬರುತ್ತದೆ. ಒಟ್ಟಿನಲ್ಲಿ ಚುನಾವಣೆಯು ಯಾವುದೇ ಗಲಾಟೆಗೆ ಆಸ್ಪದ ಕೊಡದೆ ಶಾಂತ ರೀತಿಯಿಂದ ನಡೆದಿದೆ. ಚುನಾವಣೆಗೂ ಮೊದಲು ಎರಡು ಪೇನಲ್ ಅಭ್ಯರ್ಥಿಗಳು ಬಿರುಸಿನ ಪ್ರಚಾರ ನಡೆಸಿದ್ದರು. ಚಿತ್ರ 1ಬಿಎಲ್ಕೆ1 ಭಾಲ್ಕಿ: ಪಟ್ಟಣದ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಸರ್ಕಾರಿ ಪ್ರಾಥಮಿಕ ಶಾಲೆ ಶಿಕ್ಷಕರ ಸಂಘದ ನಿರ್ದೇಶಕರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಶಿಕ್ಷಕ ಮತದಾರರು ತಮ್ಮ ಮತ ಚಲಾಯಿಸಿದರು.

# ವಿದ್ಯಾರ್ಥಿ ಜೀವನದಿಂದಲೇ ಸುರಕ್ಷಿತ ಆರೋಗ್ಯ ಕಾಪಾಡಿಕೊಳ್ಳಿ : ಡಾ. ಜಗದೀಶ ನಾಯ್ಕ



• ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ

ಇಂದಿನ ಒತ್ತಡದ ಜೀವನಶೈಲಿಯಲ್ಲಿ ಯುವಜನತೆ ತಮ್ಮ ಆರೋಗ್ಯದ ಕಡೆಗೆ ನಿರ್ಲಕ್ಷ್ಯವಹಿಸುತ್ತಿರುವುದು ಆತಂಕಕಾರಿ ವಿಷಯ. ಕೇವಲ ರೋಗ ಬಂದಾಗ ಚಿಕಿತ್ಸೆ ಪಡೆಯುವುದಕ್ಕಿಂತ ರೋಗ ಬರದಂತೆ ಮುನ್ನೆಚ್ಚರಿಕೆ ವಹಿಸುವುದು ಮುಖ್ಯ. ವಿದ್ಯಾರ್ಥಿ ಜೀವನದಲ್ಲಿಯೇ ಸಮತೋಲಿತ ಆಹಾರ, ನಿಯಮಿತ ವ್ಯಾಯಾಮ ಮತ್ತು ಯೋಗವನ್ನು ರೂಢಿಸಿಕೊಳ್ಳಬೇಕು ಎಂದು ತಾಲೂಕು ಆರೋಗ್ಯಾಧಿಕಾರಿ ಡಾ.ಜಗದೀಶ ನಾಯ್ಕ ಹೇಳಿದರು. ಪಟ್ಟಣದ ಕೆ.ಎಲ್.ಇ ಸಂಸ್ಥೆಯ ಶೇಷಗಿರಿ ಪಿಕಳೆ ಶಿಕ್ಷಣ ಮಹಾವಿದ್ಯಾಲಯದಲ್ಲಿ ತಾಲೂಕು ಆರೋಗ್ಯಾಧಿಕಾರಿ ಕಚೇರಿ,ನಮ್ಮ ಕ್ಲಿನಿಕ ಪುರಲಕ್ಕಿಬೇಣ ಇವರ ಸಹಯೋಗದಲ್ಲಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಅವರು ಮಾತನಾಡಿದರು. ಅಧ್ಯಕ್ಷತೆ ವಹಿಸಿದ ಉಪನ್ಯಾಸಕ ಮಂಜುನಾಥ ಇಟಗಿ ಮಾತನಾಡಿ, ಶಿಕ್ಷಣ ಮತ್ತು ಆರೋಗ್ಯ ಎಂಬುದು ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಶಿಕ್ಷಕ ತರಬೇತಿ ಪಡೆಯುತ್ತಿರುವ ನೀವು ನಿಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸದಿದ್ದರೆ ಅನಾರೋಗ್ಯ ಪೀಡಿತರಾಗುತ್ತೀರಿ ಎಂದರು. ನಮ್ಮ ಕ್ಲಿನಿಕನ ಮೆಡಿಕಲ್ ಅಧಿಕಾರಿ ಡಾ. ಎಡ್ಲಿನ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಶೈಲಜಾ ಭಂಡಾರಿ ಹಾಗೂ ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ ಇಂದಿರಾ ನಾಯ್ಕ ಉಪನ್ಯಾಸಕಿ ಪ್ರವೀಣಾ ನಾಯಕ, ರೇಖಾ ಬೂದಿಹಾಳ, ಅಶ್ವಿನಿ ಗೌಡ, ಭರತ ಆಗೇರ ಉಪಸ್ಥಿತರಿದ್ದರು. ಗಗನಾ ನಾಯಕ ಸ್ವಾಗತಿಸಿದರು. ಶ್ರೀನಿಧಿ ನಾಯಕ ನಿರೂಪಿಸಿದರು. ಅಂಕಿತಾ ಅಂಕೋಲೆಕರ ವಂದಿಸಿದರು. ಈ ವಿಶೇಷ ಶಿಬಿರದಲ್ಲಿ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿವರ್ಗದವರು ಸೇರಿದಂತೆ ಒಟ್ಟು 64 ಜನರು ಪಾಲ್ಗೊಂಡು ತಮ್ಮ ಆರೋಗ್ಯ ತಪಾಸಣೆ ಮಾಡಿಸಿಕೊಂಡರು. ನುರಿತ ವೈದ್ಯರ ತಂಡವು ರಕ್ತದೊತ್ತಡ, ಹಿಮೋಗ್ಲೋಬಿನ್, ಮಧುಮೇಹ ಸೇರಿದಂತೆ ವಿವಿಧ ಸಾಮಾನ್ಯ ತಪಾಸಣೆಗಳನ್ನು ನಡೆಸಿದರು.

# ಭಗವಾನ ಬುದ್ಧ ಜಯಂತಿ ಆಚರಣೆ



• ಮಲ್ಲಮ್ಮ ನುಡಿ ವಾರ್ತೆಬಾಗಲಕೋಟೆ

1-. ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆಯ ನೀತಿ ಸಂಹಿತೆ ಹಿನ್ನಲೆಯಲ್ಲಿ ಜಿಲ್ಲಾಡಳಿತದಿಂದ ಭಗವಾನ್ ಬುದ್ಧ ಜಯಂತಿಯನ್ನು ಶುಕ್ರವಾರ ಸರಳವಾಗಿ ಆಚರಿಸಲಾಯಿತು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಸಂಗಪ್ಪ ಹಾಗೂ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಗೌತಮ ಬುದ್ದರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಪುಷ್ಪ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಪುಂಡಲೀಕ ಕಾಂಬಳೆ ಸೇರಿದಂತೆ ಇತರೆ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



ಯಾದಗಿರಿ:ಅಖಿಲ ಭಾರತ ವೀರಶೈವ ಲಿಂಗಾಯತ ಮಹಾ ಸಭಾ (ರಿ) ಯುವ ಘಟಕ ತಾಲೂಕ ಉಪಾಧ್ಯಕ್ಷರಾಗಿ ಆಯ್ಕೆಯಾದ ವಿರುಪಾಕ್ಷಯ್ಯ ಸ್ವಾಮಿ ಗಂಗಾಧರ ಮಠ ಅವರಿಗೆ ಸನ್ಮಾನಿಸಲಾಯಿತು.ಈ ಸಂದರ್ಭದಲ್ಲಿ ಸಕ್ಸಸ್ ಗ್ರಂಥಾಲಯದ ನಿರ್ದೇಶಕ ಮಾಳಪ್ಪ ಯಾದವ ಹಾಗೂ ಯುವ ಬಳಗದ ವತಿಯಿಂದ ಅಭಿನಂದಿಸಲಾಯಿತು.

# ಕನಕಗಿರಿ ಉತ್ಸವದ ಲೋಗೋ ಬಿಡುಗಡೆ ಮಾಡಿದ ಸಚಿವ ಶಿವರಾಜ್ ಎಸ್. ತಂಗಡಗಿ



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಇದೇ ಮೇ 16 ಮತ್ತು 17 ರಂದು ಐತಿಹಾಸಿಕ ಹಾಗೂ ಸಾಂಸ್ಕೃತಿಕ ವೈಭವವನ್ನು ಒಳಗೊಂಡ ಕನಕಗಿರಿ ಉತ್ಸವವನ್ನು ಅತ್ಯಂತ ವೈಭವದಿಂದ ಆಚರಿಸಲು ಸಕಲ ಸಿದ್ಧತೆಗಳು ಆರಂಭಗೊಂಡಿದ್ದು, ಇದರ ಅಂಗವಾಗಿ ಸೋಮವಾರದಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಉತ್ಸವದ ಅಧಿಕೃತ ಲೋಗೋವನ್ನು ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ್ ಎಸ್. ತಂಗಡಗಿ ಅವರು ಬಿಡುಗಡೆಗೊಳಿಸಿದರು.

ಈ ಸಂದರ್ಭ ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ, ಜಿಲ್ಲಾಧಿಕಾರಿ ಡಾ.ಸುರೇಶ ಬಿ.ಇಟ್ನಾಳ, ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವರ್ಣಿತ್ ನೇಗಿ, ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಉಪ ವಿಭಾಗಾಧಿಕಾರಿ ಕ್ಯಾ.ಮಹೇಶ ಮಾಲಗಿತ್ತಿ, ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು, ಎಲ್ಲ ತಾಲ್ಲೂಕುಗಳ ತಹಶೀಲ್ದಾರರು, ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಉಪಸ್ಥಿತರಿದ್ದರು.

# ಕುವೆಂಪು ವಿಶ್ವವಿದ್ಯಾನಿಲಯದಿಂದ ಐಜಿಪಿ ಹರ್ಷ ಪಿ.ಎಸ್ ಅವರಿಗೆ ಪಿಎಚ್‌ಡಿ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ



ಕುವೆಂಪು ವಿಶ್ವವಿದ್ಯಾನಿಲಯವು ಪೊಲೀಸ್ ಮಹಾನಿರೀಕ್ಷಕರಾದ ಹರ್ಷ ಪಿ.ಎಸ್ ಅವರಿಗೆ ವನ್ಯಜೀವಿ ಮತ್ತು ನಿರ್ವಹಣಾ ವಿಭಾಗದಲ್ಲಿನ ಸಂಶೋಧನೆಗಾಗಿ ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್‌ಡಿ) ಪದವಿಯನ್ನು ಘೋಷಿಸಿದ್ದು, ಮೇ. 6 ರಂದು ಪಿ.ಹೆಚ್.ಡಿ. ಪ್ರದಾನ ಮಾಡಲಿದೆ. ಕುವೆಂಪು ವಿಶ್ವವಿದ್ಯಾನಿಲಯದ ವನ್ಯಜೀವಿ ಮತ್ತು ನಿರ್ವಹಣಾ ವಿಭಾಗದ ಪ್ರಾಧ್ಯಾಪಕ ಡಾ. ವಿಜಯ ಕುಮಾರ್ ಅವರ ಮಾರ್ಗದರ್ಶನದಲ್ಲಿ ಹರ್ಷ ಪಿ.ಎಸ್ ಅವರು ಐದು ವರ್ಷಗಳ ಕಾಲ ಕ್ಷೇತ್ರ ಆಧಾರಿತ ಅಧ್ಯಯನವನ್ನು ನಡೆಸಿದ್ದಾರೆ. "ನಾಗರಹೊಳೆ, ಬಂಡೀಪುರ ಮತ್ತು ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಹುಲಿಗಳ ಜನಸಂಖ್ಯೆಯ ಸ್ಥಿರತೆ-ಯ ಕುರಿತು ಒಂದು ಅಧ್ಯಯನ, ಮಾನವ-ಹುಲಿ ಸಂಘರ್ಷಕ್ಕೆ ವಿಶೇಷ ಉಲ್ಲೇಖದೊಂದಿಗೆ" ಎಂಬ ಶೀರ್ಷಿಕೆಯ ಅವರ ಡಾಕ್ಟರೇಟ್ ಪ್ರಬಂಧವು ಈ ಸಂರಕ್ಷಿತ ಪ್ರದೇಶಗಳಲ್ಲಿ ದೊಡ್ಡ ಪ್ರಮಾಣದ ಕ್ಯಾಮೆರಾ ಟ್ರ್ಯಾಪಿಂಗ್ ಮತ್ತು ವಿವರವಾದ ಸಂಘರ್ಷ ತಾಣಗಳ ವಿಶ್ಲೇಷಣೆ ಸೇರಿದಂತೆ ತೀವ್ರವಾದ ಕ್ಷೇತ್ರಕಾರ್ಯವನ್ನು ಆಧರಿಸಿದೆ.

ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಔಪಚಾರಿಕವಾಗಿ ಅನುಮೋದಿಸಿ ಪದವಿ ನೀಡಿದೆ. ಮೇ 6 ರಂದು ನಡೆಯಲಿರುವ ಕುವೆಂಪು ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಮಾರಂಭದಲ್ಲಿ ಪಿಎಚ್‌ಡಿ ಪ್ರಮಾಣಪತ್ರ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.



ಗುರುಮಠಕಲ್ :ತಾಲೂಕಿನ ನಜರಾಪುರ್ ಗ್ರಾಮದ ವ್ಯಾಪ್ತಿಯಲ್ಲಿ ಬರುವ ಥಬ್ ಥಬ್ ಫಾಲ್ಸ್ ಹತ್ತಿರ ಬುದ್ಧ ಪೂರ್ಣಿಮೆಯನ್ನು ಪುರಸಭೆ ಆಶ್ರಯ ಸಮಿತಿ ಸದಸ್ಯ ಅಶೋಕ್ ಶನಿವಾರಂ ಹಾಗೂ ಸ್ನೇಹಿತರು ಆಚರಿಸಿದರು

# ನಾಳೆ ಸಂಗಮ ಗ್ರಾಮದಲ್ಲಿ ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ಸಂಭ್ರಮ

• ಮಲ್ಲಮ್ಮ ನುಡಿ ವಾರ್ತೆ ಕಮಲನಗರ

ತಾಲೂಕಿನ ಸಂಗಮ ಗ್ರಾಮದಲ್ಲಿ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ಸಮಾರಂಭವನ್ನು ಮೇ 3, ರವಿವಾರ ರಂದು ಹಮ್ಮಿಕೊಳ್ಳಲಾಗಿದ್ದು, ಇದರ ಪೂರ್ವಭಾವಿ ಸಭೆಯು ಇತ್ತೀಚೆಗೆ ಯಶಸ್ವಿಯಾಗಿ ಜರುಗಿತು. ಖೇಡಸಂಗಮದ ನೀಲಾಂಬಿಕಾ ಆಶ್ರಮದ ಮಹಾದೇವಮ್ಮ ತಾಯಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕಾರ್ಯಕ್ರಮದ ಯಶಸ್ವಿಗಾಗಿ ವಿವಿಧ ರೂಪುರೇಷೆಗಳನ್ನು ಸಿದ್ಧಪಡಿಸಲಾಯಿತು.

ಈ ಸಮಾರಂಭದಲ್ಲಿ ಖೇಡ ಸಂಗಮ ಗ್ರಾಮದ ಚನ್ನಬಸವ ಗುರುಕುಲ ಹಿರಿಯ ಪ್ರಾಥಮಿಕ ಶಾಲೆಯ 75 ವಿದ್ಯಾರ್ಥಿಗಳನ್ನು ವಿಶೇಷವಾಗಿ ಸನ್ಮಾನಿಸಲಾಗುವುದು ಎಂದು ನೀಲಕಂಠ ಬಿರಾದಾರ



ಅವರು ತಿಳಿಸಿದರು.

ಸಾಂಸ್ಕೃತಿಕ ವೈಭವ: ಕಾರ್ಯಕ್ರಮದ ಅಂಗವಾಗಿ ಭವ್ಯ ಮೆರವಣಿಗೆ, ಕೋಲಾಟ ಹಾಗೂ ಅಕ್ಕನ ಬಳಗದ ಭಜನಾ ತಂಡಗಳಿಂದ ಭಜನಾ ಕಾರ್ಯಕ್ರಮಗಳು ಜರುಗಲಿವೆ.

ಗ್ರಾಮಸ್ಥರ ಭಾಗಿ: ಸಂಗಮ ಗ್ರಾಮದ ಸುತ್ತಮುತ್ತಲಿನ ಡೋಣಗಾಪುರ, ಬಳತ(ಬಿ), ಠಾಣಾಕುಶನೂರ್, ಹೊಳಸಮುದ್ರ, ಲವಿನಗಾಂವ ಹಾಗೂ ಖೇಡ ಗ್ರಾಮಗಳ ಗ್ರಾಮಸ್ಥರು ಈ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ಪೂರ್ವಭಾವಿ ಸಭೆಯಲ್ಲಿ ಮಲ್ಲಿಕಾರ್ಜುನ ದುಬಲಗುಂಡೆ, ಸಂಜುಕುಮಾರ ಮೆಂಗಾ, ಅನಿಲ ಹೊಳಸಂಬ್ರೆ, ಓಂಪ್ರಕಾಶ ಬಿರಾದಾರ, ಜೈಹಿಂದ್ ನಾಗಶಂಕರೇ, ಸಂಗಮೇಶ ಸರಬಾರೆ, ರಶೀದಮಿಯ್ಯಾ ದೇಶಮುಖ ಸೇರಿದಂತೆ ಗ್ರಾಮದ ಪ್ರಮುಖರು ಹಾಗೂ ಹಿರಿಯರು ಉಪಸ್ಥಿತರಿದ್ದರು.

ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಮತ್ತು ಸಾರ್ವಜನಿಕರು ಆಗಮಿಸಬೇಕೆಂದು ಸಂಘಟಕರು ಮನವಿ ಮಾಡಿದ್ದಾರೆ.

# ಬುದ್ಧ ತಿದ್ದಲಾರದ ಹೃದಯಗಳನ್ನು ತಿದ್ದಿದ ಮಹಾನುಭಾವ



ಬುದ್ಧ-ಬೆಳಕು

● ಭಾಗ್ಯಶ್ರೀ ಜೋಶಿ
ಹುಬ್ಬಳ್ಳಿ



ಬುದ್ಧ ಪೂರ್ಣಿಮಾ ಭಾರತದ ಪ್ರಮುಖ ಧಾರ್ಮಿಕ ಹಬ್ಬಗಳಲ್ಲಿ ಒಂದಾಗಿದೆ. ಇದು ಗೌತಮ ಬುದ್ಧ ಅವರ ಜನನ, ಜ್ಞಾನೋದಯ (ಬೋಧಿ) ಮತ್ತು ಮಹಾಪರಿನಿರ್ವಾಣ ಮೂರು ಘಟನೆಗಳನ್ನು ಸ್ಮರಿಸುವ ಪವಿತ್ರ ದಿನವಾಗಿದೆ. ಈ ಹಬ್ಬವನ್ನು ವೈಶಾಖ ಮಾಸದ ಪೂರ್ಣಿಮೆಯಂದು ಆಚರಿಸಲಾಗುತ್ತದೆ.

ಗೌತಮ ಬುದ್ಧರು ಕ್ರಿ.ಪೂ. 6ನೇ ಶತಮಾನದಲ್ಲಿ ಲುಂಬಿನಿ ಎಂಬ ಸ್ಥಳದಲ್ಲಿ ಜನಿಸಿದರು. ಅವರು ಮಾನವ ಜೀವನದ ದುಃಖಗಳಿಗೆ ಪರಿಹಾರ ಕಂಡುಕೊಳ್ಳಲು ತಪಸ್ಸು ಮಾಡಿ ಬೋಧಗಯದಲ್ಲಿ ಜ್ಞಾನೋದಯವನ್ನು ಪಡೆದರು. ಅವರ ಉಪದೇಶಗಳು ಅಹಿಂಸೆ, ಸತ್ಯ, ದಯೆ ಮತ್ತು ಸಮಾನತೆ ಎಂಬ ಮೌಲ್ಯಗಳ ಮೇಲೆ ಆಧಾರಿತವಾಗಿವೆ.

ಬುದ್ಧ ಪೂರ್ಣಿಮೆಯಂದು ಬೌದ್ಧ ಧರ್ಮದ ಅನುಯಾಯಿಗಳು ದೇವಸ್ಥಾನಗಳಿಗೆ ಭೇಟಿ ನೀಡಿ ಪೂಜೆಗಳನ್ನು ಸಲ್ಲಿಸುತ್ತಾರೆ. ಧರ್ಮೋಪದೇಶಗಳನ್ನು ಕೇಳುವುದು, ಧ್ಯಾನ ಮಾಡುವುದು ಮತ್ತು ದಾನಧರ್ಮಗಳಲ್ಲಿ ತೊಡಗುವುದು ಈ ದಿನದ ಪ್ರಮುಖ ಆಚರಣೆಗಳಾಗಿವೆ. ಕೆಲವರು ಬುದ್ಧರ ಜೀವನದ ಕುರಿತು ಪಾಠಗಳನ್ನು ಓದಿ, ಶಾಂತಿ ಮತ್ತು ಮಾನವೀಯತೆಯ ಸಂದೇಶವನ್ನು ಹರಡುತ್ತಾರೆ.

ಈ ಹಬ್ಬವು ಕೇವಲ ಧಾರ್ಮಿಕ ಆಚರಣೆಯಷ್ಟೇ ಅಲ್ಲ, ಮಾನವೀಯ ಮೌಲ್ಯಗಳನ್ನು ಉತ್ತೇಜಿಸುವ ದಿನವೂ ಆಗಿದೆ. ಬುದ್ಧನ ಸಂದೇಶಗಳು ಇಂದಿನ ಸಮಾಜದಲ್ಲಿಯೂ ಬಹಳ ಪ್ರಸ್ತುತವಾಗಿದ್ದು, ಶಾಂತಿ ಮತ್ತು ಸಹಾನುಭೂತಿಯ ಜೀವನಕ್ಕೆ ದಾರಿ ತೋರಿಸುತ್ತವೆ.

ಒಟ್ಟಿನಲ್ಲಿ, ಬುದ್ಧ ಪೂರ್ಣಿಮಾ ನಮ್ಮ ಜೀವನದಲ್ಲಿ ಶಾಂತಿ, ಸೌಹಾರ್ದತೆ ಮತ್ತು ನೈತಿಕ ಮೌಲ್ಯಗಳನ್ನು ಬೆಳೆಸುವ ಮಹತ್ವದ ದಿನವಾಗಿದೆ. ಜಗತ್ತಿಗೆ ಕರುಣೆಯ ಸಾಕ್ಷಾತ್ಕಾರಗಳಿಸಿದ ಬುದ್ಧ. ಪ್ರೀತಿಯೇ ಸಂತೋಷದ ಸೆಲೆ, ಪ್ರೀತಿಯೇ ಜಗತ್ತಿನ ಬೆಳಕು ಮತ್ತು ಪ್ರೀತಿಯೇ ಎಲ್ಲಕ್ಕಿಂತ ದೊಡ್ಡ ಶಕ್ತಿ ಎಂಬ ಬುದ್ಧನ ಬೋಧನೆಗಳು ಇಂದಿನ ಆಧುನಿಕ ಜಗತ್ತಿ ಗೂ ಅತ್ಯಂತ ಅಗತ್ಯವಾಗಿವೆ. ಈ ಜಗತ್ತಿನಾದ್ಯಂತ ಪ್ರೀತಿ ಮತ್ತು ಶಾಂತಿ ಸದಾ ಚಿರಸ್ಥಾಯಿಯಾಗಲಿ.

# ಅದ್ದೂರಿ ಬುದ್ಧ ಪೂರ್ಣಿಮೆ ಕಾರ್ಯಕ್ರಮ



**ಹುಮನಾಬಾದ:** ನಗರದ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಶುಕ್ರವಾರ ಬುದ್ಧ ಪೂರ್ಣಿಮೆ ಕಾರ್ಯಕ್ರಮ ಅದ್ದೂರಿಯಾಗಿ ಜರುಗಿತು.

ಈ ಸಂದರ್ಭದಲ್ಲಿ ಮಾಜಿ ಸಚಿವರಾದ ರಾಜಶೇಖರ ಪಾಟೀಲ್, ವಿಧಾನ ಪರಿಷತ್ ಸದಸ್ಯರಾದ ಡಾ. ಚಂದ್ರಶೇಖರ ಪಾಟೀಲ್, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷರಾದ ಅಭಿಷೇಕ ಪಾಟೀಲ್, ಯುವ ಕಾಂಗ್ರೆಸ್ ಅಧ್ಯಕ್ಷರಾದ ಉಮೇಶ ಜಮಗಿ, ಜಿಪಂ. ಮಾಜಿ ಉಪಾಧ್ಯಕ್ಷರಾದ ಲಕ್ಷ್ಮಣರಾವ ಬುಳ್ಳಾ, ಧರ್ಮ ಪ್ರಚಾರಕ ಧರ್ಮರಾಯ ಘಾಂಗ್ರೆ, ದತ್ತಕುಮಾರ ಚಿದ್ರಿ, ಲಕ್ಷ್ಮಿಪುತ್ರ ಮಾಳಗೆ, ಮಲ್ಲಿಕಾರ್ಜುನ ಮಹೇಂದ್ರಕರ್, ರಾಜದೀಪ ಜಾಬಾ, ದತ್ತು ಲದ್ದಿ, ಶಿವಾನಂದ ಕಟ್ಟಿಮನಿ, ಧರ್ಮರೆಡ್ಡಿ, ಶ್ರೀಧರ ಹಿರೇಮನಿ ಸೇರಿದಂತೆ ಅನೇಕರಿದ್ದರು.

# ಬುದ್ಧ ಜಯಂತಿ ಆಚರಣೆ



**ವಿಜಯಪುರ:** ನಗರದ ಬೌದ್ಧ ವಿಹಾರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಭಗವಾನ್ ಬುದ್ಧ ಜಯಂತಿ ಆಚರಿಸಲಾಯಿತು.

ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅಪರ ಜಿಲ್ಲಾಧಿಕಾರಿ ಔದ್ರಾಮ ಅವರು ಮಾತನಾಡಿ. ಬುದ್ಧನು ಜಗತ್ತಿಗೆ ಜ್ಞಾನದ ಬೆಳಕು ನೀಡುವ ಮೂಲಕ ಸಂದೇಶ ಸಾರಿದ್ದಾರೆ ಎಂದು ಹೇಳಿದರು. ಇನ್ನೂ ವಿಶೇಷವಾಗಿ ಉಪನ್ಯಾಸಕರಾಗಿ ಆಗಮಿಸಿದ ಸುಜಾತಾ ಚಲವಾದಿ ಅವರು ಮಾತನಾಡಿ ಬುದ್ಧನು ಕೇವಲ ಭಾರತಕ್ಕೆ ಅಷ್ಟೇ ಅಲ್ಲ ಇಡೀ ವಿಶ್ವಕ್ಕೆ ವಿಶ್ವಗುರುವಾಗಿ ಹೊಮ್ಮಿದ್ದಾರೆ , ಅವರ ತತ್ವ ಸಿದ್ಧಾಂತಗಳ ಮೂಲಕ ಮನಕುಲ ಸಾಗಬೇಕಾಗಿದೆ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಬೌದ್ಧ ವಿಹಾರ್ ಸಮಿತಿ ಅಧ್ಯಕ್ಷರಾದ ರಾಜಶೇಖರ್ ಎಡಳ್ಳಿ ಅವರು ಸೇರಿದಂತೆ ಉಪಾಸಕ ಉಪಾಸಕಿಯರು ಉಪಸ್ಥಿತರಿದ್ದರು.

# ರೈತರಿಗೆ ಗುಣಮಟ್ಟದ ಸಸಿ ನೀಡಲು ಖಂಡ್ರೆ ಆದೇಶ

• ಮಲ್ಲಮ್ಮ ನುಡಿ ವಾರ್ತೆ ಮದ್ದೂರು



ಜಾಗತಿಕ ತಾಪಮಾನ ಏರಿಕೆಗೆ ವೃಕ್ಷ ಸಂವರ್ಧನೆ, ಸಂರಕ್ಷಣೆಯೇ ಮಾರ್ಗವಾಗಿದ್ದು, ಹಸಿರು ಹೊದಿಕೆ ಹೆಚ್ಚಿಸುವಂತೆ ಮತ್ತು ಮಂಡ್ಯ ನಗರದ ರಸ್ತೆ ಬದಿಯ ಮರಗಳ ಸಮೀಕ್ಷೆ ನಡೆಸುವಂತೆ ಅರಣ್ಯ, ಜೀವಿಶಾಸ್ತ್ರ ಮತ್ತ ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರ.

ಮಂಡ್ಯ ಜಿಲ್ಲೆ ಮದ್ದೂರಿನಲ್ಲಿಂದು ಜಿಲ್ಲಾ ಅರಣ್ಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಮಂಡ್ಯದ 7 ವಲಯಗಳಲ್ಲಿರುವ ನರ್ಸರಿಗಳಲ್ಲಿ ತೇಗ, ಶ್ರೀಗಂಧ, ಹೊನ್ನೆ ಇತ್ಯಾದಿ ಗುಣಮಟ್ಟದ ಸಸಿಗಳನ್ನು ಬೆಳೆಸಿ ರೈತರಿಗೆ ವಿತರಿಸುವಂತೆ ಮತ್ತು ವಿತರಿಸಿದ ಸಸಿಗಳ ಪೈಕಿ ಎಷ್ಟು ಬದುಕುಳಿದಿವೆ ಎಂಬ ಬಗ್ಗೆ ಸಮೀಕ್ಷೆ ನಡೆಸುವಂತೆಯೂ ತಿಳಿಸಿದರು.

ಜಿಲ್ಲೆಯ ಹಲವೆಡೆ ಚಿರತೆಗಳ ಸಮಸ್ಯೆಯ ಪರಿಹಾರಕ್ಕೆ ತತ್ ಕ್ಷಣವೇ ಕ್ರಮ ವಹಿಸುವಂತೆ ತಿಳಿಸಿದ ಅವರು, ಕಾಡಿನಂಚಿನ ಗ್ರಾಮದ ಜನರೊಂದಿಗೆ ಸೌಹಾರ್ದ ಸಂಬಂಧ ಬೆಳೆಸಿಕೊಂಡರೆ, ಕಾಡ್ಗಿಚ್ಚು, ಕಳ್ಳಬೇಟೆ, ಅಕ್ರಮ ಮರ ಕಡಿತಲೆಯಂತಹ ಅಪರಾಧಗಳ ಬಗ್ಗೆ ತಕ್ಷಣದ ಮಾಹಿತಿ ಲಭಿಸುತ್ತದೆ, ವನ ಮತ್ತು ವನ್ಯಜೀವಿ ಸಂರಕ್ಷಣೆಯನ್ನು ಪರಿಣಾಮಕಾರಿಯಾಗಿ ಮಾಡಲು ಸಾಧ್ಯವಾಗುತ್ತದೆ ಎಂದರು.

**ಜಿಯೋ ಟ್ಯಾಗ್ ಮಾಡಲು ಸೂಚನೆ:**

ಅರಣ್ಯ, ಕಾಡಿನಂಚಿನಲ್ಲಿರುವ ಪಟ್ಟಾ ಜಮೀನು, ಸರ್ಕಾರಿ ಜಾಗದಲ್ಲಿ ಬೆಳೆದಿರುವ ಶ್ರೀಗಂಧ, ರಕ್ತ ಚಂದನ, ಬೀಟೆ ಮತ್ತು ತೇಗದ ಮರಗಳ ಜಿಯೋ ಟ್ಯಾಗ್ ಮಾಡುವ ಮೂಲಕ ಯಾವುದೇ ಬೆಲೆ ಬಾಳುವ ವೃಕ್ಷ ಕಳುವಾಗದಂತೆ ಸಂರಕ್ಷಿಸಲು ಅರಣ್ಯ ಸಚಿವರು ಸೂಚನೆ ನೀಡಿದರು.

**ಮಂಡ್ಯದಲ್ಲಿ ಮರ ಸಮೀಕ್ಷೆಗೆ ಆದೇಶ:**

ಮಂಡ್ಯ ನಗರದಲ್ಲಿ ಮನೆಯ ಮುಂದೆ, ರಸ್ತೆಯ ಬದಿಯಲ್ಲಿ ಬೆಳೆದ ಮರಗಳನ್ನು ಅಕ್ರಮವಾಗಿ ಕಡಿಯಲಾಗುತ್ತಿದೆ ಎಂಬ ಆರೋಪಗಳಿದ್ದು, ಮರಗಳ ಗಣತಿ ನಡೆಸಲು ಮತ್ತು ಅಕ್ರಮವಾಗಿ ಮರ ಕಡಿತಲೆ ಆಗದಂತೆ ಕ್ರಮ ವಹಿಸಲು ಸೂಚಿಸಿದರು.

ಜಿಲ್ಲೆಯಲ್ಲಿ ಕರ್ನಾಟಕ ಅರಣ್ಯ ಕಾಯಿದೆ ಅಡಿ ಸೆಕ್ಷನ್ 4ರ ಪ್ರಾಥಮಿಕ ಅಧಿಸೂಚನೆ ಆಗಿ ವರ್ಷಗಳೇ ಕಳೆದಿದ್ದರೂ ಸೆಕ್ಷನ್ 17 ಅಡಿಯಲ್ಲಿ ಅರಣ್ಯ ಎಂದು ಘೋಷಣೆ ಆಗಿಲ್ಲ. ಎಲ್ಲೆಲ್ಲಿ ಅರಣ್ಯ ವ್ಯವಸ್ಥಾಪನಾಧಿಕಾರಿ (ಎಫ್.ಎಸ್.ಓ.) ಇಲ್ಲವೋ ಅಲ್ಲಿಗೆ ಪ್ರಸ್ತಾವನೆ ಸಲ್ಲಿಸಿದರೆ ಅಧಿಕಾರಿಗಳನ್ನು ನೇಮಕ ಮಾಡುವುದಾಗಿ ತಿಳಿಸಿದರು. ಅದೇ ರೀತಿ ಜಿಲ್ಲೆಯಲ್ಲಿ 2 ಸಾವಿರಕ್ಕೂ ಹೆಚ್ಚು ಎಕರೆ ಅರಣ್ಯ ಭೂಮಿ ಒತ್ತುವರಿಯಾಗಿದ್ದು, ಪಟ್ಟಾ ಜಮೀನೂ ಸೇರಿ 3 ಎಕರೆಗಿಂತ ಕಡಿಮೆ ಒತ್ತುವರಿ ಹೊರತು ಪಡೆಸಿ, ಉಳಿದ ಎಲ್ಲ ಒತ್ತುವರಿ ಹಾಗೂ 2015ರ ನಂತರದ ಅರಣ್ಯ ಒತ್ತುವರಿ ತೆರವುಗೊಳಿಸಲು ಆದೇಶ ನೀಡಿದರು.

ಆನೆ–ಮಾನವ ಸಂಘರ್ಷ ನಿಯಂತ್ರಿಸಲು ಈ ತಿಂಗಳಲ್ಲೇ ರೈಲ್ವೆ ಬ್ಯಾರಿಕೇಡ್ ಮತ್ತು ಆನೆ ಕಂದಕ ಹಾಗೂ ಸೌರಬೇಲಿ ಕುರಿತಂತೆ ಸಭೆ ನಡೆಸುವುದಾಗಿಯೂ ಈಶ್ವರ ಖಂಡ್ರೆ ತಿಳಿಸಿದರು.

ಸಭೆಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ ರಘು, ಪ್ರಭುಗೌಡ ಪಾಟೀಲ್ ಸೇರಿದಂತೆ ಹಲವು ಅಧಿಕಾರಿಗಳು ಉಪಸ್ಥಿತರಿದ್ದರು.

# ಚಿಕ್ಕಬಳ್ಳಾಪುರದಲ್ಲಿ ಸರೋವರ ರೆಸಾರ್ಟ್




• ಮಲ್ಲಮ್ಮ ನುಡಿ ವಾರ್ತೆ ಚಿಕ್ಕಬಳ್ಳಾಪುರ

ನಗರದ ಹೊರವಲಯದಲ್ಲಿ ಅಂಕಣಗೊಂದಿ ಸಮೀಪ ನೂತನವಾಗಿ ನಿರ್ಮಾಣಗೊಂಡಿರುವ "ಸರೋವರ ರೆಸಾರ್ಟ್" ಬುಧವಾರ ಭರ್ಜರಿಯಾಗಿ ಶುಭಾರಂಭಗೊಂಡಿತು. ನಗರಸಭೆಯ ಮಾಜಿ ಉಪಾಧ್ಯಕ್ಷ ಜೆ.ನಾಗರಾಜ್ ಅವರ ಮಾಲೀಕತ್ವದ ಈ ರೆಸಾರ್ಟ್, ಇಷಾ ಫೌಂಡೇಶನ್ ಸಮೀಪದಲ್ಲಿರುವುದರಿಂದ ಪ್ರವಾಸಿಗರಿಗೆ ಆಕರ್ಷಕ ತಾಣವಾಗಲಿದೆ. ಬಿಡುವಿನ ದಿನಗಳಲ್ಲಿ ಚಿಕ್ಕಬಳ್ಳಾಪುರಕ್ಕೆ ಆಗಮಿಸುವ ಪ್ರವಾಸಿಗರು ಹಾಗೂ ವಿವಿಧ ಶುಭ ಸಮಾರಂಭಗಳನ್ನು ಆಯೋಜಿಸಲು ಈ ರೆಸಾರ್ಟ್ ಉತ್ತಮ ಆಯ್ಕೆಯಾಗಲಿದೆ ಎಂದು ಮಾಲೀಕ ಜೆ. ನಾಗರಾಜ್ ತಿಳಿಸಿದ್ದಾರೆ. ಶುಭಾರಂಭ ಕಾರ್ಯಕ್ರಮದಲ್ಲಿ ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ಸಮಾಜಸೇವಕರು, ನಾಗರಾಜ್ ಅವರ ವಾರ್ಡ್ ನಿವಾಸಿಗಳು ಹಾಗೂ ಸ್ನೇಹಿತರು ಭಾಗವಹಿಸಿ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಜೆ.ನಾಗರಾಜ್, ಇಷಾ ಫೌಂಡೇಶನ್ ಸಮೀಪದಲ್ಲಿ ಸುಸಜ್ಜಿತ ಕಟ್ಟಡವನ್ನು ನಿರ್ಮಿಸಲಾಗಿದ್ದು, ಇಲ್ಲಿ ತಂಗಲು ಉತ್ತಮ ವಾತಾವರಣದೊಂದಿಗೆ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗಿದೆ ಎಂದರು. ಹುಟ್ಟುಹಬ್ಬ ಸೇರಿದಂತೆ ವಿವಿಧ ಕಾರ್ಯಕ್ರಮಗಳು ಮತ್ತು ಇವೆಂಟ್ಸ್‌ಗಳನ್ನು ಇಲ್ಲಿ ಆಯೋಜಿಸಲು ಅವಕಾಶವಿದ್ದು, ರೆಸಾರ್ಟ್‌ನಲ್ಲಿ ಎಸಿ ಸೇರಿದಂತೆ ಎಲ್ಲಾ ಸೌಲಭ್ಯಗಳಿರುವ ಏಳು ಕೋಣೆಗಳು ಲಭ್ಯವಿವೆ ಎಂದು ಹೇಳಿದರು.

# ಕಾರ್ಮಿಕರಿಗೆ ಟೂಲ್ ಕಿಟ್ ವಿತರಣೆ



• ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ

ನಗರದ ಶ್ರೀ ಸೇವಾಲಾಲ್ ಸರ್ಕಲ್ ನಲ್ಲಿ ಇಂದು ಶ್ರೀ ಸೇವಾಲಾಲ್ ಮಹಾರಾಜ್ ಕಟ್ಟಡ ಕಾರ್ಮಿಕರ ಸಂಘ (ರಿ) ವತಿಯಿಂದ "ವಿಶ್ವಕಾರ್ಮಿಕ ದಿನಾಚರಣೆಯನ್ನು" ಅತ್ಯಂತ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಈ ಕಾರ್ಯಕ್ರಮದ ಆರಂಭದಲ್ಲಿ ಶ್ರೀ ಸೇವಾಲಾಲ್ ಮಹಾರಾಜರು ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ವಿಶೇಷ ಪೂಜೆ ಸಲ್ಲಿಸಲಾಯಿತು. ನಂತರ ಕಾರ್ಮಿಕರ ಕಾಯಕ–ಕ್ಕೆ ಬೆಂಬಲ ನೀಡುವ ಉದ್ದೇಶದಿಂದ ಕಾರ್ಮಿಕ ಮಂಡಳಿ ಹಾಗೂ ಸಂಘದ ಸಹಯೋಗದೊಂದಿಗೆ ಅರ್ಹ ಕಟ್ಟಡ ಕಾರ್ಮಿಕರಿಗೆ ಉಚಿತವಾಗಿ ಟೂಲ್ ಕಿಟ್ ಗಳನ್ನು ವಿತರಿಸಲಾಯಿತು.

ಸಂಘದ ಅಧ್ಯಕ್ಷರಾದ ಪಾಂಡು ನಾಯ್ಕ್ ಮೇಸ್ತ್ರಿ ಕಾರ್ಮಿಕರನ್ನು ಉದ್ದೇಶಿಸಿ "ದೇಶದ ಪ್ರಗತಿಯಲ್ಲಿ ಕಾರ್ಮಿಕರ ಪಾತ್ರ ಬಹಳ ದೊಡ್ಡದು. ಶ್ರಮಿಕ ವರ್ಗದವರ ಕಲ್ಯಾಣಕ್ಕಾಗಿ ನಮ್ಮ ಸಂಘವು ಸದಾ ಶ್ರಮಿಸುತ್ತದೆ. ಕಾರ್ಮಿಕರ ಹಿತರಕ್ಷಣೆ ಮತ್ತು ಒಗ್ಗಟ್ಟಿನ ಬಗ್ಗೆ ಮಾತನಾಡಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಎಲ್ಲಾ ಕಾರ್ಮಿಕರಿಗೆ ಸಿಹಿ ವಿತರಿಸಿ ಶುಭಾಶಯ ಕೋರಲಾಯಿತು.

ಶ್ರೀ ಸೇವಾಲಾಲ್ ಮಹಾರಾಜ ಕಟ್ಟಡ ಕಾರ್ಮಿಕ ಸಂಘದ ವೆಂಕಟೇಶ್ ಮೇಸ್ತ್ರಿ, ಹನುಮಂತ ಮೇಸ್ತ್ರಿ, ದಾವಲ್ ಸಾಬ್ ಮೇಸ್ತ್ರಿ, ಸೇಟು ಮೇಸ್ತ್ರಿ ವೆಂಕಣ್ಣ, ಕೃಷ್ಣ ನಾಯ್ಕ ಮೇಸ್ತ್ರಿ ರವಿಚಂದ್ರ ಮೇಸ್ತ್ರಿ, ವೆಂಕಟೇಶ ಸಂಘದ ಸದಸ್ಯರು ಇನ್ನಿತರರು ಉಪಸ್ಥಿತರಿದ್ದರು.

# ಬಡವರ ಪಾಲಿನ ದೇವರಾದ ಭೀಮರಾವ ಕಮ್ಮಾ

• ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ



ಸಮಾಜ ಸೇವೆಯ ಮೂಲಕ ಜನಮನಗಳಲ್ಲಿ ಅಳಿಯದ ಗುರುತು ಮೂಡಿಸಿದ ಭೀಮರಾವ ನಾರಾಯಣರಾವ ಕಮ್ಮಾ ಅವರು ಬಡವರ ಪಾಲಿನ ದೇವರಂತೆ ಗೌರವಿಸಲ್ಪಟ್ಟ ವ್ಯಕ್ತಿಯಾಗಿದ್ದರು. ಬಸವಕಲ್ಯಾಣ ತಾಲೋಕಿನ ಹಣಮಂತವಾಡಿ (ಆರ್ ) ಗ್ರಾಮದವರಾದ ಅವರು ಸರಳ ಜೀವನಶೈಲಿ, ಸಹಾನುಭೂತಿ ಮತ್ತು ಜನಪರ ಚಿಂತನೆಗಳಿಂದ ಅವರು ಸಮಾಜದಲ್ಲಿ ವಿಶಿಷ್ಟಸ್ಥಾನವನ್ನು ಪಡೆದಿದ್ದರು.

ಭೀಮರಾವ ಕಮ್ಮಾ ಅವರು ತಮ್ಮ ಜೀವನವನ್ನೇ ಬಡವರು, ಹಿಂದುಳಿದವರು ಮತ್ತು ಸಂಕಷ್ಟದಲ್ಲಿದ್ದವರ ಸೇವೆಗೆ ಮೀಸಲಿಟ್ಟಿದ್ದರು. ಆರ್ಥಿಕವಾಗಿ ದುರ್ಬಲರಿಗೆ ನೆರವು, ವಿದ್ಯಾರ್ಥಿಗಳಿಗೆ ಶಿಕ್ಷಣ ಸಹಾಯ, ಅನಾರೋಗ್ಯದಿಂದ ಬಳಲುವವರಿಗೆ ವೈದ್ಯಕೀಯ ನೆರವು ನೀಡುವ ಮೂಲಕ ಸಾವಿರಾರು ಜನರ ಬದುಕಿನಲ್ಲಿ ಬೆಳಕಾಗಿದ್ದರು.

ಗ್ರಾಮೀಣ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯನ್ನು ಮನಗಂಡು, ಕುಡಿಯುವ ನೀರು, ರಸ್ತೆ, ವಿದ್ಯುತ್ ಸೇರಿದಂತೆ ವಿವಿಧ ಅಭಿವೃದ್ಧಿ ಕಾರ್ಯಗಳಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಂಡಿದ್ದರು. ಅವರ ಸೇವಾ ಮನೋಭಾವದಿಂದ ಅನೇಕ ಕುಟುಂಬಗಳು ಸಂಕಷ್ಟದಿಂದ ಹೊರಬಂದಿವೆ ಎಂಬುದು ಸ್ಥಳೀಯರ ಅಭಿಪ್ರಾಯ.

ಯಾವುದೇ ಪ್ರತಿಫಲದ ನಿರೀಕ್ಷೆಯಿಲ್ಲದೆ ಜನಸೇವೆ ಮಾಡಿದ ಭೀಮರಾವ ಕಮ್ಮಾ ಅವರು, "ಮಾನವ ಸೇವೆಯೇ ಮಹಾ ಸೇವೆ" ಎಂಬ ಮೌಲ್ಯವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರು. ಅವರ ಸರಳತೆ, ಪ್ರಾಮಾಣಿಕತೆ ಮತ್ತು ನಿಷ್ಠೆ ಇಂದಿಗೂ ಯುವಕರಿಗೆ ಪ್ರೇರಣೆಯಾಗಿದೆ.

ಇಂದು ಅವರಂತಹ ಸಮಾಜಮುಖಿ ನಾಯಕರು ಸಮಾಜಕ್ಕೆ ಅತ್ಯಂತ ಅಗತ್ಯವೆಂದು ಸಾರ್ವಜನಿಕರು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ. ಭೀಮರಾವ ಕಮ್ಮಾ ಅವರ ಸೇವಾ ಕಾರ್ಯಗಳು ಸದಾ ಸ್ಮರಣೀಯವಾಗಿದ್ದು, ಅವರ ಆದರ್ಶಗಳು ಮುಂದಿನ ಪೀಳಿಗೆಗೆ ದಾರಿದೀಪವಾಗಿವೆ.

# ಗಾಳಿಯಲ್ಲಿ ತೂರಿ ಬಂದ ಪತ್ರ (ಒಂದು ಸಾಲಿನ ಪಾಠ)



ಕಥಾ ಪ್ರಪಂಚ

● ವೀರಣ್ಣ ಕಲಕೇರಿ
ಸಾಹಿತಿ, ಕೆಂಭಾವಿ

ಆನಂದ್ ಪದವಿ ಓದುತ್ತಿರುವ ವಿದ್ಯಾರ್ಥಿ. ಅವನಿಗೆ ಎಂಟನೇ ತರಗತಿಯಲ್ಲಿರುವ ಒಬ್ಬ ತಮ್ಮನಿದ್ದ. ತಂದೆಯಿಲ್ಲದ ಆ ಮನೆಯಲ್ಲಿ ತಾಯಿ ಒಬ್ಬಳೇ ಕಷ್ಟಪಟ್ಟು ದುಡಿದು ಇಬ್ಬರು ಮಕ್ಕಳನ್ನು ಓದಿಸುತ್ತಿದ್ದರು.


ಅಂದು ಸಂಜೆ ಆನಂದ್ ತನ್ನ ಕಾಲೇಜಿನ ಪರೀಕ್ಷಾ ಫೀಸ್ ಕಟ್ಟಲು ತಾಯಿಯಿಂದ ಪಡೆದಿದ್ದ 500 ರೂಪಾಯಿ ನೋಟನ್ನು ಜಾಗರೂಕತೆಯಿಂದ ತನ್ನ ನೋಟ್‌ಬುಕ್‌ನಲ್ಲಿ ಇಟ್ಟು, ಮನೆಯ ಒಂದು ಕೋಣೆಯಲ್ಲಿ ತಮ್ಮನಾದ ಅವಿನಾಶ ಜೊತೆ ಅಭ್ಯಾಸ ಮಾಡಿ ಮಲಗಿದ್ದ. ಮರುದಿನ ಬೆಳಿಗ್ಗೆ ಎದ್ದು ಇಬ್ಬರೂ ಯಥಾಪ್ರಕಾರ ಶಾಲೆ–ಕಾಲೇಜಿಗೆ ಹೋದರು. ಕಾಲೇಜಿನಲ್ಲಿ ಫೀಸ್ ಕಟ್ಟಲು ಆನಂದ್ ಪುಸ್ತಕ ತೆಗೆದು ನೋಡಿದಾಗ ಅಲ್ಲಿ ಅಮ್ಮ ಕೊಟ್ಟ 500 ರೂಪಾಯಿ ನೋಟು ಇರಲಿಲ್ಲ! ಆನಂದನಿಗೆ ದೊಡ್ಡ ಆಘಾತವಾಯಿತು. ತಾಯಿ ಅಷ್ಟೊಂದು ಕಷ್ಟಪಟ್ಟು ಕೊಟ್ಟ ಹಣ ಅದು. ತಕ್ಷಣ ಅವನಿಗೆ ರಾತ್ರಿಯ ಘಟನೆ ನೆನಪಾಯಿತು.

ಹಿಂದಿನ ದಿನ ಸಂಜೆ ಕಾಲೇಜ್ ಫೀಸ್ ಗಾಗಿ ತಾಯಿ ತನಗೆ ಹಣ ಕೊಡುವಾಗ ಆತನ ತಮ್ಮನೂ ಅಮ್ಮನಲ್ಲಿ 50 ರೂಪಾಯಿ ಕೇಳಿ ಅಡ್ಡಿ ತೆಗೆದಿದ್ದ, ಆಗ ತಾಯಿ ಅವನಿಗೆ ಬೈದು ಹಣ ಕೊಟ್ಟಿರಲಿಲ್ಲ. ಆ ಮುನಿಸಿನಿಂದ ತಮ್ಮನೇ ಹಣ ಕದ್ದಿರಬೇಕು ಎಂಬ ನಿರ್ಧಾರಕ್ಕೆ ಆನಂದ್ ಬಂದನು. ಇಬ್ಬರ ಶಿಕ್ಷಣಕ್ಕೆ ಅಮ್ಮ ಕಷ್ಟಪಡುತ್ತಿರುವುದನ್ನು ಅರಿತ ಆತ, ತಮ್ಮನ ಮೇಲಿನ ವಿಪರೀತ ಕೋಪದೊಂದಿಗೆ ಆನಂದ್ ಮನೆಗೆ ವಾಪಸ್ ಬರತೊಡಗಿದ.

ಹೀಗೆ ಬರುವಾಗ ರಸ್ತೆಯಲ್ಲಿ ಒಂದು ಖಾಲಿ ಪತ್ರ ಗಾಳಿಗೆ ತೂರಿ ಬಂದು ಅವನ ಕಾಲಿಗೆ ತಾಗಿತು. ಕುತೂಹಲದಿಂದ ಎತ್ತಿ ನೋಡಿದಾಗ ಅದರಲ್ಲಿ ಕೇವಲ ಒಂದೇ ಸಾಲು ಬರೆಯಲಾಗಿತ್ತು: "ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು". ಆ ವಾಕ್ಯ ಕಂಡೊಡನೆ ಅವನ ಕೋಪ ಅರ್ಧಕ್ಕೆ ಇಳಿಯಿತು. ಮನೆಗೆ ಬಂದವನೇ ತಮ್ಮನ ಮೇಲೆ ಕಿರಿಚಾಡುವ ಬದಲು, ಸೀದಾ ಓದುವ ಕೋಣೆಗೆ ಹೋಗಿ ಕಳೆದುಕೊಂಡ ನೋಟು ಹುಡುಕಿದಾಗ ನೋಟು ಮಂಚದ ಕೆಳಗೆ ಬಿದ್ದಿತ್ತು! ರಾತ್ರಿ ಕರೆಂಟ್ ಹೋದಾಗ ಪುಸ್ತಕವನ್ನು ಬ್ಯಾಗ್‌ನಲ್ಲಿ ಇಡುವ ಗಡಿಬಿಡಿಯಲ್ಲಿ ಫ್ಯಾನ್ ಗಾಳಿಗೆ ನೋಟು ಹಾರಿ ಕೆಳಗೆ ಬಿದ್ದಿರಬೇಕು ಎಂದು ಅವನಿಗೆ ಅರಿವಾಯಿತು.

ಆ ಕ್ಷಣ ಆನಂದನಿಗೆ ತಮ್ಮನ ಮೇಲೆ ಪ್ರೀತಿ ಹೆಚ್ಚಾಯಿತು. ವಿನಾಕಾರಣ ತಮ್ಮನ ಮೇಲೆ ಸಂಶಯಿಸಿದ್ದಕ್ಕೆ ಅವನಿಗೆ ಪಶ್ಚಾತಾಪವಾಯಿತು. ಅಷ್ಟರಲ್ಲಿ ತಮ್ಮ ಶಾಲೆಯಿಂದ ಬಂದು, "ಅಣ್ಣಾ..." ಎಂದು ಪ್ರೀತಿಯಿಂದ ಕರೆದನು. ಆ ಕರೆಯಲ್ಲಿನ ತಮ್ಮನ ನಿಷ್ಕಲ್ಮಶತೆ ಕಂಡು ಆನಂದನಿಗೆ ಮತ್ತಷ್ಟು ಸಂಕೋಚವಾಯಿತು. ಅವನು ಸದ್ದಿಲ್ಲದೆ ತನ್ನ ತಮ್ಮನ ಬಳಿ ಹೋಗಿ ಅವನನ್ನು ಗಟ್ಟಿಯಾಗಿ ಅಪ್ಪಿಕೊಂಡನು. ಅಣ್ಣನ ಈ ದಿಢೀರ್ ಪ್ರೀತಿಯಿಂದ ಗಾಬರಿಯಾದ ತಮ್ಮ, "ಏನಾಯ್ತು ಅಣ್ಣಾ? ಯಾಕೆ ಹೀಗೆ ಮಾಡ್ತಿದ್ದೀಯಾ?" ಎಂದು ಅದೇ ಮುಗ್ಧತೆಯಲ್ಲಿ ಕೇಳಿದ.

ಆನಂದ್ ಏನೂ ಹೇಳದೆ, "ಏನಿಲ್ಲ ಕಣೋ... ಸುಮ್ಮನೆ. ನೀನು ಬೆಳಗ್ಗೆ ಅಮ್ಮನ ಹತ್ತಿರ ಹಣ ಕೇಳಿದ್ಯಲ್ಲ, ಅದಕ್ಕೆ ತಗೋ ಈ ಹತ್ತು ರೂಪಾಯಿ, ಚಾಕಲೇಟ್ ತಿನ್ನು" ಎಂದು ತನ್ನ ಜೇಬಿನಲ್ಲಿದ್ದ ರೂಪಾಯಿ ತೆಗೆದು ಅವನ ಕೈಗಿಟ್ಟನು. ತಮ್ಮನ ಮುಖದಲ್ಲಿ ನಗು ಅರಳಿತು. ಆನಂದ್ ಖುಶ್ ಆದ, ಕಿಟಕಿಯ ಹೊರಗೆ ನೋಡಿದ; ಆ ಬಿಳಿ ಕಾಗದದ ಮೇಲಿದ್ದ ಅಕ್ಷರಗಳು ಅವನ ಬದುಕಿನ ದೊಡ್ಡ ಪಾಠವಾಗಿ ಅವನ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿದಿದ್ದವು.



Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)